ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 12 ಬುಧವಾರ 2022

ಸಂಪುಟ: 43 | ಸಂಚಿಕೆ: 176 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಭಾರತದ ಮುಂದಿನ ಮುಖ್ಯ ನ್ಯಾಯಮೂರ್ತಿ ನ್ಯಾ.ಡಿ.ವೈ.ಚಂದ್ರಚೂಡ್

ಹೆಸರು ಶಿಫಾರಸು ಮಾಡಿದ ಸಿಜೆಐ ಯುಯು ಲಲಿತ್



ನವದೆಹಲಿ: ಭಾರತದ ಮುಖ್ಯ ನ್ಯಾಯಮೂರ್ತಿ ಉದಯ್ ಉಮೇಶ್ ಲಲಿತ್ ಅವರು ನ್ಯಾಯಮೂರ್ತಿ ಡಿವೈ ಚಂದ್ರಚೂಡ್ ಅವರ ಹೆಸರನ್ನು ತಮ್ಮ ಉತ್ತರಾಧಿಕಾರಿಯಾಗಿ ಶಿಫಾರಸು ಮಾಡಿದ್ದಾರೆ ಎಂದು ತಿಳಿದುಬಂದಿದೆ.

ಉನ್ನತ ನ್ಯಾಯಾಲಯದ ನ್ಯಾಯಾಧೀಶರು ನಡೆಸಿದ ಪೂರ್ಣ ನ್ಯಾಯಾಲಯದ ಸಭೆಯಲ್ಲಿ ಈ ಶಿಫಾರಸು ಮಾಡಲಾಗಿದೆ. ಸಿಜೆಐ ಉದಯ್ ಉಮೇಶ್ ಲಲಿತ್ ಅವರು ಇಂದು ಬೆಳಗ್ಗೆ 10.15ಕ್ಕೆ ತಮ್ಮ ಉತ್ತರಾಧಿಕಾರಿ ಹೆಸರಿನಲ್ಲಿ ಸರ್ಕಾರಕ್ಕೆ ಪತ್ರ ಕಳುಹಿಸಿದ್ದಾರೆ. ಇದರೊಂದಿಗೆ ನ್ಯಾಯಮೂರ್ತಿ ಚಂದ್ರಚೂಡ್ ಅವರು ನವೆಂಬರ್ 9 ರಂದು ಭಾರತದ 50ನೇ ಮುಖ್ಯ ನ್ಯಾಯಮೂರ್ತಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ ಮತ್ತು ಎರಡು ವರ್ಷಗಳ ಅಧಿಕಾರಾವಧಿಯನ್ನು ಹೊಂದಿರುತ್ತಾರೆ. ಈ ಹಿಂದೆ ಕಾನೂನು ಮತ್ತು ನ್ಯಾಯ ಸಚಿವಾಲಯವು ಮುಖ್ಯ ನ್ಯಾಯಮೂರ್ತಿ ಉದಯ್ ಉಮೇಶ್ ಲಲಿತ್ ಅವರಿಗೆ ಪತ್ರ ಬರೆದು ಹೊಸ ಸಿಜೆಐ ಹೆಸರನ್ನು ಶಿಫಾರಸು ಮಾಡಿ ನೇಮಕಾತಿಗೆ ಸಂಬಂಧಿಸಿದ ಜ್ಞಾಪಕ ಪತ್ರ ಪ್ರಕ್ರಿಯೆಯನ್ನು ಪ್ರಾರಂಭಿಸುವಂತೆ ಮನವಿ ಮಾಡಿತ್ತು.

ಗ್ರಾಪಂ ಜನಪ್ರತಿನಿಧಿಗಳ ಅಧಿಕಾರ ಮೊಟಕು

ತಿದ್ದುಪಡಿ ಕೈಬಿಡಲು ಸರ್ಕಾರ ನಿರ್ಧಾರ

ಗ್ರಾಪಂ ಅಧ್ಯಕ್ಷರು ಸೇರಿ ಸದಸ್ಯರ ಅಧಿಕಾರ ಕಡಿತಗೊಳಿಸದಿರಲು ಮುಖ್ಯಮಂತ್ರಿಗಳ ತೀರ್ಮಾನ; ಗೃಹ ಸಚಿವ ಆರಗ ಜ್ಞಾನೇಂದ್ರ ಮಾಹಿತಿ





ಮೈಸೂರು,ಅ.11(ಪಿಎಂ)–ಗ್ರಾಮ ಪಂಚಾಯಿತಿ ಜನಪ್ರತಿನಿಧಿಗಳ ಅಧಿಕಾರ ಮೊಟಕುಗೊಳಿಸುವಂತಹ ತಿದ್ದುಪಡಿ ಕೈಬಿಡಲು ಸರ್ಕಾರ ತೀರ್ಮಾನಿಸಿದೆ. ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು ಸೇರಿದಂತೆ ಸದಸ್ಯರ ಯಾವುದೇ ಅಧಿಕಾರ ಕಡಿತಗೊಳಿಸುವುದಿಲ್ಲವೆಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿ ರುವುದನ್ನು ಗೃಹ ಸಚಿವ ಆರಗ ಜ್ಞಾನೇಂದ್ರ ಮಂಗಳವಾರ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣಗಳಿಗೆ ತಿದ್ದುಪಡಿ ಮತ್ತು ಗ್ರಾಮ ಪಂಚಾಯಿತಿ ನೌಕರರ ಸೇವಾ ವಿಷಯಗಳ ಕುರಿತು ಗ್ರಾಮೀಣಾಭಿವೃದ್ಧಿ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಕಳೆದ ಆಗಸ್ಟ್‌ನಲ್ಲಿ ನಡೆದ ಸಭೆಯಲ್ಲಿ ನಡಾವಳಿಗಳನ್ನು ರೂಪಿಸಲಾಗಿತ್ತು. ನಡಾವಳಿಗಳ ಪೈಕಿ ಗ್ರಾಪಂ ಅಧ್ಯಕ್ಷರು ಹಾಗೂ ಸದಸ್ಯರ ಸಭೆಯ ಅಧಿಕಾರಕ್ಕೆ ಕತ್ತರಿ ಪ್ರಯೋಗಿಸಿದ್ದ ಅಂಶಗಳ ವಿರುದ್ಧ ರಾಜ್ಯಾದ್ಯಂತ ಗ್ರಾಪಂ ಸದಸ್ಯರಿಂದ ವಿರೋಧ ವ್ಯಕ್ತವಾಗಿತ್ತು. ಅಲ್ಲದೆ, ಸ್ಥಳೀಯ ಸಂಸ್ಥೆಗಳಿಂದ

▶ 8ನೇ ಪುಟಕ್ಕೆ

ಮುಖ್ಯಮಂತ್ರಿಗಳ ನಿರ್ಧಾರ ಸ್ವಾಗತಿಸಿದ ಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಡಾ.ಡಿ.ತಿಮ್ಮಯ್ಯ, ದಿನೇಶ್‌ಗೂಳಿಗೌಡ



ಮಂಜೇಗೌಡ ಡಾ.ಡಿ.ತಿಮ್ಮಯ್ಯ ದಿನೇಶ್‌ಗೂಳಿಗೌಡ

ಮೈಸೂರು,ಅ.11(ಪಿಎಂ)– ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರ ಅಧಿಕಾರ ಮೊಟಕುಗೊಳಿಸದಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನಿರ್ಧಾರವನ್ನು ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್ತಿಗೆ ಆಯ್ಕೆಗೊಂಡಿರುವ ಸಿ.ಎನ್.ಮಂಜೇಗೌಡ, ಡಾ.ಡಿ.ತಿಮ್ಮಯ್ಯ ಹಾಗೂ ದಿನೇಶ್‌ಗೂಳಿಗೌಡ ಸ್ವಾಗತಿಸಿದ್ದಾರೆ. ರಾಜ್ಯದಲ್ಲಿ 5,963 ಗ್ರಾಮ ಪಂಚಾಯಿತಿಗಳಿವೆ. 91,500 ಸದಸ್ಯರು ಜನರಿಂದ ನೇರವಾಗಿ ಆಯ್ಕೆಯಾಗಿದ್ದಾರೆ. ಅಭಿವೃದ್ಧಿಯ ದೃಷ್ಟಿಯಿಂದ ಗ್ರಾಪಂ ಸದಸ್ಯರು ಜನರಿಂದ, ಜನರಿಗೋಸ್ಕರ ಆಯ್ಕೆಯಾಗಿ ಸ್ಥಳೀಯವಾಗಿ ಜನರ ಸರ್ಕಾರವನ್ನು ರಚಿಸುತ್ತಾರೆ. ಇವರ ಅಧಿಕಾರ ಕಡಿತ ಮಾಡಿದರೆ ಪ್ರಜಾತಂತ್ರ ವ್ಯವಸ್ಥೆಯ ಭದ್ರ ಬುನಾದಿಗೆ ಧಕ್ಕೆ ತಂದಂತೆ. ಇಂತಹ ಪ್ರಯತ್ನ ತಡೆಹಿಡಿಯಬೇಕೆಂದು ಮುಖ್ಯಮಂತ್ರಿಗಳಲ್ಲಿ ತಾವು ಮನವಿ ಮಾಡಿದ್ದನ್ನು ಈ ಮೂವರು ಜನಪ್ರತಿನಿಧಿಗಳು ಸ್ಮರಿಸಿದರು.

ಕೋಟ್ಯಾಂತರ ರೂ. ಮೌಲ್ಯದ ಆಸ್ತಿಯ ಅಕ್ರಮ ಪೌತಿ ಖಾತೆ ಮಾಡಿದ ಆರೋಪ

ಮೈಸೂರು ತಹಸೀಲ್ದಾರ್, ಗ್ರಾಮ ಲೆಕ್ಕಿಗ, ರೆವಿನ್ಯೂ ಇನ್ಸ್‌ಪೆಕ್ಟರ್ ಸೇರಿ ಐವರ ವಿರುದ್ಧ ಕೇಸ್ ದಾಖಲು

ಮೈಸೂರು, ಅ.11(ಆರ್‌ಕೆ)– ಕೋಟ್ಯಾಂತರ ರೂ. ಬೆಲೆ ಬಾಳುವ ಆಸ್ತಿಗೆ ಅಕ್ರಮವಾಗಿ ಪೌತಿ ಖಾತೆ ಮಾಡಿದ ದೂರಿನ ಹಿನ್ನೆಲೆಯಲ್ಲಿ ಮೈಸೂರು ತಾಲೂಕು ತಹಸೀಲ್ದಾರ್, ಗ್ರಾಮ ಲೆಕ್ಕಿಗ (ವಿಲೇಜ್ ಅಕೌಂಟೆಂಟ್–ವಿಎ), ಕಂದಾಯ ನಿರೀಕ್ಷಕ (ರೆವಿನ್ಯೂ ಇನ್ಸ್‌ಪೆಕ್ಟರ್–ಆರ್‌ಐ) ಸೇರಿದಂತೆ ಐವರ ವಿರುದ್ಧ ಮೈಸೂರಿನ ವಿದ್ಯಾರಣ್ಯಪುರಂ ಠಾಣೆ ಪೊಲೀಸರು ಕೇಸ್ ದಾಖಲು ಮಾಡಿದ್ದಾರೆ.

ತಹಸೀಲ್ದಾರ್, ರೆವಿನ್ಯೂ ಇನ್ಸ್‌ಪೆಕ್ಟರ್, ವಿಲೇಜ್ ಅಕೌಂಟೆಂಟ್ ನಾಗೇಶ್, ಬೆಂಗಳೂರಿನ ಅನುಭವನಗರ, ನಾಗರಭಾವಿ 2ನೇ ಮೇನ್, 9ನೇ ಕ್ರಾಸ್ ನಿವಾಸಿಗಳಾದ ಜಯಲಕ್ಷ್ಮೀಬಾಯಿ ಹಾಗೂ ಜಯಶ್ರೀ ಆರೋಪ ಎದುರಿಸುತ್ತಿದ್ದು, ಅವರ ವಿರುದ್ಧ ಐಪಿಸಿ ಸೆಕ್ಷನ್ 465, 468, 471 ಹಾಗೂ 420 ರೆಡ್‌ವಿತ್ 34 ರೀತ್ಯಾ ಅಕ್ಟೋಬರ್ 8 ರಂದು (ಅಪರಾಧ ಸಂಖ್ಯೆ 0078/2022) ವಿದ್ಯಾರಣ್ಯಪುರಂ ಠಾಣೆ ಸಬ್ ಇನ್ಸ್‌ಪೆಕ್ಟರ್ ಎನ್.ವಿ.ರಂಗಸ್ವಾಮಿ ಪ್ರಕರಣ ದಾಖಲಿಸಿದ್ದಾರೆ.

ಮೈಸೂರಿನ ವಿಜಯನಗರದ ಸಂಗು ಸರ್ಕಲ್ ನಿವಾಸಿ ಲೇಟ್ ಬೋರೇಗೌಡರ ಮಗ ಬಿ.ಶ್ರೀಕಂಠಪ್ಪ ಈ ಸಂಬಂಧ ದೂರು ನೀಡಿದ್ದು, ಆರ್. ವೆಂಕಟಪ್ಪ ಎಂಬುವರಿಗೆ ಸೇರಿದ ಮೈಸೂರು ತಾಲೂಕು, ಕಸಬಾ

▶ 8ನೇ ಪುಟಕ್ಕೆ

ನಮ್ಮಿಂದ ಅಕ್ರಮ ನಡೆದಿಲ್ಲ: ತಹಸೀಲ್ದಾರ್

ಮೈಸೂರು, ಅ.11(ಆರ್‌ಕೆ)–ಸ್ವತ್ತಿನ ಪೌತಿ ಖಾತೆ ಮಾಡುವುದು ಗ್ರಾಮ ಲೆಕ್ಕಿಗ(ವಿಎ) ರೆವಿನ್ಯೂ ಇನ್ಸ್‌ಪೆಕ್ಟರ್ (ಆರ್‌ಐ) ಕೆಲಸವಾಗಿದ್ದು, ಸರ್ವೆ ನಂ.155/2ರ ಭೂಮಿ ಸಂಬಂಧ ನಮ್ಮಿಂದ ಯಾವುದೇ ಅಕ್ರಮ ನಡೆದಿಲ್ಲ ಎಂದು ಮೈಸೂರು ತಾಲೂಕು ತಹಸೀಲ್ದಾರ್ ಬಿ.ಎನ್.ಗಿರೀಶ್ ಸ್ಪಷ್ಟಪಡಿಸಿದ್ದಾರೆ. ವಿದ್ಯಾರಣ್ಯಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿರುವ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಬೆಂಗಳೂರಿನಲ್ಲಿರುವ ಕುಟುಂಬಸ್ಥರಿಂದ ವಂಶವೃಕ್ಷ ತರಿಸಿಕೊಂಡು ವಿಎ, ಆರ್‌ಐ ಪೌತಿ ಖಾತೆ ಮಾಡಿದ್ದಾರೆ. ಆ ಪ್ರಕ್ರಿಯೆಯಲ್ಲಿ ತಹಸೀಲ್ದಾರ್ ಪಾತ್ರವೇನೂ ಇರುವುದಿಲ್ಲ. ಈ ಒಂದು ಸಣ್ಣ ವಿಷಯದ ಬಗ್ಗೆ ಅರಿವಿಲ್ಲದೇ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಎಫ್‌ಐಆರ್‌ನಲ್ಲಿ ನನ್ನನ್ನೂ ಸೇರಿಸಿದ್ದಾರೆ ಎಂದರು. ದಾಖಲಾತಿಗಳನ್ನು ಪರಿಶೀಲಿಸದೇ ಕಂದಾಯ ಇಲಾಖೆ ನಿಯಮಗಳ ಬಗ್ಗೆ ತಿಳಿಯದೇ ಇರುವ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಅತೀ ಬುದ್ಧಿವಂತಿಕೆ ಪ್ರದರ್ಶಿಸಿದ್ದಾರೆ. ನನ್ನನ್ನು ಕೇಳಿದ್ದರೆ ಸುದೀರ್ಘ ಮಾಹಿತಿ ನೀಡುತ್ತಿದ್ದೆ. ನಾವು ಈಗ ನಮ್ಮ ಬುದ್ಧಿವಂತಿಕೆ ತೋರಿಸುತ್ತೇವೆ ಎಂದು ಗಿರೀಶ್ ಪ್ರತಿಕ್ರಿಯಿಸಿದರು.

ಕೃಷಿ, ಅರಣ್ಯ ಸೇರಿ ವಿವಿಧ ಇಲಾಖೆಯ

2000 ಹುದ್ದೆ ರದ್ದು

- ರಾಜ್ಯ ಬೊಕ್ಕಸಕ್ಕೆ ಅಗತ್ಯ ಹೊರೆ ಆಗಿರುವ ನಿಗಮ ಮಂಡಳಿಗಳು ಬಂದ್
- ಅರಣ್ಯ ಇಲಾಖೆಯ ಉನ್ನತ ಹುದ್ದೆಗಳಿಗೆ ಕತ್ತರಿ; ಕೆಳಗಿನ ಹುದ್ದೆಗಳ ನೇಮಕ
- ಅರಣ್ಯ ಒತ್ತುವರಿ ಮಾಡಿ ಸಾಗುವಳಿ ಮಾಡುತ್ತಿರುವ ಸಣ್ಣ ರೈತರಿಗೆ ಹಕ್ಕುಪತ್ರ
- ಕಂದಾಯ ಸಚಿವ ಅಶೋಕ್ ನೇತೃತ್ವದ ಸಂಪುಟ ಉಪ ಸಮಿತಿ ನಿರ್ಧಾರ



ಬೆಂಗಳೂರು, ಅ.11(ಕೆಎಂಶಿ)– ಕೃಷಿ ಹಾಗೂ ಅದರ ಉಪ ಇಲಾಖೆಗಳಲ್ಲಿನ 2000 ಹುದ್ದೆಗಳನ್ನು ರದ್ದು ಮಾಡುವ ಮಹತ್ವದ ತೀರ್ಮಾನವನ್ನು ರಾಜ್ಯ ಸರ್ಕಾರ ಕೈಗೊಂಡಿದೆ. ಅಷ್ಟೇ ಅಲ್ಲದೆ ಈ ಇಲಾಖೆಯಡಿ ಬರುವ ತಂಬಾಕು ಮಂಡಳಿ ಸೇರಿದಂತೆ ಮೂರು ನಿಗಮಗಳನ್ನು ರದ್ದು ಮಾಡಲು ಸಹ ನಿರ್ಧರಿಸಿದೆ.

ಕಂದಾಯ ಸಚಿವ ಆರ್.ಅಶೋಕ್ ನೇತೃತ್ವದಲ್ಲಿ ಇಂದು ನಡೆದ ಸಚಿವ ಸಂಪುಟದ ಉಪ ಸಮಿತಿ ಸಭೆಯಲ್ಲಿ ಈ ಮಹತ್ವದ ತೀರ್ಮಾನ ಕೈಗೊಂಡಿರುವುದಲ್ಲದೆ, ಅರಣ್ಯ ಇಲಾಖೆಯಲ್ಲಿ ಹಿರಿಯ ಹುದ್ದೆಗಳನ್ನು ರದ್ದುಗೊಳಿಸಿ ಕೆಳಹಂತದಲ್ಲಿ ಹೆಚ್ಚು ನೇಮಕಾತಿ ಮಾಡಿಕೊಳ್ಳಲು ಸಭೆ ತೀರ್ಮಾನಿಸಿದೆ.

ಕೃಷಿ, ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆಯಲ್ಲಿ ಅನಗತ್ಯವಾಗಿರುವ 2000 ಹುದ್ದೆಗಳನ್ನು ರದ್ದುಗೊಳಿಸುವುದು, ಸೇರಿದಂತೆ ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗಿರುವ ಇದೇ ಇಲಾಖೆಯಡಿ ಬರುವ ಮೂರು ನಿಗಮ ಗಳನ್ನು ರದ್ದುಮಾಡುವ ತೀರ್ಮಾನಕ್ಕೂ ಬಂದಿದೆ. ಅಷ್ಟೇ ಅಲ್ಲದೆ, ಜಿಲ್ಲೆಗೊಂದು ಪ್ರಾಧಿಕಾರ, ಇಲಾಖೆಗೊಂದು ನಿಗಮ ಸೀಮಿತಗೊಳಿಸಿ ಇನ್ನುಳಿದ ಎಲ್ಲಾ ನಿಗಮ ಹಾಗೂ ಮಂಡಳಿಗಳನ್ನು ರದ್ದು ಮಾಡಲು ನಿರ್ಧರಿಸಿದೆ. ರಾಜ್ಯದ ಬೊಕ್ಕಸಕ್ಕೆ ಅನಗತ್ಯ ನಿಗಮ ಮಂಡಳಿಗಳಿಂದ ಹೊರೆ ಹೆಚ್ಚಾಗಿದ್ದು, ಇಂತಹವುಗಳನ್ನು ರದ್ದು ಮಾಡುವುದಲ್ಲದೆ, ವಿವಿಧ ಇಲಾಖೆಗಳಲ್ಲಿ ಅನಗತ್ಯವಾಗಿರುವ ಸಿಬ್ಬಂದಿಗಳನ್ನು ಕಡಿತಗೊಳಿಸಲು ನಿರ್ಧರಿಸಿದೆ. ಇನ್ನು ಮುಂದೆ ಪ್ರತಿ ಇಲಾಖೆಯ ಬಗ್ಗೆ ವರದಿ ತರಿಸಿಕೊಂಡು ಹುದ್ದೆಗಳನ್ನು ಕಡಿತ ಮಾಡುವ ತೀರ್ಮಾನಕ್ಕೂ ಉಪ ಸಮಿತಿ ಬಂದಿದೆ.

ಅರಣ್ಯ ಇಲಾಖೆಯಲ್ಲಿ ಕೆಳ ಹಂತದ ಹುದ್ದೆಗಳಿಗಿಂತ ಮೇಲಿನ ಹಂತದ ಹುದ್ದೆಗಳು ಹೆಚ್ಚಿದ್ದು, ಇವು ಇಲಾಖೆಗೆ ಭಾರವಾಗಿವೆ. ಕೆಲವು ಹಿರಿಯ ಅಧಿಕಾರಿಗಳಿಗೆ ಕಾರ್ಯನಿರ್ವಹಿಸಲು ಸ್ಥಳಾವಕಾಶವಿಲ್ಲದೆ ಅನ್ಯ ಇಲಾಖೆಗಳಲ್ಲಿ ಪರಭಾರೆ ಮೇಲೆ ಕೆಲಸ ಮಾಡುತ್ತಿದ್ದಾರೆ. ಇಂತಹ ಅನಗತ್ಯ ಹುದ್ದೆಗಳನ್ನು ತಕ್ಷಣದಿಂದ ರದ್ದುಗೊಳಿಸಿ, ಅರಣ್ಯ ಉಳಿಸಲು ಹಾಗೂ ಬೆಳೆಸಲು ಅಗತ್ಯವಾದ ಸಿಬ್ಬಂದಿಗಳನ್ನು ಮಾತ್ರ ನೇಮಕ ಮಾಡಲು ತೀರ್ಮಾನಿಸಿದೆ. ರಾಜ್ಯದಲ್ಲಿ ಒಟ್ಟಾರೆ ಶೇ.60ಕ್ಕೂ ಹೆಚ್ಚು ನಿಗಮ–ಮಂಡಳಿಗಳನ್ನು ರದ್ದು ಮಾಡುವುದು, ವಿವಿಧ ಇಲಾಖೆಗಳಲ್ಲಿ ಅನಗತ್ಯವಾಗಿರುವ ಸಾವಿರಾರು ಹುದ್ದೆಗಳನ್ನು ಶಾಶ್ವತವಾಗಿ ರದ್ದು ಮಾಡಲು ಉಪ ಸಮಿತಿ ತೀರ್ಮಾನಿಸಿದೆ. ಮಲೆನಾಡು ಭಾಗದ ಪ್ರದೇಶದಲ್ಲಿ ಅರಣ್ಯದಲ್ಲಿ ಒತ್ತುವರಿ ಮಾಡಿಕೊಂಡು ಉಳುಮೆ ಮಾಡುತ್ತಿರುವ ಸಣ್ಣ ರೈತರಿಗೆ ಹಕ್ಕುಪತ್ರಗಳನ್ನು ನೀಡಲು ಸಭೆ ತೀರ್ಮಾನಿಸಿದೆ.

ಮೈಸೂರು ಮಹಾನಗರ ಪಾಲಿಕೆಯಲ್ಲಿ ಪರಿಸರ ಸ್ನೇಹಿ 'ಇ–ವಾಹನ'ಗಳ ಬಳಕೆ



ಮೈಸೂರು ಮಹಾನಗರ ಪಾಲಿಕೆ ಬಳಸುತ್ತಿರುವ ತ್ಯಾಜ್ಯ ಸಾಗಿಸುವ ವಿದ್ಯುತ್ ಚಾಲಿತ ಆಟೋ ಟಿಪ್ಪರ್‌ಗಳು.

- ಪ್ರಾಥಮಿಕ ಹಂತದಲ್ಲಿ ಕಸ ಸಾಗಿಸುತ್ತಿವೆ 5 ಆಟೋ ಟಿಪ್ಪರ್
- ಇ–ವೇಸ್ಟ್ ಸೇರಿದಂತೆ ತ್ಯಾಜ್ಯ ಸಾಗಿಸಲು ಬಳಕೆ ಮಾಡಲಾಗುತ್ತಿದೆ
- ಪರಿಸರ ಸ್ನೇಹಿ ಇ–ವಾಹನಗಳ ಬಳಕೆ ಉತ್ತೇಜಿಸಲು ಕ್ರಮ

> ಮೈಸೂರು ಮಹಾನಗರ ಪಾಲಿಕೆಯಲ್ಲಿ ಈಗಾಗಲೇ 5 ಬ್ಯಾಟರಿ ಚಾಲಿತ ಆಟೋ ಟಿಪ್ಪರ್ ಬಳಸಲಾಗುತ್ತಿದೆ. ಎಲ್ಲಾ ಇ–ವಾಹನಗಳು ಸುಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಅವುಗಳನ್ನು ಚಾಲನೆ ಮಾಡುವ ಚಾಲಕರಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ದಿನಕ್ಕೆ 4 ಗಂಟೆ ಬ್ಯಾಟರಿ ಚಾರ್ಜ್ ಮಾಡಿದರೆ, 70–80 ಕಿ.ಮೀ. ಚಲಿಸುತ್ತಿವೆ. ಇ–ವಾಹನ ಪರಿಸರ ಮಾಲಿನ್ಯ ತಡೆಗಟ್ಟಲು ಅನಿವಾರ್ಯವಾಗಿದೆ. ಮುಂಬರುವ ದಿನಗಳಲ್ಲಿ ಪಾಲಿಕೆಯಲ್ಲಿ ಇನ್ನಷ್ಟು ಇ–ವಾಹನಗಳನ್ನು ಬಳಸಲು ಉದ್ದೇಶಿಸಲಾಗಿದೆ.
>
> – ಡಾ. ಡಿ.ಜಿ.ನಾಗರಾಜ್, ಪಾಲಿಕೆ ಆರೋಗ್ಯಾಧಿಕಾರಿ.


ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಅ.11– ಇಂಧನ ಮಿತವ್ಯಯದೊಂದಿಗೆ ಪರಿಸರ ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ 'ಇ–ವಾಹನ'ಗಳ ಬಳಕೆ ಉತ್ತೇಜಿಸಲು ಸರ್ಕಾರ ಕ್ರಮ ಕೈಗೊಂಡಿರುವ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ತ್ಯಾಜ್ಯ ಸಾಗಿಸಲು ಪ್ರಾಯೋಗಿಕವಾಗಿ 5 ಬ್ಯಾಟರಿ ಚಾಲಿತ ಆಟೋ ಟಿಪ್ಪರ್‌ಗಳನ್ನು ಬಳಸುತ್ತಿದ್ದು, ಇದು ಯಶಸ್ವಿಯಾದರೆ ಮುಂದಿನ ದಿನಗಳಲ್ಲಿ ಇನ್ನಷ್ಟು 'ಇ–ವಾಹನ' ಬಳಸಲು ಪಾಲಿಕೆ ಆಡಳಿತ ನಿರ್ಧರಿಸಿದೆ.

ಇಂಧನ ಬೆಲೆ ಹೆಚ್ಚಳದಿಂದ ತತ್ತರಿಸಿರುವ ಜನರಿಗೆ ಬ್ಯಾಟರಿ ಚಾಲಿತ 'ಇ–ವಾಹನ'ಗಳು ವರದಾನವಾಗಿ ಪರಿಣಮಿಸುತ್ತಿದ್ದು, ಸರ್ಕಾರವೂ ಬ್ಯಾಟರಿ ಚಾಲಿತ ವಾಹನ ಬಳಕೆಗೆ ಪ್ರೋತ್ಸಾಹ ನೀಡುತ್ತಿದೆ. ಈಗಾಗಲೇ ಸೆಸ್ಕ್ ವತಿಯಿಂದ ಮೈಸೂರು ವಿಭಾಗದಲ್ಲಿ 150 ಚಾರ್ಜಿಂಗ್ ಪಾಯಿಂಟ್ ಸ್ಥಾಪಿಸಲು ಕ್ರಮ ಕೈಗೊಂಡಿದ್ದು, ಖಾಸಗಿ ಸಹಭಾಗಿತ್ವದಲ್ಲೂ 'ಇ–ವಾಹನ'ಗಳ ಚಾರ್ಜಿಂಗ್ ಕೇಂದ್ರ ಆರಂಭಿಸಲು ನಿರ್ಧರಿಸಿದೆ. ಜನರಿಗೆ ಬ್ಯಾಟರಿ ಚಾಲಿತ ವಾಹನಗಳ ಬಳಕೆ ಕುರಿತಂತೆ ಜಾಗೃತಿ ಮೂಡಿಸಲು ಸರ್ಕಾರಿ ಕಚೇರಿಗಳಲ್ಲಿ ಇ–ವಾಹನ ಬಳಸಲು ನಿರ್ಧರಿಸಲಾಗಿದೆ. ಪ್ರಥಮ ಹಂತದಲ್ಲಿ ಚೆಸ್ಕಾಂ, ಎರಡು ಬ್ಯಾಟರಿ ಚಾಲಿತ ವಾಹನ ಬಳಸುವ ಮೂಲಕ ಇತರರಿಗೂ ಇ–ವಾಹನ ಬಳಕೆ ಕುರಿತಂತೆ ಸಂದೇಶ ರವಾನಿಸುತ್ತಿತ್ತು. ಇದೀಗ ಮೈಸೂರು ಮಹಾನಗರ ಪಾಲಿಕೆ ಬ್ಯಾಟರಿ ಚಾಲಿತ 5 ಆಟೋ ಟಿಪ್ಪರ್ ಖರೀದಿಸಿ, ಮೈಸೂರಲ್ಲಿ ತ್ಯಾಜ್ಯ ಸಾಗಿಸಲು ಬಳಸಲಾಗುತ್ತಿದೆ.

ಸರಾಗವಾಗಿ ಸಾಗುತ್ತಿರುವ ವಾಹನ: ಮೈಸೂರು ಮಹಾನಗರ ಪಾಲಿಕೆ ಖರೀದಿಸಿರುವ ಈ 5

▶ 8ನೇ ಪುಟಕ್ಕೆ



ಶ್ರದ್ಧಾ ಭಕ್ತಿಯಿಂದ ನೆರವೇರಿದ

ಚಾಮುಂಡೇಶ್ವರಿ ಅಮ್ಮನ ತೆಪ್ಪೋತ್ಸವ

- ಸಾವಿರಾರು ಭಕ್ತರ ಸಮ್ಮುಖದಲ್ಲಿ ನೆರವೇರಿದ ಉತ್ಸವ
- ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ದರ್ಶನ



ಮೈಸೂರು, ಅ.11(ಎಂಕೆ)– ಮೈಸೂರು ಚಾಮುಂಡಿ ಬೆಟ್ಟದ ದೇವಿಕೆರೆಯಲ್ಲಿ ತಾಯಿ ಚಾಮುಂಡೇಶ್ವರಿ ಅಮ್ಮನವರ ತೆಪ್ಪೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಮಂಗಳವಾರ ರಾತ್ರಿ ಶ್ರದ್ಧಾ–ಭಕ್ತಿಯಿಂದ ನೆರವೇರಿತು.

ಬೆಳಗ್ಗೆ ಅಮ್ಮನವರ ಪಲ್ಲಕ್ಕಿ ಉತ್ಸವವು ಪೂಜಾ ಕೈಂಕರ್ಯದೊಂದಿಗೆ ದೇವಸ್ಥಾನದಿಂದ ಹೊರಟು ರಥದ ಬೀದಿಯ ಮೂಲಕ ಸಾಗಿ ದೇವಿಕೆರೆ ಅಂಗಳಕ್ಕೆ ಮೆರವಣಿಗೆ ಮೂಲಕ ಬಂದು ತಲುಪಿತು. ನಂತರ ಸಂಜೆಯವರೆಗೂ ವಿವಿಧ ಪೂಜೆ–ಪುನಸ್ಕಾರದೊಂದಿಗೆ ಅವಭೃತ ತೀರ್ಥಸ್ನಾನ ಮಾಡಿಸಲಾಯಿತು. 7 ಗಂಟೆ ವೇಳೆಗೆ ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದ ತೆಪ್ಪದಲ್ಲಿ ತಾಯಿ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನಿರಿಸಿ, 7.30ರವರೆಗೂ ದೇವಿಕೆರೆಯಲ್ಲಿ 3 ಸುತ್ತು ಪ್ರದಕ್ಷಿಣೆ ಹಾಕಿಸಲಾಯಿತು. ಈ ವೇಳೆ ಆಗಮಿಸಿದ್ದ ಸಾವಿರಾರು ಭಕ್ತರು ಚಾಮುಂಡೇಶ್ವರಿ ದರ್ಶನ ಪಡೆದರಲ್ಲದೆ ಪಟಾಕಿ ಸಿಡಿಸಿ ಸಂಭ್ರಮಿಸಿದರು. ಹಲವರು ಅಮ್ಮನವರ ಮೂರ್ತಿಯನ್ನು ಮೊಬೈಲ್‌ಗಳ

▶ 8ನೇ ಪುಟಕ್ಕೆ

ಕರ್ನಾಟಕ ಹೈಕೋರ್ಟ್ ನೂತನ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ

ಬೆಂಗಳೂರು: ಬಾಂಬೆ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದ ಪಿ.ಬಿ.ವರಾಳೆ (ಪ್ರಸನ್ನ ಬಿ.ವರಾಳೆ) ಅವರನ್ನು ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯನ್ನಾಗಿ ನೇಮಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರ ಹೈಕೋರ್ಟ್‌ನ ನ್ಯಾಯಮೂರ್ತಿ ಎ.ಎಂ.ಮಾರ್ಗೇ ಅವರಿಗೆ ಅದೇ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿ ಬಡ್ತಿ ನೀಡಲಾಗಿದೆ.



ಪಿ.ಬಿ.ವರಾಳೆ

ಈ ಕುರಿತು ಟ್ವಿಟರ್‌ನಲ್ಲಿ ಮಾಹಿತಿ ನೀಡಿರುವ ಕೇಂದ್ರ ಕಾನೂನು ಸಚಿವ ಕಿರಣ್ ರಿಜುಜು ಅವರು, ಜಮ್ಮು ಮತ್ತು ಕಾಶ್ಮೀರದ ಮುಖ್ಯ ನ್ಯಾಯಮೂರ್ತಿಯಾಗಿದ್ದ ಪಂಕಜ್ ಮಿತ್ತಲ್ ಅವರನ್ನು ರಾಜಸ್ತಾನ ಹೈಕೋರ್ಟ್‌ನ ಅದೇ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

'ಸಾಂವಿಧಾನಿಕ ನಿಬಂಧನೆಗಳ ಅನುಸಾರ ನ್ಯಾ.ಪಂಕಜ್ ಮಿತ್ತಲ್ ಅವರನ್ನು ರಾಜಸ್ಥಾನ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ವರ್ಗಾವಣೆ ಮಾಡಲಾಗಿದೆ. ನ್ಯಾ ಪಿ.ಬಿ.ವರಾಳೆ ಅವರನ್ನು ಕರ್ನಾಟಕ ಹೈಕೋರ್ಟ್ ಮತ್ತು ನ್ಯಾ.ಎ.ಎಂ. ಮಾರ್ಗೇ ಅವರನ್ನು ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯನ್ನಾಗಿ ನೇಮಿಸಲಾಗಿದೆ' ಎಂದು ರಿಜಿಜು ಟ್ವೀಟ್ ಮಾಡಿದ್ದಾರೆ. ಸುಪ್ರೀಂಕೋರ್ಟ್ ಕೊಲಿಜಿಯಂ ಕಳೆದ ತಿಂಗಳ ಕೊನೆಯಲ್ಲಿ ಈ ಶಿಫಾರಸುಗಳನ್ನು ಮಾಡಿತ್ತು.

ಯಶಸ್ವಿ ಜಂಬೂ ಸವಾರಿ, ಪಂಜಿನ ಕವಾಯತು

ಪೊಲೀಸ್ ಆಯುಕ್ತರಿಗೆ ಸನ್ಮಾನ



ಮೈಸೂರು, ಅ. 11– ಮೈಸೂರು ದಸರಾ 2022ರ ಮೆರವಣಿಗೆ ಹಾಗೂ ಪಂಜಿನ ಕವಾಯತು ಸಮಿತಿಯಿಂದ ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ಖಾಸಗಿ ಹೋಟೆಲ್ (ಪೈವಿಸ್ತಾ) ನಲ್ಲಿ ಹಮ್ಮಿಕೊಳ್ಳಲಾಗಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಸಮಿತಿಯ ಅಧ್ಯಕ್ಷರಾದ ಪೊಲೀಸ್ ಆಯುಕ್ತ ಚಂದ್ರಗುಪ್ತ ಅವರನ್ನು ಸನ್ಮಾನಿಸಲಾಯಿತು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಪೊಲೀಸ್ ಆಯುಕ್ತ ಚಂದ್ರಗುಪ್ತ, ದಸರಾದಲ್ಲಿ ಜಂಬೂಸವಾರಿ ಮೆರವಣಿಗೆಗೆ ಅತೀ ಮಹತ್ವವಿದೆ. ಅದು ಈ ಬಾರಿ ಸುಸೂತ್ರ, ಯಶಸ್ವಿಯಾಗಿ ನಡೆಯಿತು. ತಮ್ಮೆಲ್ಲಾ ಪ್ರಯತ್ನದಲ್ಲಿ ಸಮಿತಿ ಸದಸ್ಯರು ಹಾಗೂ ಸಾರ್ವಜನಿಕರ ಸಹಕಾರವನ್ನು ಶ್ಲಾಘಿಸಿದರು. ಈ ಸಂದರ್ಭದಲ್ಲಿ ಸಮಿತಿಯ ಉಪಾಧ್ಯಕ್ಷ ಗೋಪಾಲ್ ರಾಜೇ ಅರಸ್, ಉಮೇಶ್, ಮಹೇಶ್, ಸದಸ್ಯರಾದ ವಿಕ್ರಂ ಅಯ್ಯಂಗಾರ್, ರಾಕೇಶ್ ಭಟ್, ಬಿ.ಸಿ.ಶಶಿಕಾಂತ್, ಕೆ.ಎಂ.ನಿಶಾಂತ್, ಜಯರಾಂ, ಜಗದೀಶ್, ಎಂ.ಆರ್. ಬಾಲಕೃಷ್ಣ, ಕಿಶೋರ್, ಪದ್ಮನಾಭ, ಶ್ರೀನಿವಾಸ್‌ಪ್ರಸಾದ್, ಮಣಿರತ್ನ, ಸೋಮಶೇಖರ್, ಭರತ್ ಜೆಟ್ಟಿ, ಕೀರ್ತಿರಾಜ್, ನಗರಪಾಲಿಕೆ ಸದಸ್ಯ ಸುಬ್ಬಯ್ಯ ಸೇರಿದಂತೆ ಪೊಲೀಸ್ ಅಧಿಕಾರಿಗಳಾದ ಗೀತಾಪ್ರಸನ್ನ, ಶಶಿಧರ್, ಮಲ್ಲೇಶ್ ಇನ್ನಿತರರು ಉಪಸ್ಥಿತರಿದ್ದರು.

ವಸ್ತು ಪ್ರದರ್ಶನದಲ್ಲಿ ಮಾದರಿ 'ವನ್ಯಜೀವಿ ಸಂರಕ್ಷಿತ ಧಾಮ'ಕ್ಕೆ ನೀರು ನುಗ್ಗಿ ಅವಾಂತರ

ಮೈಸೂರು, ಅ.11(ಎಸ್‌ಪಿಎನ್)–ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ ಅರಣ್ಯ ಇಲಾಖೆ ವತಿಯಿಂದ ನಿರ್ಮಿಸಲಾಗಿರುವ ಮಾದರಿ 'ವನ್ಯ ಜೀವಿ ಸಂರಕ್ಷಿತ ಧಾಮ'ಕ್ಕೆ ಮಳೆ ನೀರು ನುಗ್ಗಿ ಜಲಾವೃತ್ತಗೊಂಡಿದ್ದು, ಸಾರ್ವಜನಿಕರ ವೀಕ್ಷಣೆಗೆ ಅಲಭ್ಯವಾಗಿದೆ. ಭಾನುವಾರ ರಾತ್ರಿ ದಿಢೀರ್ ಸುರಿದ ಮಳೆಗೆ ಮಾದರಿ 'ವನ್ಯ ಜೀವಿ ಸಂರಕ್ಷಿತ ಧಾಮ'ದ ಜಾಗದಲ್ಲಿ ನೀರು ತುಂಬಿದ್ದು, ಮಳೆ ನೀರು ಜೊತೆಗೆ ಹೂಳು ಮಿಶ್ರಿತ ನೀರು ತುಂಬಿಕೊಂಡಿದೆ. ಇದನ್ನು ತೆರವುಗೊಳಿಸದೆ ಸಾರ್ವಜನಿಕರ ವೀಕ್ಷಣೆ ಸಾಧ್ಯವಿಲ್ಲ ಎಂದು ಹಾಜರಿದ್ದ ಅರಣ್ಯ ಸಿಬ್ಬಂದಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.





ಮೈಸೂರು ಚಾಮುಂಡಿಬೆಟ್ಟದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಕೆಆರ್ ಠಾಣೆ ಸಬ್ ಇನ್ಸ್‌ಪೆಕ್ಟರ್ ಮಹಾವೀರ್ ಬೀಳಗಿ, ಚಾಮುಂಡಿ ಬೆಟ್ಟದ ಗ್ರಾಪಂ ಅಧ್ಯಕ್ಷ ಕೆ.ಭರತ್, ಸದಸ್ಯ ಮಂಜುನಾಥ್, ನಾಯಕರ ಸಂಘದ ಕಾರ್ಯದರ್ಶಿ ನಾಗೇಂದ್ರ, ಅಯ್ಯಪ್ಪಸ್ವಾಮಿ ಸಮಿತಿ ಸದಸ್ಯರಾದ ಸುಬ್ರಮಣ್ಯ, ನಾಗೇಂದ್ರ, ವೆಂಕಟೇಶ್, ಮಂಜು ನಾಯಕ್, ಸಿದ್ದರಾಜು, ರಾಜಣ್ಣ, ಮುದ್ದಪ್ಪ, ಬಿಎಸ್‌ಎನ್‌ಎಲ್ ಮಹದೇವ್, ಮೋಹನ ಅಶೋಕ್, ಮಂಜು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಅಕ್ರಮ ಮದ್ಯ ಮಾರಾಟಕ್ಕೆ ಆಕ್ಷೇಪ: ಕೊಲೆ ಬೆದರಿಕೆ

ಮೈಸೂರು,ಅ.11(ಆರ್‌ಕೆ)–ಅಕ್ರಮ ಮದ್ಯ ಮಾರಾಟ ಮಾಡಬೇಡಿ ಎಂದು ಹೇಳಿದ್ದಕ್ಕೆ ಬನ್ನಿಮಂಟಪ ನಿವಾಸಿ ಕೆ.ಕೃಷ್ಣ ಎಂಬುವರು ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಪಿ.ಪುಟ್ಟರಾಜು ಎಂಬುವವರು ನಗರ ಪೊಲೀಸ್ ಕಮಿಷ್ನರ್‌ಗೆ ದೂರು ನೀಡಿದ್ದಾರೆ. ನಮ್ಮ ಮನೆ ಹತ್ತಿರ ಕೆ.ಕೃಷ್ಣ ಮತ್ತು ಅವರ ಮನೆಯವರು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದರು. ನಾನು ಮಾರಬೇಡಿ ಎಂದು ಅದನ್ನು ತಡೆದಿದ್ದೆ. ಅದೇ ಕಾರಣಕ್ಕಾಗಿ ಕೃಷ್ಣ ಹಾಗೂ ಅವರ ಮನೆಯವರು ನನ್ನನ್ನು ನಿತ್ಯ ಬೈದು ಕೊಲೆ ಮಾಡುವುದಾಗಿ ಬೆದರಿಕೆ ಹಾಕುತ್ತಿದ್ದಾರೆ ಎಂದು ದೂರು ನೀಡಿದ ಹಿನ್ನೆಲೆಯಲ್ಲಿ ಎನ್.ಆರ್. ಠಾಣೆ ಪೊಲೀಸರು, ಕೃಷ್ಣನನ್ನು ಕರೆಸಿ ಲಿಖಿತ ಹೇಳಿಕೆ ಪಡೆದಿದ್ದಾರೆ. ಇನ್ನು ಮುಂದೆ ನಿಮ್ಮ ತಂಟೆಗೆ ಬರದಂತೆ ಎಚ್ಚರಿಕೆ ನೀಡಿದ್ದೇವೆ ಎಂದು ಸೆಪ್ಟೆಂಬರ್ 15ರಂದು ಪುಟ್ಟರಾಜು ಅವರಿಗೆ ಹಿಂಬರಹ ನೀಡಿದ್ದಾರೆ.

ಶಿಕ್ಷಕರಿಗೆ ರಾಜ್ಯ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನ

ಮೈಸೂರು,ಅ.11–ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ ವತಿಯಿಂದ ವಿಶ್ವ ವಿಕಲಚೇತನರ ದಿನಾಚರಣೆಯ ಅಂಗವಾಗಿ ವಿಕಲಚೇತನರ ಕ್ಷೇತ್ರದಲ್ಲಿ ಮೈಸೂರು ಜಿಲ್ಲೆಯಲ್ಲಿ ಸಾಧನೆಗೈದ ವ್ಯಕ್ತಿ, ಸಂಸ್ಥೆ ಮತ್ತು ವಿಶೇಷ ಶಾಲೆಗಳಲ್ಲಿ 15 ವರ್ಷಕ್ಕೂ ಮೇಲ್ಪಟ್ಟ ಸೇವೆ ಸಲ್ಲಿಸುತ್ತಿರುವ/ಸಲ್ಲಿಸಿರುವ ವಿಶೇಷ ಶಿಕ್ಷಕರಿಗೆ ರಾಜ್ಯ ಪ್ರಶಸ್ತಿ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅ. 21ರೊಳಗಾಗಿ ಸಲ್ಲಿಸಬಹುದು. ಅರ್ಜಿಯನ್ನು ವೆಬ್‌ಸೈಟ್ www.dwdsc. kar.nic.in ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ, ಪುಲಿಕೇಶಿ ರಸ್ತೆ, ಮೈಸೂರು ಅಥವಾ ದೂಸಂ:0821–2490333 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

ಇಂದು ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ

ಮೈಸೂರು,ಅ.11–ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿಗಳ ವತಿಯಿಂದ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿಯಲ್ಲಿ 'ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯ' ಸಪ್ತಾಹ ಕಾರ್ಯಕ್ರಮವನ್ನು ಅ.12ರಂದು ಬೆಳಗ್ಗೆ 11 ಗಂಟೆಗೆ ಮೈಸೂರು ವಿವಿ ಕ್ರಾಫರ್ಡ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿಗಳು ತಿಳಿಸಿದ್ದಾರೆ.

ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಿಸಲು ಕಾಂಗ್ರೆಸ್‌ಗೆ ಸಾಧ್ಯವಾಗಲಿಲ್ಲ

ಜನಸಂಕಲ್ಪ ಯಾತ್ರೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಾಗ್ದಾಳಿ



ರಾಯಚೂರು ತಾಲೂಕಿನ ಗಿಲ್ಲೇಸೂಗೂರು ಗ್ರಾಮದಿಂದ ಆರಂಭವಾಗಿರುವ ಜನಸಂಕಲ್ಪ ಯಾತ್ರೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೇರಿದಂತೆ ಬಿಜೆಪಿ ಹಿರಿಯ ನಾಯಕರು ಮಂಗಳವಾರ ಚಾಲನೆ ನೀಡಿದರು.

ರಾಯಚೂರು: ಜನಸಂಕಲ್ಪ ಯಾತ್ರೆ ಪ್ರಾರಂಭಿಸಿರುವ ಭಾರತೀಯ ಜನತಾ ಪಕ್ಷದ ನಾಯಕರು ತಮ್ಮ ಸರ್ಕಾರದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿ ಹೆಚ್ಚಳ ವಿಷಯವನ್ನು ತನ್ನ ಟ್ರಂಪ್ ಕಾರ್ಡ್ ಮಾಡಿಕೊಂಡಿದ್ದಾರೆ.

ರಾಯಚೂರು ತಾಲೂಕಿನ ಗಿಲ್ಲೇ ಸೂಗೂರು ಗ್ರಾಮದಿಂದ ಆರಂಭವಾಗಿರುವ ಜನಸಂಕಲ್ಪ ಯಾತ್ರೆಯಲ್ಲಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಸೇರಿದಂತೆ ಬಿಜೆಪಿಯ ಹಿರಿಯ ನಾಯಕರು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. ಈ ವೇಳೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿವಿಧ ವಿಷಯಗಳಲ್ಲಿ ತಮ್ಮ ಸರ್ಕಾರದ ಕಾರ್ಯಗಳನ್ನು ಸಮರ್ಥಿಸಿಕೊಂಡರು. ಇನ್ನೊಂದೆಡೆ ಕಾಂಗ್ರೆಸ್ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಪಕ್ಷ ದಲಿತರ ಮತ್ತು ತುಳಿತಕ್ಕೊಳಗಾದವರ ಚಾಂಪಿಯನ್ ಎಂದು ಹೇಳಿಕೊಳ್ಳುತ್ತದೆ. ಹಾಗಿದ್ದಲ್ಲಿ ಅಧಿಕಾರದಲ್ಲಿದ್ದಾಗ ಎಸ್‌ಸಿ, ಎಸ್‌ಟಿ ಸಮುದಾಯದ ಬೇಡಿಕೆಗೆ ಏಕೆ ಸ್ಪಂದಿಸಿಲ್ಲ. ಆದರೆ ನಾವು ಮೀಸಲಾತಿ ಹೆಚ್ಚಿಸುವ ಅಗತ್ಯವನ್ನು ಪರಿಗಣಿಸಿ ನಾವು ಅದನ್ನು ಅತ್ಯಂತ ನಮ್ರತೆಯಿಂದ ಮಾಡಿದ್ದೇವೆ. ಇದಕ್ಕೆ ವಿರೋಧ ಪಕ್ಷಗಳು ಸೇರಿದಂತೆ ಎಲ್ಲರೂ ಸಂತಸ ವ್ಯಕ್ತಪಡಿಸಿದ್ದಾರೆ ಎಂದರು.

ಸಿದ್ದರಾಮಯ್ಯ ಅವರು ಸಮಾಜದ ಕಟ್ಟಕಡೆಯ ವರ್ಗದವರಿಗೂ 'ಭಾಗ್ಯ'ಗಳ ಸರಮಾಲೆ ನೀಡಿದ್ದೇನೆ ಎಂದು ಹೇಳಿಕೊಳ್ಳುತ್ತಾರೆ. ಆದರೆ ಇದನ್ನು ಮಾಡದಿದ್ದು ದೌರ್ಭಾಗ್ಯ ಎಂದು ಬೊಮ್ಮಾಯಿ ಹೇಳಿದರು. ಮಾಜಿ ಸಿಎಂ ಅವರ ಕೆಲವು ಅನುಯಾಯಿಗಳು ಸಿದ್ದರಾಮಯ್ಯ ಅವರನ್ನು ಸಮಾಜವಾದಿ ಎಂದು ಕರೆಯುತ್ತಾರೆ. ಆದರೆ ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರಿದ ನಂತರ ಜಾತ್ಯತೀತತೆಯನ್ನು ಕಳೆದುಕೊಂಡರು ಎಂದರು.

ಬೊಂಬೆಯಾರು: ನನ್ನನ್ನು ಆರ್‌ಎಸ್‌ಎಸ್‌ನ ಕೈಗೊಂಬೆ ಎಂದು ಸಿದ್ದರಾಮಯ್ಯ ಕರೆಯುತ್ತಾರೆ. ನಾನು ಆರ್‌ಎಸ್‌ಎಸ್ ಅನ್ನು ಮೆಚ್ಚುತ್ತೇನೆ. ಅದರ ಅನುಯಾಯಿಯಾಗಿದ್ದೇನೆ. ಏಕೆಂದರೆ ಆರ್‌ಎಸ್‌ಎಸ್ ದೇಶದ ಉನ್ನತಿಗಾಗಿ ಮತ್ತು ದೀನದಲಿತರನ್ನು ಮುಖ್ಯವಾಹಿನಿಗೆ ತರಲು ಬದ್ಧವಾಗಿರುವ ಸಂಘಟನೆಯಾಗಿದೆ. ಆದರೆ ಸಿದ್ದರಾಮಯ್ಯ ಏನು ಮಾಡುತ್ತಿದ್ದಾರೆ ಎಂದು ಬೊಮ್ಮಾಯಿ ಪ್ರಶ್ನಿಸಿದರು. ಇನ್ನು ಚಿಕ್ಕ ಹುಡುಗ(ರಾಹುಲ್ ಗಾಂಧಿ) ಆದೇಶವನ್ನು ಅನುಸರಿಸುತ್ತಿದ್ದಾರೆ. ಕುಳಿತುಕೊಳ್ಳಲು ಹೇಳಿದರೆ ಸಿದ್ದರಾಮಯ್ಯ ಕುಳಿತುಕೊಳ್ಳುತ್ತಾರೆ. ನಿಲ್ಲಲು ಕೇಳಿದರೆ ನಿಲ್ಲುತ್ತಾರೆ. ಜೊತೆಯಲ್ಲಿ ಓಡು ಎಂದರೆ ಓಡುತ್ತಾರೆ. ಸಿದ್ದರಾಮಯ್ಯ ಆತ್ಮಗೌರವ ಮರೆತಿದ್ದಾರೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ಹೇಳಿದರು.

ಪಿಎಸ್‌ಐ, ಸಿಇಟಿ ಹಗರಣವನ್ನು ಸಿಐಡಿಗೆ ವಹಿಸಿದ್ದು ನನ್ನ ಸರ್ಕಾರ, ಹಗರಣದಲ್ಲಿ ಎಡಿಜಿಪಿ ಸೇರಿದಂತೆ ಅಧಿಕಾರಿಗಳನ್ನು ಬಂಧಿಸಿದ್ದು ನನ್ನ ಸರ್ಕಾರ, ಶಿಕ್ಷಕರ ನೇಮಕಾತಿ ಹಗರಣದಲ್ಲಿ ಆಗಿನ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಏನು ಮಾಡಿದೆ. ಕೆಲವರನ್ನು ರಕ್ಷಿಸಲಿಲ್ಲವೇ ಎಂದು ಬೊಮ್ಮಾಯಿ ಪ್ರಶ್ನಿಸಿದರು. ಇನ್ನು ಕಾಂಗ್ರೆಸ್ ಪಕ್ಷವನ್ನು ಮುಳುಗುವ ದೋಣಿ ಎಂದ ಅವರು, ಅನೇಕ ನಾಯಕರು ಬಿಜೆಪಿ ಸೇರಲು ಕಾಯುತ್ತಿದ್ದಾರೆ ಎಂದರು.

ಸಾಧನೆಗಳು: ನನ್ನ ಸರ್ಕಾರವು ರೈತರು, ರೈತರ ಮಕ್ಕಳು ಮತ್ತು ನೇಕಾರರು, ಬಡಗಿಗಳು ಮುಂತಾದ ಹಲವಾರು ವರ್ಗದ ಜನರಿಗೆ ಅನೇಕ ಕಲ್ಯಾಣ ಯೋಜನೆಗಳನ್ನು ಜಾರಿಗೆ ತಂದಿದೆ. ನಾನು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಹಾದಿಯಲ್ಲಿ ನಡೆಯುತ್ತಿದ್ದೇನೆ ಎಂದು ಹೇಳಿದರು.

ನಿಮ್ಮ ಹಗರಣಗಳನ್ನೆಲ್ಲಾ ಬಯಲಿಗೆಳೆಯುತ್ತೇವೆ

ಸಿದ್ದರಾಮಯ್ಯಗೆ ಬಿಎಸ್‌ವೈ ಎಚ್ಚರಿಕೆ

ರಾಯಚೂರು: ಸಿದ್ದರಾಮಯ್ಯನವರೇ ನೀವು ಬಾಯಿ ಮುಚ್ಚಿಕೊಂಡು ಸ್ವಲ್ಪ ಸುಮ್ಮನಿರಿ. ನಿಮಗೆ ಮೋದಿ ಬಗ್ಗೆ ಮಾತನಾಡುವ ಯೋಗ್ಯತೆಯಿದೆಯಾ. ಪ್ರಧಾನಿ ಕಾಲಡಿ ಕುಳಿತುಕೊಳ್ಳುವ ಯೋಗ್ಯತೆಯೂ ಇಲ್ಲ ಎಂದು ಮಾಜಿ ಮುಖ್ಯಮಂತ್ರಿ ವಿರುದ್ಧ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಗುಡುಗಿದ್ದಾರೆ.

ರಾಯಚೂರು ಬಿಜೆಪಿ ಜನಸಂಕಲ್ಪ ಯಾತ್ರೆಯಲ್ಲಿ ಮಾತನಾಡಿದ ಅವರು, ಬಚ್ಚಾ ರಾಹುಲ್ ಗಾಂಧಿ ಮೋದಿ ಬಗ್ಗೆ ಮಾತನಾಡುತ್ತಾನೆ. ನಿಮ್ಮ ಎಲ್ಲಾ ಹಗರಣಗಳನ್ನು ಬಯಲಿಗೆಳೆಯುತ್ತೇವೆ. ಮುಂಬರುವ ವಿಧಾನ ಮಂಡಲದಲ್ಲಿ ನಿಮ್ಮ ಹಗರಣಗಳನ್ನು ಬಯಲಿಗೆಳೆಯುತ್ತೇವೆ. ನಿಮ್ಮ ಹಗರಣಗಳನ್ನು ತನಿಖೆ ಮಾಡಿಸಿ, ನಿಮ್ಮನ್ನು ಎಲ್ಲಿ ನಿಲ್ಲಿಸಬೇಕು ಅಲ್ಲಿ ನಿಲ್ಲಿಸುತ್ತೇವೆ ಎಂದು ಸಿದ್ದರಾಮಯ್ಯಗೆ ಬಿಎಸ್‌ವೈ ಎಚ್ಚರಿಕೆ ನೀಡಿದರು.

ರಾಬರ್ಟ್ ವಾದ್ರಾ ಮಾಡಿದ್ದ ಹಗರಣದ ಪಟ್ಟಿ ಇದೆಯಾ, ನ್ಯಾಷನಲ್ ಹೆರಾಲ್ಡ್ ಹಗರಣ ಗೊತ್ತಿಲ್ವೇ, ಈವರೆಗೆ ಹಗರಣ ಮಾಡದ ಮೋದಿ ಬಗ್ಗೆ ಮಾತನಾಡ್ತೀರಾ, 25 ಲಕ್ಷ ಹುಬ್ಲೋಟ್ ವಾಚ್ ಯಾರು ಕೊಟ್ಟಿದ್ರು ಗೊತ್ತಿಲ್ವಾ, ಕೋಟ್ಯಾಂತರ ರೂ. ಬೆಲೆಬಾಳುವ ಜಮೀನನ್ನು ರಿಯಲ್ ಎಸ್ಟೇಟ್ ಅವರಿಗೆ ಮಾರಾಟ ಮಾಡಿದ್ದೀರಿ ಎಂದು ಕಿಡಿಕಾರಿದರು. ಸಿದ್ದರಾಮಯ್ಯ–ಡಿಕೆಶಿ ಅಧಿಕಾರಕ್ಕೆ ಬರುತ್ತೇವೆ ಅಂತ ಮಾತನಾಡುತ್ತಾರೆ. ನಾನು ರಾಯರ ಕ್ಷೇತ್ರದ ಹತ್ತಿರದಲ್ಲಿ ಹೇಳುತ್ತೇನೆ 150 ಕ್ಷೇತ್ರಗಳಲ್ಲಿ ನಮ್ಮ ಗೆಲುವು ತಡೆಯಲು ಯಾವ ಶಕ್ತಿಯಿಂದಲೂ ಸಾಧ್ಯವಿಲ್ಲ ಎಂದರು.

ಗಾಂಧಿ ಕುಟುಂಬದ ಹೆಸರು ಹೇಳಿಕೊಂಡು ಆಸ್ತಿ ಮಾಡಿಕೊಂಡಿದ್ದೇವೆ ಅಂತ ರಮೇಶ್‌ಕುಮಾರ್ ಹೇಳಿದ್ದರು. ಅಂದರೆ ಸರ್ಕಾರದ ಹಣ ಲೂಟಿ ಮಾಡಿಕೊಂಡು ಬಂದಿರುವುದನ್ನು ಒಪ್ಪಿಕೊಂಡಿದ್ದಾರೆ. ಜನ ಟ್ಯಾಕ್ಸ್ ಹಣ ಲೂಟಿ ಮಾಡಿದ್ದಕ್ಕೆ ಇದಕ್ಕೆ ಉದಾಹರಣೆ ಬೇಕಿಲ್ಲ. ರಾಹುಲ್ ಗಾಂಧಿಗೆ ಕೇಳ್ತೀನಿ, ಬಿಜೆಪಿ ಭ್ರಷ್ಟಾಚಾರ ಬಗ್ಗೆ ಮಾತನಾಡಲು ಬಂದಿದ್ದೀರಿ. 12 ಲಕ್ಷ ಕೋಟಿ ಹಗರಣದಲ್ಲಿ ತಮ್ಮ ಕುಟುಂಬದ ಪಾಲೆಷ್ಟು, 2 ಜಿ, ಕಾಮನ್ ವೆಲ್ತ್ ಹಗರಣ, ವಾದ್ರಾ ಹಗರಣದ ಬಗ್ಗೆ ಹೇಳಿ. ಸೋನಿಯಾ ಗಾಂಧಿ ಜಾಮೀನು ಮೇಲೆ ಓಡಾಡುತ್ತಿದ್ದಾರೆ. ಸಿದ್ದರಾಮಯ್ಯನ ಸಿಎಂ ಕನಸು ನನಸಾಗಲ್ಲ. ದುಬಾರಿ ವಾಚ್ ಯಾರ್ ಕೊಟ್ರು ನಿಮಗೆ, ಯಾಕೆ ಕೊಟ್ರು ಹೇಳಿ, ರೀ ಡೂ ಹೆಸರಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಮಾರಿಕೊಂಡಿದ್ದೀರಿ ಎಂದು ಬಿಎಸ್‌ವೈ, ಕಾಂಗ್ರೆಸ್ ನಾಯಕರಿಗೆ ಪ್ರಶ್ನೆಗಳ ಸುರಿಮಳೆಗೈದರು.

ಸಂಸ್ಕಾರಯುತ ಜೀವನ ಮೌಲ್ಯಗಳ ಬಗ್ಗೆ ತಿಳುವಳಿಕೆ ನೀಡುವಲ್ಲಿ ಪೋಷಕರ ಪಾತ್ರ ಅತ್ಯಂತ ಮಹತ್ವದ್ದು



ಮೈಸೂರು,ಅ.11–ಕರ್ನಾಟಕ ಕ್ಷತ್ರಿಯ ಒಕ್ಕೂಟ ಮೈಸೂರು ಘಟಕದ ವತಿಯಿಂದ ಚಾಮುಂಡಿಬೆಟ್ಟದ ಪಾದದಲ್ಲಿರುವ ಶಿವಾನಂದ ಆಶ್ರಮದಲ್ಲಿ ಚಾಮುಂಡೇಶ್ವರಿಯ ಉತ್ಸವ ರಥೋತ್ಸವದ ಪ್ರಯುಕ್ತ ಸಾಮೂಹಿಕ ಸತ್ಯನಾರಾಯಣ ಸ್ವಾಮಿ ಪೂಜೆ, ಲಲಿತ ಸಹಸ್ರನಾಮ, ಕುಂಕುಮ ಅರ್ಚನೆ ಕಾರ್ಯಕ್ರಮ ನೆರವೇರಿತು.

ಶ್ರೀ ಸತ್ಯ ನಾರಾಯಣ ಸ್ವಾಮಿಗೆ ವಿಶೇಷವಾಗಿ ಅಲಂಕರಿಸಿ ಸಾಮೂಹಿಕವಾಗಿ ಆರತಿ ಬೆಳಗಿಸಿ, ಧಾರ್ಮಿಕ ಕಾರ್ಯಕ್ರಮ ಉದ್ಘಾಟಿಸಿದ ಒಕ್ಕೂಟದ ಜಿಲ್ಲಾ ಮಹಿಳಾ ಅಧ್ಯಕ್ಷೆ ಸವಿತಾ ಘಾಟ್ಕೆ ಮಾತನಾಡಿ, ತಂತ್ರಜ್ಞಾನ ವೇಗವಾಗಿ ಬೆಳೆದಂತೆ ಇಂದಿನ ಯುವ ಜನಾಂಗದಲ್ಲಿ ಧಾರ್ಮಿಕ ನಂಬಿಕೆಗಳು, ಆಚರಣೆಗಳು ಕಡಿಮೆಯಾಗುತ್ತಿವೆ. ಮಕ್ಕಳಿಗೆ ಸಣ್ಣ ವಯಸ್ಸಿನಲ್ಲಿಯೇ ಸಂಸ್ಕಾರಯುತ ಜೀವನ ಮೌಲ್ಯಗಳ ಬಗ್ಗೆ ತಿಳುವಳಿಕೆ ನೀಡುವಲ್ಲಿ ಪೋಷಕರ ಪಾತ್ರ ಅತ್ಯಂತ ಮಹತ್ವವಾದದ್ದು ಎಂದು ತಿಳಿಸಿದರು.

ಮನುಷ್ಯ ಧರ್ಮದ ದಾರಿಯಲ್ಲಿ ನಡೆದಾಗ ಭಗವಂತನ ಅನುಗ್ರಹ ಪ್ರಾಪ್ತವಾಗುತ್ತದೆ. ಪ್ರತಿ ಹಳ್ಳಿ ಹಳ್ಳಿಗಳಲ್ಲಿ ಇಂತಹ ಪೂಜಾ ಕಾರ್ಯಕ್ರಮಗಳನ್ನು ನಡೆಸಿ ಜನರಲ್ಲಿ ಧಾರ್ಮಿಕ ಜಾಗೃತಿಯನ್ನು ಮೂಡಿಸುವಲ್ಲಿ ನಾವೆಲ್ಲ ಮುಂದಾಗಬೇಕು. ಗ್ರಾಮೀಣ ಪ್ರದೇಶದಲ್ಲಿ ಆರ್ಥಿಕ ಸ್ವಾವಲಂಬನೆಯ ಜೊತೆಗೆ ಜನರಲ್ಲಿ ಧಾರ್ಮಿಕ ಚಿಂತನೆ ಹಾಗೂ ಜಾಗೃತಿಯನ್ನು ಮೂಡಿಸಲು ಮುಂದಾಗಬೇಕು . ಸಾಮೂಹಿಕ ಪೂಜೆ ಶ್ರೇಷ್ಠವಾದದ್ದು. ಮೊಬೈಲ್ ದಾಸರಾಗುತ್ತಿರುವ ಇಂದಿನ ಮಕ್ಕಳಿಗೆ ಇಂತಹ ಧಾರ್ಮಿಕ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುವ ಅನಿವಾರ್ಯತೆ ಇದೆ ಎಂದರು.

ಕರ್ನಾಟಕ ಕ್ಷತ್ರಿಯ ಒಕ್ಕೂಟ ಮಹಿಳಾ ಘಟಕದ ಡಾ.ಎಸ್.ಉಮಾಮೂರ್ತಿ ರಾವ್, ಟಿ.ತಾರಾಸಿಂಗ್, ಸಂಘಟನಾ ಕಾರ್ಯದರ್ಶಿ ಮೀರಾ ಬಾಯಿ, ಪ್ರಧಾನ ಕಾರ್ಯದರ್ಶಿ ಸವಿತಾ ಚವಾಣ್, ಸಹ ಸಂಘಟನಾ ಕಾರ್ಯದರ್ಶಿ ವನಿತಾ ಬಾಯಿ, ಶಿವರಾಜ್, ಶಿವಾನಂದ, ಆಶ್ರಮದ ಪದಾಧಿಕಾರಿಗಳು ಮತ್ತು ಕರ್ನಾಟಕ ಕ್ಷತ್ರಿಯ ಒಕ್ಕೂಟದ ಪದಾಧಿಕಾರಿಗಳು ಹಾಜರಿದ್ದರು.

ಸಾರಿಗೆ ಇಲಾಖೆ ಸೂಚಿಸಿರುವ ಕಿ.ಮೀ.ಗೆ 30 ರೂ. ಬದ್ಧ ಎಂದ ಉಬರ್, ಓಲಾ ಸಂಸ್ಥೆಗಳು

ಬೆಂಗಳೂರು: ಉಬರ್, ಓಲಾ ಆಟೋಗಳು ಇನ್ನು ಮುಂದೆ ಜಿಎಸ್‌ಟಿ ಮತ್ತು ಆಟೋ ಬಾಡಿಗೆ ಸೇರಿ ಕಿ.ಮೀ.ಗೆ 30 ರೂ ಪಡೆಯಬೇಕೆಂದು ಸಾರಿಗೆ ಇಲಾಖೆ ನಿರ್ದೇಶನ ನೀಡಿದೆ. ಸಾರಿಗೆ ಇಲಾಖೆಯ ಈ ನಿರ್ಧಾರಕ್ಕೆ ಉಬರ್, ಓಲಾ ಕಂಪನಿಗಳು ಒಪ್ಪಿಗೆ ನೀಡಿವೆ ಎಂದು ಸಾರಿಗೆ ಇಲಾಖೆ ಆಯುಕ್ತ ಟಿ. ಹೆಚ್.ಎಂ.ಕುಮಾರ್ ಹೇಳಿದ್ದಾರೆ.

ಆಟೋ ಚಾಲಕರು ಸಲ್ಲಿಸುವ ಮನವಿಯನ್ನು ಸರ್ಕಾರಕ್ಕೆ ಸಲ್ಲಿಕೆ ಮಾಡಲಾಗುತ್ತದೆ. ಸಾರಿಗೆ ಇಲಾಖೆ ಸಚಿವರ ಜತೆ ಚರ್ಚಿಸಿ ಮುಂದಿನ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದ್ದಾರೆ. ಊಬರ್, ಓಲಾ ಆಟೋಗಳು ಗ್ರಾಹಕರಿಂದ ದುಪ್ಪಟ್ಟು ಹಣ ಪಡೆಯುತ್ತಿವೆ ಎಂದು ಆರ್‌ಟಿಓ ನೋಟಿಸ್ ಜಾರಿ ಮಾಡಿತ್ತು. ಈ ಸಂಬಂಧ ಇಂದು ಓಲಾ, ಉಬರ್, ರ್‍ಯಾಪಿಡೋ ಕಂಪನಿಗಳು ಸಾರಿಗೆ ಇಲಾಖೆ ಆಯುಕ್ತರೊಂದಿಗೆ ಸಭೆ ನಡೆಸಿದವು. ಸಭೆ ಬಳಿಕ ಮಾತನಾಡಿದ ಸಾರಿಗೆ ಇಲಾಖೆಯ ಆಯುಕ್ತ ಟಿ. ಹೆಚ್.ಎಮ್. ಕುಮಾರ್ ಓಲಾ ಹಾಗೂ ಊಬರ್ ಸಭೆ ನಡೆಯಿತು. ಸಭೆಯಲ್ಲಿ ವಕೀಲರು ಆಟೋ ಚಾಲಕರ ಮುಖಂಡರು ಇದ್ದರು. 3 ವೀಲರ್ ಅಗ್ರಿಗೇಟ್ ರೂಲ್ಸ್‌ಗೆ ಅವಕಾಶ ಇಲ್ಲ. ಅವರಿಗೆ ಮನವರಿಕೆ ಮಾಡಿದ್ದೇವೆ. ಅಗ್ರಿಗೇಶನ್ ಮಾಡೋದಕ್ಕೆ ನಾಳೆ ಬೆಳಿಗ್ಗೆ ಮನವಿ ಸಲ್ಲಿಸಲಿದ್ದಾರೆ ಎಂದರು. ಅವರು ಮಾಡಿರುವ ಅಗ್ರಿಗೇಶನ್ ಉಲ್ಲಂಘನೆ ಹಾಗೂ ದರ ಏರಿಕೆ ವಿಚಾರವಾಗಿ ಮಾತನಾಡಿದ್ದೇವೆ. ಆರ್‌ಟಿಎ ಚೇರ್ಮನ್ ನಗರ ಜಿಲ್ಲಾಧಿಕಾರಿ ಆಗಿದ್ದಾರೆ. ಅವರು ಫಿಕ್ಸ್ ಮಾಡಿರುವ ಮೊತ್ತವನ್ನೇ ಸಂಗ್ರಹಿಸಬೇಕು. ಅಗ್ರಿಗೇಟರ್‌ಗಳು ಫೀಸ್ ಚಾರ್ಜ್ ಮಾಡಿರುವುದಾಗಿ ಕೇಳಿದ್ದಾರೆ. ಅಗ್ರಿಗೇಟರ್ ಅಂತ ಅವರಿಗೆ ಅನುಮತಿ ನೀಡಲು ಬರುವುದಿಲ್ಲ ಎಂದು ಹೇಳಿದರು.

OLA Uber

ವಿವಿಧ ಸೇವಾ ಕಾರ್ಯಗಳೊಂದಿಗೆ ಪಾಲಿಕೆ ಮಾಜಿ ಸದಸ್ಯ ಪಿ.ದೇವರಾಜ್ ಹುಟ್ಟುಹಬ್ಬ ಆಚರಣೆ

ಮೈಸೂರು ಅ.11–ವಿವಿಧ ಸೇವಾ ಕಾರ್ಯಗಳೊಂದಿಗೆ ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಹಾಗೂ ಉದ್ಯಮಿ ಪಿ.ದೇವರಾಜ್ ಹುಟ್ಟುಹಬ್ಬವನ್ನು ಸೋಮವಾರ ಅವರ ಅಭಿಮಾನಿಗಳು ಆಚರಿಸಿದರು. ಮೈಸೂರಿನ ಕೆ.ಸಿ.ಲೇಔಟ್‌ನಲ್ಲಿರುವ ಪಿ.ದೇವರಾಜ್ ಅವರ ಸ್ಟುಡಿಯೋದಲ್ಲಿ ಲಯನ್ಸ್ ಕ್ಲಬ್ ಸಹಯೋಗದೊಂದಿಗೆ ಅಭಿಮಾನಿಗಳಿಂದ ರಕ್ತದಾನ ಶಿಬಿರ, ವೃದ್ಧರು ಮತ್ತು ಸಾರ್ವಜನಿಕರಿಗೆ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು. ಅಲ್ಲದೇ ಅನ್ನಪೂರ್ಣ ಆಂಬುಲೆನ್ಸ್ ಸರ್ವೀಸ್ ಮಾಲೀಕ ವಡಿವೇಲು ಸ್ನೇಹಜೀವಿ ಚಾಲಕರ ಟ್ರೇಡ್ ಯೂನಿಯನ್ ಸಂಘಟನೆ ಚಾಲಕರಿಗೆ ಉಚಿತವಾಗಿ ಒಂದು ಆಂಬುಲೆನ್ಸ್ ನೀಡಿದರು. ನಂತರ ಅಭಿಮಾನಿಗಳು ಬೃಹತ್ ಗಾತ್ರದ ಕೇಕ್ ಕತ್ತರಿಸಿ, ಹಂಚಿ ಸಂಭ್ರಮಿಸಿದರು. ಇದೇ ವೇಳೆ ಸಾಲು ಮರದ ತಿಮ್ಮಕ್ಕ ಆಶೀರ್ವದಿಸಿದರು. ಈ ವೇಳೆ ಮಾಜಿ ಮೇಯರ್ ಅಯೂಬ್ ಖಾನ್, ಪುಷ್ಪಲತಾ ಜಗನ್ನಾಥ್, ಉಪಮೇಯರ್ ಡಾ.ರೂಪಾ, ಮಾಜಿ ಉಪ ಮಹಾಪೌರ ಶ್ರೀಧರ್, ವಿಕ್ರಾಂತ್ ಪಿ.ದೇವೇಗೌಡ, ಶೇಖರ್ ಇನ್ನಿತರರಿದ್ದರು.





ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.10.2022 ಬುಧವಾರ, ಮಳೆ ನಕ್ಷತ್ರ: ಚಿತ್ತ 11.10.2022 ರಿಂದ 23.10.2022

ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಆಶ್ವಯುಜ ಮಾಸ, ಕೃಷ್ಣ ಪಕ್ಷ, ತಿಥಿ: ತೃತೀಯ, ನಕ್ಷತ್ರ : ಭರಣಿ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** 'ಮಧುಮೇಹ ತೊಂದರೆ' ಇರುವ ರೋಗಿಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆಯಿಂದಲೂ.
- **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.
- **ಗೊಂಬೆಗಳ ಪ್ರದರ್ಶನ :** ರಾಘವೇಂದ್ರ ಕೆ.ಎಸ್. ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ, ಸ್ಥಳ: ಇಂಚರ ಕಲಾ ಕ್ಷೇತ್ರ, ವಿಜಯನಗರ, ಬೆಳಗ್ಗೆ 10 ಗಂಟೆಯಿಂದ.
- **ಚಿತ್ಕಲಾ ಫೌಂಡೇಷನ್, ಹಾಸನ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಬಿ.ಎನ್. ದೇಸಾಯಿ ಅವರಿಂದ ಪಕ್ಷಿ–ಕೀಟಗಳ ನವರಾತ್ರಿ ಕಲೋತ್ಸವ, ಏಕವ್ಯಕ್ತಿ ಛಾಯಾಚಿತ್ರ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ, ಎರಡನೇ ಹಂತ, ಬೆಳಗ್ಗೆ 10 ಗಂಟೆಯಿಂದ.
- **ಮಾಜಿ ಮೇಯರ್ ನಾರಾಯಣ ಅಭಿಮಾನಿಗಳ ಬಳಗ :** ನಾರಾಯಣ ಅವರ 69ನೇ ವರ್ಷದ ಹುಟ್ಟುಹಬ್ಬದ ಸಮಾರಂಭ, ಉದ್ಘಾಟನೆ : ವಿಧಾನಪರಿಷತ್ ಸದಸ್ಯ ಡಾ. ತಿಮ್ಮಯ್ಯ, ಅಧ್ಯಕ್ಷತೆ : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಶಿವಣ್ಣ, ಮಾತಂಗ ಫೌಂಡೇಷನ್ ಅಧ್ಯಕ್ಷ ಆರ್. ಲೋಕೇಶ್, ಲೋಕಸೇವಾ ಆಯೋಗದ ಮಾಜಿ ಸದಸ್ಯ ಪ್ರೊ. ಗೋವಿಂದಯ್ಯ, ಆದಿಜಾಂಬವ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮುನಿರಾಜು, ನಿವೃತ್ತ ಸಹಾಯಕ ಕಾರ್ಯಪಾಲಕ ಅಭಿಯಂತರ ಎನ್. ಶ್ರೀನಿವಾಸಲು, ಸ್ಥಳ: ಜಗನ್ಮೋಹನ ಅರಮನೆ, ಮಧ್ಯಾಹ್ನ 3ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ನಖಶಿಖಾಂತ–ಆರೋಗ್ಯ ಸೌಂದರ್ಯಗಳ ವೈಜ್ಞಾನಿಕ ಮಾಹಿತಿ–ಡಾ. ಕೇಶವ ಕೊರಸೆ, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, 10.00 ಉಲ್ಲಾಸ್ ಬಾಪಟ್– ಸಂತೂರ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.45 ಲಾಕ್‌ಡೌನ್ ಕಥಾ ನಾಟಕ–ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ 'ಪರಿವರ್ತನೆ', ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ–ಎಂ. ರಾಘವೇಂದ್ರ, 3.00 ಲಯ ಸಂಭ್ರಮ, ಪರಿಕಲ್ಪನೆ ಮತ್ತು ಪ್ರಸ್ತುತಿ–ಎಚ್.ಎಲ್.ಶಿವಶಂಕರ ಸ್ವಾಮಿ, ನಿರ್ಮಾಣ–ಎಸ್. ಸುಬ್ರಹ್ಮಣ್ಯ, 4.00 ಮಹಿಳಾರಂಗ–ಸ್ತ್ರೀ ಚೇತನ, ಭಾಗವಹಿಸುವವರು – ಲೇಖಕಿ ಹಾಗೂ ಸಂಶೋಧಕಿ ಡಾ.ರೇಖಾ ವಸಂತ್, 4.45 ಹಿಂದಿ ಪಾಠ– ಡಾ. ಮಾಧವಿ ಭಂಡಾರಿ, 6.50 ಕಿಸಾನ್‌ವಾಣಿ–ಬದನೆ ಹಾಗೂ ಕುಂಬಳ ಜಾತಿಯ ತರಕಾರಿ ಬೆಳೆಗಳಲ್ಲಿ ಸಮಗ್ರ ಕೀಟ ನಿರ್ವಹಣೆ ಕುರಿತು ಡಾ. ಜಿ.ಕೆ. ರಾಮೇಗೌಡ ಅವರೊಂದಿಗೆ ಸಂದರ್ಶನ, 10.00 ಹಳ್ಳಿಹಾಡು, ಭಾಗವಹಿಸುತ್ತಾರೆ –ಜಯಲಕ್ಷ್ಮಮ್ಮ ಮತ್ತು ಸಂಗಡಿಗರು

ಈ ಬಾರಿ ಕನ್ನಡ ರಾಜ್ಯೋತ್ಸವಕ್ಕೆ ಕೋಟಿ ಕಂಠಗಳಲ್ಲಿ ಮೊಳಗಲಿದೆ ನಾಡಗೀತೆ


ಬೆಂಗಳೂರು: ಈ ಬಾರಿ ಕನ್ನಡ ರಾಜ್ಯೋತ್ಸವ ಸಂಭ್ರಮವನ್ನು ಅದ್ಧೂರಿಯಿಂದ ಆಚರಣೆ ಮಾಡಲು ನಿರ್ಧಾರ ಮಾಡಲಾಗಿದೆ. ಅ.28ರಂದು ನನ್ನ ನಾಡು ನನ್ನ ಹಾಡು ಶೀರ್ಷಿಕೆಯಡಿ ಐತಿಹಾಸಿಕ ಕಾರ್ಯಕ್ರಮ ನಡೆಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಯೋಜನೆ ಹಾಕಿಕೊಂಡಿದೆ. ನವೆಂಬರ್ 1ರಂದು ಎಲ್ಲ ಕಡೆ ಕನ್ನಡ ಹಬ್ಬ ಸಂಭ್ರಮಿಸಲಿದೆ. ಈ ಬಾರಿ ಕನ್ನಡ ರಾಜ್ಯೋತ್ಸವಕ್ಕೆ ಅದ್ಧೂರಿ ಕಾರ್ಯಕ್ರಮಗಳಿಗೆ ತಯಾರಿ ಮಾಡಲಾಗುತ್ತಿದೆ. ಸರ್ಕಾರ ಅನೇಕ ಯೋಜನೆಗಳನ್ನು ಮಾಡಿಕೊಳ್ಳುತ್ತಿದೆ. ಈ ಬಾರಿ ಕನ್ನಡ ರಾಜ್ಯೋತ್ಸವ ಸಂಭ್ರಮವನ್ನು ಅದ್ಧೂರಿಯಿಂದ ಆಚರಣೆ ಮಾಡಲು ನಿರ್ಧಾರ ಮಾಡಲಾಗಿದೆ. ಅ.28 ರಂದು ನನ್ನ ನಾಡು ನನ್ನ ಹಾಡು ಶೀರ್ಷಿಕೆಯಡಿ ಐತಿಹಾಸಿಕ ಕಾರ್ಯಕ್ರಮ ನಡೆಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಯೋಜನೆ ಹಾಕಿಕೊಂಡಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನೀಲ್‌ಕುಮಾರ್ ಹೇಳಿದ್ದಾರೆ.



ರಾಜ್ಯ, ದೇಶ, ವಿದೇಶಗಳಲ್ಲಿರುವ ಕನ್ನಡಿಗರಿಂದ ಏಕಕಾಲದಲ್ಲಿ ಗಾಯನ ನಡೆಸುವ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಇದರ ಜೊತೆಗೆ ವಿದ್ಯಾರ್ಥಿಗಳಿಂದಲೂ ಕೋಟಿ ಕಂಠ ಗಾಯನಕ್ಕೆ ಸಹಕಾರ ಬೇಕಾಗಿದೆ ಎಂದು ಹೇಳಿದ್ದಾರೆ. ಅಕ್ಟೋಬರ್ 28 ರಂದು ನಡೆಯಲಿರುವ ಕೋಟಿ ಕಂಠ ಗಾಯನ 1 ಕೋಟಿ ಜನ ಹಾಡು ಹಾಡಲಿದ್ದಾರೆ ಎಂದು ವಿಕಾಸಸೌಧದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಸುನೀಲ್ ಕುಮಾರ್ ಹೇಳಿಕೆ ನೀಡಿದ್ದಾರೆ. ಬೆಳಗ್ಗೆ 11 ಗಂಟೆಗೆ 10 ಸಾವಿರ ಕಡೆಗಳಲ್ಲಿ ಕನ್ನಡದ 6 ಹಾಡುಗಳನ್ನು ಹಾಡಬೇಕು ಎಂದು ಹೇಳಿದ್ದಾರೆ. ವಿಶ್ವವಿದ್ಯಾಲಯ ಪ್ರಮುಖರ ಜೊತೆ ಸಚಿವ ಡಾ. ಅಶ್ವಥ್ ನಾರಾಯಣ್ ನೇತೃತ್ವದಲ್ಲಿ ಸಭೆ ನಡೆಸಲಾಗಿದೆ. ಇದು ನಾಡಿನ ಕಾರ್ಯಕ್ರಮ ನಾಡಿಗೀತೆಯೊಂದಿಗೆ ಕಾರ್ಯಕ್ರಮ ಆರಂಭವಾಗುತ್ತದೆ. ಉದಯವಾಗಲಿ ಚೆಲುವ ಕನ್ನಡ ನಾಡು, ಹಚ್ಚೇವು ಕನ್ನಡದ ದೀಪ , ಹುಟ್ಟಿದರೆ ಕನ್ನಡ ನಾಡಿನಲ್ಲಿ ಹುಟ್ಟಬೇಕು ಹೀಗೆ ಕನಿಷ್ಟ ಆರು ಹಾಡು ಹಾಡಬೇಕು. ಗಾಯನಕ್ಕೆ ನಾಡಿನ ಜನರ ಸಹಕಾರ ಬೇಕು ಎಂದು ಹೇಳಿದ್ದಾರೆ.

ಮುಂದಿನ ಐದು ದಿನ ರಾಜ್ಯಾದ್ಯಂತ ಭಾರೀ ಮಳೆ

ಬೆಂಗಳೂರು: ಮುಂದಿನ ಐದು ದಿನಗಳ ಕಾಲ ಕರ್ನಾಟಕದ ಬಹುತೇಕ ಭಾಗಗಳಲ್ಲಿ ಭಾರೀ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (IMD) ಎಚ್ಚರಿಕೆ ನೀಡಿದೆ. ಇಂದು ಮತ್ತು ನಾಳೆ ಕರ್ನಾಟಕದ ಕರಾವಳಿ, ಉತ್ತರ ಮತ್ತು ದಕ್ಷಿಣ ಒಳಭಾಗಕ್ಕೆ ಹವಾಮಾನ ಇಲಾಖೆ ಯಲ್ಲೋ ಅಲರ್ಟ್ ಘೋಷಿಸಿದೆ.



ಹವಾಮಾನ ಇಲಾಖೆ ಎಚ್ಚರಿಕೆ

ಉತ್ತರ ತಮಿಳುನಾಡು ಮತ್ತು ನೆರೆಹೊರೆಯಲ್ಲಿ ಚಂಡಮಾರುತದ ಪರಿಚಲನೆಯಿಂದಾಗಿ ಮಳೆಯು ಸರಾಸರಿ ಸಮುದ್ರ ಮಟ್ಟದಿಂದ 1.5 ಕಿಮೀ ವರೆಗೆ ವಿಸ್ತರಿಸಿದೆ. ರಾಯಲಸೀಮಾ, ತೆಲಂಗಾಣ, ವಿದರ್ಭ ಮತ್ತು ಪಶ್ಚಿಮ ಮಧ್ಯಪ್ರದೇಶದಾದ್ಯಂತ ಸಮುದ್ರ ಮಟ್ಟದಿಂದ 0.9 ಕಿ.ಮೀ ಎತ್ತರದಲ್ಲಿ, ಉತ್ತರ ತಮಿಳುನಾಡು ಮತ್ತು ನೆರೆಹೊರೆ ಅಥವಾ ಪೂರ್ವ ರಾಜಸ್ಥಾನದ ಮೇಲೆ ಚಂಡಮಾರುತದ ಪರಿಚಲನೆ ಇದೆ. ನೈರುತ್ಯ ಬಂಗಾಳ ಕೊಲ್ಲಿ ಮತ್ತು ಪಕ್ಕದ ಉತ್ತರ ಶ್ರೀಲಂಕಾ ಕರಾವಳಿಯ ಮೇಲೆ ಸರಾಸರಿ ಸಮುದ್ರ ಮಟ್ಟದಿಂದ 3.1 ಕಿಮೀ ಎತ್ತರದಲ್ಲಿ ಚಂಡಮಾರುತದ ಪರಿಚಲನೆ ಇದೆ. ಗುಡುಗು, ಮಿಂಚು, ಜೋರಾದ ಗಾಳಿ ಮತ್ತು ಭಾರೀ ಮಳೆ ಸುರಿಯುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ.

ಇಂದು ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಿಗೆ ಸೂಕ್ತ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಎಚ್ಚರಿಕೆ ನೀಡಲಾಗಿದೆ. ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಬೆಳಗಾವಿ, ಬೀದರ್, ಧಾರವಾಡ, ಗದಗ, ಹಾವೇರಿ, ಕಲಬುರಗಿ, ರಾಯಚೂರು, ಯಾದಗಿರಿ, ಬಳ್ಳಾರಿ, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಶಿವಮೊಗ್ಗ, ಕೋಲಾರ ಜಿಲ್ಲೆಗಳು ಮಳೆಯ ತೀವ್ರ ಹೊಡೆತಕ್ಕೆ ಸಿಲುಕಲಿವೆ.

ಕಳಪೆ ಬೀಜ, ರಸಗೊಬ್ಬರದ ಅಂತಾರಾಜ್ಯ ದಂಧೆ: ಸಿಐಡಿ ತನಿಖೆ

ರಾಜ್ಯ ಸರ್ಕಾರ ನಿರ್ಧಾರ

ಬೆಂಗಳೂರು: ರಾಜ್ಯದಲ್ಲಿ ರೈತರಿಗೆ ಗುಣಮಟ್ಟವಿಲ್ಲದ ಬೀಜಗಳು ಮತ್ತು ರಸಗೊಬ್ಬರಗಳನ್ನು ಮಾರಾಟ ಮಾಡುತ್ತಿದ್ದ ಅಂತಾರಾಜ್ಯ ಗ್ಯಾಂಗ್ ವಿರುದ್ಧ ಅಪರಾಧ ತನಿಖಾ ಇಲಾಖೆ (ಸಿಐಡಿ) ತನಿಖೆ ಕೈಗೊಂಡಿದೆ. ಕಡಿಮೆ ಗುಣಮಟ್ಟದ ಬೀಜಗಳು ಮತ್ತು ರಸಗೊಬ್ಬರಗಳನ್ನು ವಶಪಡಿಸಿಕೊಳ್ಳುವುದು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ಕೃಷಿ ಇಲಾಖೆಯು ಕಾನೂನುಬಾಹಿರ ಚಟುವಟಿಕೆಯಲ್ಲಿ ತೊಡಗಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ರಾಜ್ಯ ಪೊಲೀಸ್ ಇಲಾಖೆಯ ಸಹಾಯವನ್ನು ಕೋರಿತ್ತು. ರೈತರು ಸಾಮಾನ್ಯವಾಗಿ ಪ್ರಮಾಣೀಕೃತ ಬೀಜಗಳನ್ನು ಖರೀದಿಸಲು ಸಲಹೆ ನೀಡುತ್ತಾರೆ, ಅದು ಸ್ವಲ್ಪ ಹೆಚ್ಚು ಬೆಲೆಯಿದೆ. ಆದರೆ, ಕಡಿಮೆ ಬೆಲೆಯ ಮತ್ತು ಪ್ರಮಾಣೀಕೃತ ಗುಣ ಮಟ್ಟದಂತೆ ಕಾಣುವ ಗುಣಮಟ್ಟವಿಲ್ಲದ ಬೀಜಗಳನ್ನು ಖರೀದಿಸಲು ರೈತರು ಆಮಿಷ ಒಡ್ಡುತ್ತಿದ್ದಾರೆ.

ಕೃಷಿ ತಜ್ಞರ ಪ್ರಕಾರ, ರೈತರು ಉತ್ತಮ ಇಳುವರಿ ಪಡೆಯಲು ಬಿತ್ತನೆಗಾಗಿ ಬಳಸುವ ಬೀಜಗಳು ನಿರ್ದಿಷ್ಟ ಶೇಕಡಾವಾರು ಮೊಳಕೆಯೊಡೆಯಬೇಕು. ಗುಣಮಟ್ಟದ ಬೀಜಗಳು ಸಿಗದೆ ಸರಿಯಾದ ಇಳುವರಿ ಬಾರದೆ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಕರಣಗಳು ಹೆಚ್ಚಾಗಿವೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ, ಕೃಷಿ ಇಲಾಖೆ ಹಂಚಿಕೊಂಡ ಮಾಹಿತಿಯ ಪ್ರಕಾರ, ಇಲಾಖೆಯ ಜಾಗೃತ ತಂಡವು ಗುಣಮಟ್ಟವಿಲ್ಲದ ಬೀಜಗಳು, ನಕಲಿ ಗೊಬ್ಬರಗಳು ಮತ್ತು ಗೊಬ್ಬರ ಮಾರಾಟಕ್ಕೆ ಸಂಬಂಧಿಸಿದಂತೆ 315 ಪ್ರಕರಣಗಳನ್ನು ದಾಖಲಿಸಿದೆ. ಪ್ರತಿ ವರ್ಷ ದಾಖಲಾಗುವ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಲೇ ಇದೆ. 2020–21ರಲ್ಲಿ 71ರಿಂದ 2021–22ರಲ್ಲಿ 141 ಪ್ರಕರಣಗಳು. ಈ ವರ್ಷ ಸೆಪ್ಟೆಂಬರ್‌ವರೆಗೆ 103 ಪ್ರಕರಣಗಳು ದಾಖಲಾಗಿವೆ. 248 ಅಧಿಕೃತ ಏಜೆನ್ಸಿಗಳು ಗುಣಮಟ್ಟವಿಲ್ಲದ ಬೀಜಗಳನ್ನು ಮಾರಾಟ ಮಾಡುತ್ತಿರುವುದು ಕಂಡುಬಂದ ನಂತರ ಅಧಿಕಾರಿಗಳು ಪರವಾನಗಿಯನ್ನು ರದ್ದುಗೊಳಿಸಿದ್ದಾರೆ. ಕೆಲವು ಪ್ರಕರಣಗಳಲ್ಲಿ ದಂಡವನ್ನೂ ವಿಧಿಸಲಾಗಿದೆ. ಕಳೆದ ಆರೇಳು ತಿಂಗಳಲ್ಲಿ ಕೃಷಿ ಇಲಾಖೆಯ ವಿಜಿಲೆನ್ಸ್ ವಿಭಾಗವು ಅಂತರ ರಾಜ್ಯ ದಂಧೆಗೆ ಸಂಬಂಧಿಸಿದ 12 ಪ್ರಕರಣಗಳನ್ನು ದಾಖಲಿಸಿದೆ. ಈ ದಂಧೆಯಲ್ಲಿ ತೊಡಗಿರುವವರು ಬೇರೆ ರಾಜ್ಯಗಳಿಂದ ಬಂದು ಗುಣಮಟ್ಟವಿಲ್ಲದ ಬೀಜಗಳು ಮತ್ತು ಗೊಬ್ಬರಗಳನ್ನು ಮಾರಾಟ ಮಾಡುತ್ತಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನೆರೆ ರಾಜ್ಯಗಳಿಗೆ ಹಿಂದಿರುಗುವಾಗ, ಅವರು ಸಬ್ಸಿಡಿ ದರದಲ್ಲಿ ಯೂರಿಯಾವನ್ನು ಖರೀದಿಸುತ್ತಾರೆ. ಅಕ್ರಮವಾಗಿ ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಾರೆ. ನಮ್ಮ ತಂಡವು ಕೆಲವರನ್ನು ಬಂಧಿಸಿ ಗಡಿ ಪ್ರದೇಶಗಳಲ್ಲಿ ಯೂರಿಯಾವನ್ನು ವಶಪಡಿಸಿಕೊಂಡಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ತಿಳಿಸಿದ್ದಾರೆ. ಇವುಗಳಲ್ಲಿ ಹೆಚ್ಚಿನ ಪ್ರಕರಣಗಳು ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ದಾಖಲಾಗಿವೆ. ಸಮಸ್ಯೆಯು ಗಂಭೀರವಾಗಿದೆ. ಬೇರೆ ಬೇರೆ ಸ್ಥಳಗಳನ್ನು ಒಳಗೊಂಡಿರುವ ಕಾರಣ, ನಾವು ಸಿಐಡಿ ತನಿಖೆಯನ್ನು ಪಡೆಯಲು ನಿರ್ಧರಿಸಿದ್ದೇವೆ ಎಂದು ಕೃಷಿ ಸಚಿವರು ಹೇಳಿದ್ದಾರೆ.

ದಸರಾ ಪಂಜಿನ ಕವಾಯತಿನಲ್ಲಿ ಗಮನ ಸೆಳೆದ ಟೆಂಟ್ ಪೆಗ್ಗಿಂಗ್ ಅಶ್ವಾರೋಹಿ ಪಡೆಗೆ ಬಹುಮಾನ ವಿತರಣೆ

ಸಿಬ್ಬಂದಿಯ ಪ್ರದರ್ಶನವನ್ನು ಮುಕ್ತ ಕಂಠದಿಂದ ಶ್ಲಾಘಿಸಿದ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ



ಮೈಸೂರು, ಅ.11(ಎಂಕೆ)– ದಸರಾ ಪಂಜಿನ ಕವಾಯಿತಿನಲ್ಲಿ ಅತ್ಯಾಕರ್ಷಕ ಟೆಂಟ್ ಪೆಗ್ಗಿಂಗ್ ನಡೆಸಿಕೊಟ್ಟ ಅಶ್ವಾರೋಹಿ ಪಡೆಗೆ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ನಗದು ಬಹುಮಾನ ವಿತರಣೆ ಮಾಡಿದರು.

ಮೈಸೂರಿನ ಮೌಂಟೆಡ್ ಕಮಾಂಡೆಂಟ್‌ರವರ ಕಚೇರಿಯಲ್ಲಿ ಮಂಗಳವಾರ ನಡೆದ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಟೆಂಗ್ ಪೆಗ್ಗಿಂಗ್ ತಂಡದಲ್ಲಿದ್ದ ಎಆರ್‌ಎಸ್‌ಐಗಳಾದ ಎಂ.ಎಸ್.ಆನಂದ್‌ಸಿಂಗ್, ಮಲ್ಲಿಕಾರ್ಜುನಸ್ವಾಮಿ, ರಮೇಶ್‌ರಾವ್ ಘಾಟ್ಗೆ, ಎಹೆಚ್‌ಸಿಗಳಾದ ಹೆಚ್.ಕೆ.ಸೋಮಣ್ಣ, ಮಹೇಶ, ಚಂದ್ರ, ಎಂ.ಆರ್.ಸಂದೇಶ, ಕೆ.ಆರ್.ರುದ್ರಪ್ಪ, ಎಪಿಸಿ ಸುರೇಶ್ ಮಳಲಿ ಹಾಗೂ ಅನುಯಾಯಿ(ಸಹಾಯಕ ಕರ್ತವ್ಯ) ಕೃಷ್ಣ ಅವರು ನಗದು ಬಹುಮಾನ ಸ್ವೀಕರಿಸಿದರು.

ಬಳಿಕ ಡಾ.ಚಂದ್ರಗುಪ್ತ ಮಾತನಾಡಿ, ಪಂಜಿನ ಕವಾಯಿತಿಯಲ್ಲಿ ಭಾಗವಹಿಸಿದ್ದ ಪೊಲೀಸ್ ತಂಡ ಹಾಗೂ ಪೊಲೀಸ್ ಬ್ಯಾಂಡ್ ತಂಡಕ್ಕೆ ಈಗಾಗಲೇ ಬಹುಮಾನ ವಿತರಣೆ ಮಾಡಲಾಗಿದೆ. ಟೆಂಗ್ ಪೆಗ್ಗಿಂಗ್‌ನಲ್ಲಿ ಭಾಗವಹಿಸಿದ್ದ ಅಶ್ವಾರೋಹಿ ಪಡೆಗೆ ಇಂದು ಬಹುಮಾನ ವಿತರಣೆ ಮಾಡಿದ್ದೇವೆ. ದಸರಾ ಉತ್ಸವದಲ್ಲಿ ಪ್ರತಿನಿತ್ಯ ಒಂದಲ್ಲಾ ಒಂದು ಕಾರ್ಯಕ್ರಮಗಳಲ್ಲಿ ಅಶ್ವಾರೋಹಿ ಪಡೆ ಭಾಗವಹಿಸಿದೆ ಎಂದು ಹೇಳಿದರು.

ಈ ವರ್ಷ ಜಯಪುರದಲ್ಲಿ ನಡೆದ ಗ್ರಾಮೀಣ ದಸರಾ, ಪ್ರವಾಸೋದ್ಯಮ ದಿನ ಆಚರಣೆ, ಶ್ರೀರಂಗಪಟ್ಟಣ ದಸರಾದಲ್ಲಿ ಭಾಗವಹಿಸಿರುವುದಲ್ಲದೆ ಜಂಬೂ ಸವಾರಿ ತಾಲೀಮು ಹಾಗೂ ಪಂಜಿನ ಕವಾಯಿತು ಸೇರಿದಂತೆ ಇಡೀ ದಸರಾದಲ್ಲಿ ಅವಕಾಶ ದೊರೆತ ಕಡೆಗಳೆಲ್ಲಾ ಭಾಗವಹಿಸಿ ಮೆಚ್ಚುಗೆ ಪಡೆದಿದೆ. ಅಲ್ಲದೆ ಬೇರೆ ಕಡೆಗಳಲ್ಲಿ ನಡೆಯುವ ಪಂದ್ಯಾವಳಿಗಳಲ್ಲಿ ಈ ತಂಡ ಭಾಗವಹಿಸುತ್ತಿದ್ದು, ಇತ್ತೀಚೆಗೆ ಹರಿಯಾಣದಲ್ಲಿ ನಾಲ್ಕನೆ ಸ್ಥಾನ ಪಡೆದು ಇಲಾಖೆಗೆ ಗೌರವ ತಂದಿದ್ದಾರೆ ಎಂದು ಶ್ಲಾಘಿಸಿದರು.

ಮುಂದಿನ ದಿನಗಳಲ್ಲಿಯೂ ಇದೇ ರೀತಿ ಉತ್ಸಾಹದಿಂದ ಭಾಗವಹಿಸುವುದರ ಜೊತೆಗೆ ಹೊಸಬರಿಗೆ ಅವಕಾಶ ಮಾಡಿಕೊಡಿ. ನೀವು ನಿವೃತ್ತಿಯಾಗುತ್ತಿದ್ದಂತೆ ನಿಮ್ಮ ಜಾಗದಲ್ಲಿ ನುರಿದ ಅಶ್ವಾರೋಹಿಗಳು ಇರಬೇಕು. ವರ್ಷದಿಂದ ವರ್ಷಕ್ಕೆ ಬದಲಾವಣೆಯಾಗುತ್ತಿರಬೇಕು ಎಂದು ಡಾ.ಚಂದ್ರಗುಪ್ತ ಸಲಹೆ ನೀಡಿದರು.

ಇದಕ್ಕೂ ಮುನ್ನ ಮೌಂಟೆಡ್ ಕಮಾಂಡೆಂಟ್ ಎಂ.ಜಿ.ನಾಗರಾಜು ಮಾತನಾಡಿ, ನಾಡಹಬ್ಬ ಮೈಸೂರು ದಸರಾದಲ್ಲಿ ಅಶ್ವಾರೋಹಿ ಪಡೆ, ಪೊಲೀಸ್ ಬ್ಯಾಂಡ್ ತಂಡ ಅಚ್ಚುಕಟ್ಟಾಗಿ ತಮ್ಮ ಜವಾಬ್ದಾರಿ ನಿರ್ವಹಿಸಿದ್ದಾರೆ. ಇದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿರುವ ಜಿಲ್ಲಾಧಿಕಾರಿಗಳು ನಗದು ಬಹುಮಾನ ನೀಡಿದ್ದಾರೆ. ಪೊಲೀಸ್ ಬ್ಯಾಂಡ್‌ಗೆ ನೀಡಿದ 3 ಲಕ್ಷ ರೂ. ನಗದು ಬಹುಮಾನವನ್ನು ಈಗಾಗಲೇ ವಿತರಣೆ ಮಾಡಲಾಗಿದೆ. ಪಂಜಿನ ಕವಾಯತಿನಲ್ಲಿ ಟೆಂಟ್ ಪೆಗ್ಗಿಂಗ್ ಪ್ರದರ್ಶನ ನೀಡಿದ ಅಶ್ವಾರೋಹಿ ತಂಡಕ್ಕೆ 1 ಲಕ್ಷ ರೂ. ನಗದು ಬಹುಮಾನ ನೀಡಿದ್ದಾರೆ. ಅಶ್ವಾರೋಹಿ ಪಡೆ ಇರುವುದು ರಾಜ್ಯದಲ್ಲಿ ಇದೊಂದೇ ಘಟಕ. ಈ ವರ್ಷ ಹೊಸ ರೀತಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ಯಶಸ್ವಿಯಾಗಿದ್ದೇವೆ ಎಂದರು. ಮೌಂಟೆಡ್ ವಿಭಾಗದ ಡಿವೈಎಸ್‌ಪಿ ಸುರೇಶ್, ಇನ್ಸ್‌ಸ್ಪೆಕ್ಟರ್‌ಗಳಾದ ಎಸ್.ಎಸ್.ಶಾಸನೂರು, ರಾಜು ಮತ್ತಿತರರಿದ್ದರು.

ಇಂದಿನಿಂದ ಆರ್‌ಪಿಎಫ್ ಮದ್ದು-ಗುಂಡು ತರಬೇತಿ; ಜನ-ಸಾಕು ಪ್ರಾಣಿಗಳ ಸಂಚಾರ ನಿಷೇಧ

ಮೈಸೂರು,ಅ.11(ಪಿಎಂ)–ಮಂಡ್ಯ ಜಿಲ್ಲೆ ದೊಡ್ಡಬ್ಯಾಡರಹಳ್ಳಿಯ ಪೊಲೀಸ್ ಫೈರಿಂಗ್ ರೇಂಜ್‌ನಲ್ಲಿ ಅ.12ರಿಂದ 14ರವರೆಗೆ ರೈಲ್ವೆ ರಕ್ಷಣಾ ಪಡೆಯ (ಆರ್‌ಪಿಎಫ್) ಮೈಸೂರು ವಿಭಾಗದ ಅಧಿಕಾರಿ–ಸಿಬ್ಬಂದಿ ವರ್ಗದ ಮೊದಲ ಹಂತದ ಮದ್ದು–ಗುಂಡುಗಳ ವಾರ್ಷಿಕ ತರಬೇತಿ ಕಾರ್ಯಾಗಾರ ನಡೆಯಲಿದೆ ತರಬೇತಿ ಸ್ಥಳದಲ್ಲಿ ಸದರಿ ದಿನಗಳಂದು ಬೆಳಗ್ಗೆ 6ರಿಂದ ಮಧ್ಯಾಹ್ನ 1ರವರೆಗೆ ಜನ ಹಾಗೂ ಸಾಕು ಪ್ರಾಣಿಗಳ ಸಂಚಾರ ನಿಷೇಧಿಸಿದ್ದು, ಸಾರ್ವ ಜನಿಕರು ಸಹಕರಿಸಬೇಕೆಂದು ನೈರುತ್ಯ ರೈಲ್ವೆ ಮೈಸೂರು ವಿಭಾಗದ ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಮೈಸೂರು, ಅ.11– ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಲಲಿತಕಲೆ ಮತ್ತು ಕರಕುಶಲ ವಿಭಾಗದ ವತಿಯಿಂದ ದಸರಾ ವಸ್ತು ಪ್ರದರ್ಶನ–2022ರ ಲಲಿತಕಲೆ ಮತ್ತು ಕರಕುಶಲ ಕಲಾ ವಿಭಾಗಕ್ಕೆ ಕಲಾಕೃತಿಗಳನ್ನು ಆಹ್ವಾನಿಸಿದ್ದು, ಕಲಾವಿದರು ಇತ್ತೀಚೆಗೆ ಚಿತ್ರಿಸಿದ ಹಾಗೂ ತಯಾರಿಸಿದ ಕಲಾಕೃತಿಗಳನ್ನು ಅ.15ರೊಳಗಾಗಿ ಅರ್ಜಿಯನ್ನು ಕನ್ನಡ ಕಾರಂಜಿ ಕಟ್ಟಡದಲ್ಲಿರುವ ಲಲಿತಕಲಾ ವಿಭಾಗಕ್ಕೆ ಬೆಳಗ್ಗೆ 10 ರಿಂದ ಮಧ್ಯಾಹ್ನ 1ರೊಳಗಾಗಿ ಕಲಾಕೃತಿಗಳನ್ನು ಸಲ್ಲಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 9964410760 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆತಿಳಿಸಿದೆ.

ಜ್ಞಾನವಾಪಿ ಮಸೀದಿ ಪ್ರಕರಣ: ಶಿವಲಿಂಗದ ಕಾರ್ಬನ್ ಡೇಟಿಂಗ್ ಕುರಿತಾದ ವಿಚಾರಣೆ ಅ.14ಕ್ಕೆ ಮುಂದೂಡಿಕೆ



ವಾರಣಾಸಿ: ಜ್ಞಾನವಾಪಿ ಮಸೀದಿ ಆವರಣದಲ್ಲಿ ಪತ್ತೆಯಾದ 'ಶಿವಲಿಂಗ'ದ ಕಾರ್ಬನ್ ಡೇಟಿಂಗ್ ಕೋರಿ ಸಲ್ಲಿಸಲಾದ ಮನವಿ ಕುರಿತು ಅ.14ರಂದು ತನ್ನ ಆದೇಶ ನೀಡುವುದಾಗಿ ವಾರಣಾಸಿ ನ್ಯಾಯಾ ಲಯ ಮಂಗಳವಾರ ಹೇಳಿದೆ.

'ಶಿವಲಿಂಗ' ಎಂದು ಹೇಳಲಾಗುತ್ತಿರುವ ಕಾರಂಜಿಯ ಕಾರ್ಬನ್–ಡೇಟಿಂಗ್‌ಗೆ ಅರ್ಜಿದಾರರ ಮನವಿಗೆ ಉತ್ತರವನ್ನು ಸಲ್ಲಿಸುವಂತೆ ನ್ಯಾಯಾಲಯವು ಕಳೆದ ವಾರ ಮಸೀದಿ ಆಡಳಿತವನ್ನು ಕೇಳಿತ್ತು ವಿಡಿಯೋಗ್ರಫಿ ಸಮೀಕ್ಷೆ ವೇಳೆ ಮಸೀದಿ ಆವರಣದೊಳಗೆ ಈ ರಚನೆ ಪತ್ತೆಯಾಗಿತ್ತು ಇದನ್ನು ಹಿಂದೂ ಅರ್ಜಿದಾರರು ಶಿವಲಿಂಗ ಎಂದು ಪ್ರತಿಪಾದಿಸಿದ್ದಾರೆ. ಜ್ಞಾನವಾಪಿ ಮಸೀದಿಯು ಕಾಶಿ ವಿಶ್ವನಾಥ ದೇವಾಲಯದ ಪಕ್ಕದಲ್ಲಿದೆ. ವಾರಣಾಸಿ ನ್ಯಾಯಾಲಯದಲ್ಲಿ ಮೊಘಲ್ ಚಕ್ರವರ್ತಿ ಔರಂಗಜೇಬನ ಆದೇಶದ ಮೇರೆಗೆ ಕೆಡವಲ್ಪಟ್ಟ ಹಿಂದೂ ರಚನೆಯ ಒಂದು ಭಾಗದಲ್ಲಿ ಮಸೀದಿಯನ್ನು ನಿರ್ಮಿಸ ಲಾಗಿದೆ ಎಂಬ ಆರೋಪವನ್ನು ಪುನರು ಜ್ಜೀವನಗೊಳಿಸಿದೆ. 'ಶಿವಲಿಂಗ' ಎಂದು ಕರೆಯಲ್ಪಡುವ ವಸ್ತುವು ವಾಸ್ತವವಾಗಿ ''ಕಾರಂಜಿ'' ಎಂದು ಸಮಿತಿ ಹೇಳಿದೆ.

ಶಾಲಾ–ಕಾಲೇಜು ವಿದ್ಯಾರ್ಥಿಗಳನ್ನು ಆಕರ್ಷಿಸಿದ ಪುರಾತತ್ವ, ಸಂಗ್ರಹಾಲಯ, ಪರಂಪರೆ ಇಲಾಖೆ ಛಾಯಾಚಿತ್ರ ಪ್ರದರ್ಶನ



ಮೈಸೂರು,ಅ.10(ಎಸ್‌ಪಿಎನ್)–2022ರ ಮೈಸೂರು ದಸರಾ ಮಹೋತ್ಸವ ಅಂಗವಾಗಿ ಪುರುತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ಸಂರಕ್ಷಣೆಗೊಂಡಿರುವ ದೇವಾಲಯಗಳು\ಸ್ಮಾರಕಗಳ ಛಾಯಾಚಿತ್ರ ಪ್ರದರ್ಶನ ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ. ಪ್ರತಿ ದಸರಾ ಸಂದರ್ಭದಲ್ಲಿ ವಿವಿಧ ವಿಷಯಗಳ ಕುರಿತು ಛಾಯಚಿತ್ರ ಪದರ್ಶನವನ್ನು ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದ ಪ್ರಾಚ್ಯ ವಸ್ತು ಸಂಗ್ರಹಾಲಯಗಳ ಆವರಣದಲ್ಲಿ ಹಮ್ಮಿಕೊಂಡಂತೆ ಈ ವರ್ಷವೂ ಹಮ್ಮಿಕೊಂಡಿದ್ದು, ಈ ಪ್ರದರ್ಶನದಲ್ಲಿ ಸಂರಕ್ಷಣೆಗೊಂಡಿರುವ ಶಿಲ್ಪಿಗಳು, ರಾಜ್ಯದ ವಿವಿಧ ಸ್ಥಳಗಳಲ್ಲಿ ನವೀಕರಣಗೊಳಿಸಿರುವ ದೇವಸ್ಥಾನ, ಕೆರೆಕಟ್ಟೆಗಳ ಛಾವ ಚಿತ್ರಗಳನ್ನು ಪ್ರದರ್ಶನಕ್ಕಿಡಲಾಗಿದೆ. ಹಾಗಾಗಿ ವಸ್ತು ಪ್ರದರ್ಶನಕ್ಕೆ ಬರುವ ವಿದ್ಯಾರ್ಥಿಗಳು, ಯುವಕ–ಯುವತಿಯರು ಛಾಯಾಚಿತ್ರ ಪ್ರದರ್ಶನಕ್ಕೂ ಆಗಮಿಸಿ ಅಪರೂಪದ ಪುರಾತತ್ವ ಶಿಲ್ಪಗಳು, ಸಂರಕ್ಷಿಸಿರುವ ದೇವಾಲಯಗಳ ಚಿತ್ರಗಳನ್ನು ವೀಕ್ಷಿಸುವಂತೆ ಪುರಾತತ್ವ ಮತ್ತು ಪ್ರಾಚ್ಯ ವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದು, ಈ ಪ್ರದರ್ಶನವು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಸಾರ್ವಜನಿಕರ ವೀಕ್ಷಣೆಗೆ ಅವಕಾಶವಿರಲಿದೆ.

ಭಾರತ್ ಜೋಡೋ ಯಾತ್ರೆಯಲ್ಲಿ ಮುಲಾಯಂ ಸಿಂಗ್ ಯಾದವ್‌ಗೆ ರಸ್ತೆಯಲ್ಲೇ ನಿಂತು ಗೌರವ



ಚಿತ್ರದುರ್ಗ, ಅ.11– ಕಾಂಗ್ರೆಸ್‌ನ ಭಾರತ್ ಜೋಡೋ ಯಾತ್ರೆ ಮುನ್ನಡೆಸುತ್ತಿರುವ ರಾಹುಲ್ ಗಾಂಧಿ ಮಂಗಳವಾರ ಸಂಜೆ ಪಕ್ಷದ ಇತರ ಮುಖಂಡರು ಮತ್ತು ಕಾರ್ಯಕರ್ತರೊಂದಿಗೆ ಮುಲಾಯಂ ಸಿಂಗ್ ಯಾದವ್ ಅವರಿಗೆ ಯಾತ್ರೆ ವೇಳೆ ರಸ್ತೆ ಮಧ್ಯೆಯೇ ನಿಂತು ಮೌನಾಚರಣೆ ಮಾಡುವ ಮೂಲಕ ಗೌರವ ಸಲ್ಲಿಸಿದರು.

ರಾಜ್ಯದಲ್ಲಿ ನಡೆಯುತ್ತಿರುವ ಭಾರತ್ ಜೋಡೋ ಯಾತ್ರೆ ಮಂಗಳವಾರ ಚಿತ್ರದುರ್ಗದಲ್ಲಿ ನಡೆಯುತು. ಈ ವೇಳೆ ರಾಹುಲ್ ಗಾಂಧಿ ಮೆರವಣಿಗೆಯಲ್ಲಿ ಪಕ್ಷದ ಇತರ ಮುಖಂಡರು ಮತ್ತು ಕಾರ್ಯಕರ್ತರೊಂದಿಗೆ 2 ನಿಮಿಷಗಳ ಮೌನ ಆಚರಿಸುವ ಮೂಲಕ ದಿವಂಗತ ಮುಲಾಯಂ ಸಿಂಗ್ ಯಾದವ್ ಅವರಿಗೆ ಗೌರವ ನಮನ ಸಲ್ಲಿಸಿದರು. ಮೋಡ ಕವಿದ ವಾತಾವರಣದಲ್ಲೇ ಮುಂದುವರಿದ ಭಾರತ್ ಜೋಡೊ ಪಾದಯಾತ್ರೆ, ನೂರಾರು ಕಾಂಗ್ರೆಸ್ ಕಾರ್ಯಕರ್ತರು ಮತ್ತು ಬೆಂಬಲಿಗರು, ಬೀದಿಗಳಲ್ಲಿ ಮತ್ತು ಟ್ರಕ್‌ಗಳಲ್ಲಿ ಸಾಲುಗಟ್ಟಿ ನಿಂತು, ದೇಶದ ಅತ್ಯುನ್ನತ ಸಮಾಜವಾದಿ ನಾಯಕರಿಗೆ ಮೌನವಾಗಿ ನಿಂತು ಗೌರವ ಸಮರ್ಪಿಸಿದರು.

'ಕನ್ನಡದ ಕನ್ನಡಿ' ಕೃತಿ ಲೋಕಾರ್ಪಣೆ



ಮೈಸೂರು, ಅ.11(ಎಸ್‌ಪಿಎನ್)– ಲೇಖಕ ಹಾಗೂ ಹಿರಿಯ ಉಪನ್ಯಾಸಕ ಬಸಪ್ಪ ಸಿ. ಸಾಲುಂಡಿ ಅವರು ರಚಿಸಿರುವ 'ಕನ್ನಡದ ಕನ್ನಡಿ' ಕೃತಿಯನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಬಿಡುಗಡೆಗೊಳಿಸಿದರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ಎಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಬೋಗಾದಿಯ ಸನ್ನಿತಿ ಪ್ರಕಾಶನ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಇದು ಅವಕಾಶಗಳ ಯುಗ, ಉತ್ತಮ ವಾಗಿ ಓದುವವರು ತಮಗೆ ಬೇಕಾದ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳುವ ಸ್ವತಂತ್ರವಿದೆ. ಅದು ಸ್ಪರ್ಧಾತ್ಮಕ ಪರೀಕ್ಷೆಗಳಿಂದ ಮಾತ್ರ ಸಾಧ್ಯ ಎಂದರಲ್ಲದೆ, ಪ್ರಸ್ತುತ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಾಗುವವರಿಗೆ 'ಕನ್ನಡದ ಕನ್ನಡಿ' ಉಪಯುಕ್ತ ಪುಸ್ತಕವಾಗಿದೆ ಎಂದು ಹೇಳಿದರು.

ಬಿಜೆಪಿ ಯುವ ಮುಖಂಡ ಎನ್. ಅರುಣ್ ಕುಮಾರ್‌ಗೌಡ ಮಾತನಾಡಿ, ಇತ್ತೀಚೆಗೆ ಸಾಹಿತ್ಯ ಓದುವವರ ಸಂಖ್ಯೆ ಕ್ಷೀಣಿಸುತ್ತಿದೆ. ಅದೇ ಗುಣಾತ್ಮಕ ಬರವಣಿಗೆಗಳಿರುವ ಪುಸ್ತಕಗಳ ರಚನೆಯೂ ಕಡಿಮೆಯಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

'ಸನ್ನಿತಿ' ಪ್ರಶಸ್ತಿ ಪ್ರದಾನ– ಗುರುವಂದನೆ: ಈ ವೇಳೆ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಕನ್ನಡ ವಿಭಾಗದ ಮುಖ್ಯಸ್ಥ ಡಾ.ಮೈಸೂರು ಕೃಷ್ಣಮೂರ್ತಿ, ಕರ್ನಾಟಕ ರಾಜ್ಯ ಮುಕ್ತ ವಿವಿ ಎಂಬಿಎ ಕಾರ್ಯಕ್ರಮ ಸಂಯೋಜಕ ಪ್ರೊ.ಸಿ. ಮಹದೇವ ಮೂರ್ತಿ, ಮೈಸೂರು ವಿವಿ ಸಾವಯುವ ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಬಸಪ್ಪ, ಕೆಜಿಐ ಡಿಯ ನಿವೃತ್ತ ನೌಕರ ರಾಜು ಅವರಿಗೆ 2021–22ನೇ ಸಾಲಿನ ರಾಜ್ಯ ಮಟ್ಟದ 'ಸನ್ನಿತಿ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಎಚ್.ಕೆ. ಪ್ರಭಾಕರಮೂರ್ತಿ, ಎಂ. ವೆಂಕೋಬ ರಾವ್, ಪ್ರೊ.ನೀ.ಗಿರಿಗೌಡ, ಮಾದಪ್ಪ ಸ್ವಾಮಿ ಅವರಿಗೆ ಗುರುವಂದನೆ ಸಲ್ಲಿಸಲಾಯಿತು.

ವೇದಿಕೆಯಲ್ಲಿ ಹನೂರು ಬಿಇಓ ಕಚೇರಿ ಶಿಕ್ಷಣ ಸಂಯೋಜಕ ಕಂದವೇಲು, ವಿಜಯ ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಪ್ರೊ.ಜಿ.ಎಚ್. ಮಹದೇವ ಸ್ವಾಮಿ, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ನಿರ್ವಹಣಾ ವಿಭಾಗದ ಮುಖ್ಯಸ್ಥ ಪ್ರೊ.ಎಂ. ಕಾಂತರಾಜ್, ಸೇಪಿಯಂಟ್ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ.ಅಂಬಾಳೆ ಮಹದೇವ ಸ್ವಾಮಿ, ಎಸ್‌ಡಿಎಂ ಕಾಲೇಜಿನ ಉಪನ್ಯಾಸಕಿ ಜಿ.ಲಕ್ಷ್ಮೀ, ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಉಪನ್ಯಾಸಕ ಬಸಪ್ಪ ಸಾಲುಂಡಿ, ನೇಹಾಮೂರ್ತಿ ಸಿ.ಟಿ.ಕೀರ್ತಿ ಕುಮಾರ್, ಮಂಜುನಾಥ್ ಇದ್ದರು.

ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣರಿಗೆ ಜಾತಿ ಪ್ರಮಾಣ ಪತ್ರ ನೀಡಲು ಆಗ್ರಹ

ಮೈಸೂರು, ಅ.11(ಎಸ್‌ಪಿಎನ್)– ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣರಿಗೆ (ಇಡಬ್ಲ್ಯೂಎಸ್) ಜಾತಿ ಪ್ರಮಾಣ ಪತ್ರವನ್ನು ಸುಲಭವಾಗಿ ದೊರಕುವಂತೆ ರಾಜ್ಯ ಸರ್ಕಾರ ಕ್ರಮವಹಿಸಬೇಕು ಎಂದು ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್ ಪತ್ರಿಕಾ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ. ಕೇಂದ್ರ ಸರ್ಕಾರ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಶೇ.10% ರಷ್ಟು ಮೀಸಲಾತಿ ಸೌಲಭ್ಯ ಕಲ್ಪಿಸಿದ್ದು, ಆರ್ಥಿಕವಾಗಿ ಹಿಂದುಳಿದ ವರ್ಗ (ಇಡಬ್ಲ್ಯೂಎಸ್)ಗಳಿಗೆ ಜಾತಿ ಮತ್ತು ಆದಾಯ ಪ್ರಮಾಣಪತ್ರವನ್ನು ಅರ್ಹ ಬಡ ಬ್ರಾಹ್ಮಣ ಸಮಾಜದ ಯುವಕರಿಗೆ ನೀಡಬೇಕೆಂದು ಒತ್ತಾಯಿಸಿದ್ದಾರೆ. ಆರ್ಥಿಕವಾಗಿ ಹಿಂದುಳಿದ ವರ್ಗ (ಇಡಬ್ಲ್ಯೂಎಸ್)ದವರಿಗೆ ಪ್ರಮಾಣ ಪತ್ರ ನೀಡಬೇಕೆಂದು ಕೇಂದ್ರ ಸರ್ಕಾರದ ಆದೇಶವಿದ್ದರೂ ಅರ್ಹರಿಗೆ ಸಕಾಲಕ್ಕೆ ಸಿಗುತ್ತಿಲ್ಲ. ಈ ಸೌಲಭ್ಯವನ್ನು ವಿಸ್ತರಿಸುವ ಆದೇಶ ರಾಜ್ಯ ಸರ್ಕಾರ ಹೊರಡಿಸಿದ್ದರೂ ಲಭ್ಯವಾಗದಿರುವುದು ಅತ್ಯಂತ ವಿಷಾದನೀಯ ಎಂದು ವಿಕ್ರಂ ಅಯ್ಯಂಗಾರ್ ದೂರಿದ್ದಾರೆ.

ಖಾಲಿಯಿರುವ ಗ್ರಾಮ ಪಂಚಾಯಿತಿ ಸದಸ್ಯ ಸ್ಥಾನಗಳಿಗೆ ಉಪಚುನಾವಣೆ



ಮೈಸೂರು, ಅ.11– ಜಿಲ್ಲಾಧಿಕಾರಿಗಳ ಕಾರ್ಯಾಲಯದ ವತಿಯಿಂದ ಮೈಸೂರು ಜಿಲ್ಲೆಯ ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಕಾರಣಗಳಿಂದ ಖಾಲಿ ಇರುವ ಸದಸ್ಯ ಸ್ಥಾನಗಳಿಗೆ ಉಪಚುನಾವಣೆಯನ್ನು ನಡೆಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ–1993ರ ಪ್ರಕರಣ 308 ಎಎ ಮತ್ತು 308ಎಬಿ ರನ್ವಯ ಅಕ್ಟೋಬರ್ 3ರಲ್ಲಿ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ.

ಚುನಾವಣಾ ವೇಳಾಪಟ್ಟಿ: ಜಿಲ್ಲಾಧಿಕಾರಿಗಳು ಚುನಾವಣಾ ಅಧಿಸೂಚನೆ ಹೊರಡಿಸುವ ದಿನಾಂಕ ಅ.13(ಗುರುವಾರ), ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಅ.18 (ಮಂಗಳವಾರ), ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ ಅ.19 (ಬುಧವಾರ), ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ ಅ.21(ಶುಕ್ರವಾರ), ಮತದಾನ ಅವಶ್ಯವಿದ್ದರೆ, ಮತದಾನವನ್ನು ನಡೆಸಬೇಕಾದ ದಿನಾಂಕ ಅ.28(ಶುಕ್ರವಾರ), (ಮತದಾನದ ಸಮಯ ಬೆಳಿಗ್ಗೆ 7 ಗಂಟೆಯಿಂದ ಸಂಜೆ 5 ಗಂಟೆಯವರೆಗೆ). ಮರು ಮತದಾನದ ಅವಶ್ಯವಿದ್ದರೆ, ಮರು ಮತದಾನವನ್ನು ನಡೆಸಬೇಕಾದ ದಿನಾಂಕ ಮತ್ತು ದಿನ (ಮತದಾನದ ಸಮಯ ಬೆಳಿಗ್ಗೆ 7 ಗಂಟೆಯಿಂದ ಸಂಜೆ 5 ಗಂಟೆಯವರೆಗೆ) ಅ.30 (ಭಾನುವಾರ) ನಡೆಯಲಿದ್ದು, ಮತಗಳ ಎಣಿಕೆ ಅ.31ರಂದು (ಬೆಳಿಗ್ಗೆ 8 ಗಂಟೆಯಿಂದ, ತಾಲೂಕು ಕೇಂದ್ರ ಸ್ಥಳದಲ್ಲಿ) ನಡೆಯಲಿದೆ.



ಮೈಸೂರು ಜಿಲ್ಲೆಯಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ ಸಂಬಂಧ ಉಪಚುನಾವಣೆ ನಡೆಯುವ 4 ಗ್ರಾಮ ಪಂಚಾಯಿತಿಗಳಲ್ಲಿನ 04 ಸದಸ್ಯ ಸ್ಥಾನಗಳ ವಿವರ: ನಂಜನಗೂಡು ತಾಲೂಕಿನ ರಾಂಪುರ ಗ್ರಾಮ ಪಂಚಾಯಿತಿಯ ರಾಂಪುರ–2 ತೆರವಾಗಿರುವ ಕ್ಷೇತ್ರದಲ್ಲಿ ಖಾಲಿ ಇರುವ ಸ್ಥಾನ 1, ನಂಜನಗೂಡು ತಾಲೂಕಿನ ಬಿಳಿಗೆರೆ ಗ್ರಾಮ ಪಂಚಾಯಿತಿಯ ಕಾಮಹಳ್ಳಿಯಲ್ಲಿ ತೆರವಾಗಿರುವ ಕ್ಷೇತ್ರದಲ್ಲಿ ಖಾಲಿ ಇರುವ ಸ್ಥಾನ 1, ಟಿ.ನರಸೀಪುರ ತಾಲೂಕಿನ ಕೊತ್ತೇಗಾಲ ಗ್ರಾಮ ಪಂಚಾಯಿತಿಯ ಕೊತ್ತೇಗಾಲದಲ್ಲಿ ತೆರವಾಗಿರುವ ಕ್ಷೇತ್ರದಲ್ಲಿ ಖಾಲಿ ಇರುವ ಸ್ಥಾನ 1, ಕೆ.ಆರ್.ನಗರ ತಾಲೂಕಿನ ಹಳಿಯಾರು ಗ್ರಾಮ ಪಂಚಾಯಿತಿಯ ಜವರೇಗೌಡನ ಕೊಪ್ಪಲಿನಲ್ಲಿ ತೆರವಾಗಿರುವ ಕ್ಷೇತ್ರದಲ್ಲಿ ಖಾಲಿ ಇರುವ ಸ್ಥಾನ 1 ಆಗಿದೆ.

ಚುನಾವಣಾಧಿಕಾರಿಗಳು ಮತ್ತು ಸಹಾಯಕ ಚುನಾವಣಾಧಿಕಾರಿಗಳು ಚುನಾವಣಾ ವೇಳಾಪಟ್ಟಿಯಂತೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ನಾಮಪತ್ರ ಸ್ವೀಕರಿಸಲು ನಿಗದಿಪಡಿಸಿರುವ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ. ಚುನಾವಣೆಗೆ ಸ್ಪರ್ಧಿಸಬಯಸುವ ಅಭ್ಯರ್ಥಿಗಳು ನಾಮಪತ್ರಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ವೇಳಾಪಟ್ಟಿಯಂತೆ ಚುನಾವಣಾಧಿಕಾರಿಗೆ ಸಲ್ಲಿಸಬಹುದು.

ನಿಯಂತ್ರಣ ಕೊಠಡಿ: ಗ್ರಾಮ ಪಂಚಾಯಿತಿ ಉಪಚುನಾವಣೆ–2022ರ (ಮೇ ಮಾಹೆ) ಸಂಬಂಧ ಯಾವುದೇ ಮಾಹಿತಿಗಳು ಹಾಗೂ ದೂರುಗಳ ನಿರ್ವಹಣೆಗಾಗಿ ಈ ಕೆಳಕಂಡಂತೆ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗಿದೆ. ಯಾವುದೇ ದೂರು ಅಥವಾ ಮಾಹಿತಿಯನ್ನು ನೀಡಲು ನಿಯಂತ್ರಣ ಕೊಠಡಿಗಳ ದೂರವಾಣಿಯನ್ನು ಸಂಪರ್ಕಿಸಬಹುದಾಗಿದೆ. ಜಿಲ್ಲಾಧಿಕಾರಿಗಳ ಕಚೇರಿ, ಮೈಸೂರು, ಕಂಟ್ರೋಲ್ ರೂಂ.1077, ಉಪವಿಭಾಗಾಧಿಕಾರಿಗಳು, ಮೈಸೂರು ಉಪವಿಭಾಗ, ಮೈಸೂರು 0821–2422100, ಹುಣಸೂರು ಉಪವಿಭಾಗದ ಉಪವಿಭಾಗಾಧಿಕಾರಿಗಳು 08222–252073, ನಂಜನಗೂಡು ತಾಲೂಕು ಕಚೇರಿ 08221–223108, ಟಿ.ನರಸೀಪುರ ತಾಲೂಕು ಕಚೇರಿ 08227–260210, ಕೃಷ್ಣರಾಜನಗರ ತಾಲೂಕು ಕಚೇರಿ 08223–262234 ಸಂಪರ್ಕಿಸಬಹುದು.

> ರಾಜ್ಯ ಚುನಾವಣಾ ಆಯೋಗದ ಆದೇಶದಂತೆ ಗ್ರಾಮ ಪಂಚಾಯಿತಿ ಚುನಾವಣೆಗಳ ಮತಪತ್ರದಲ್ಲಿ NOTA (None of the above) (ಮೇಲಿನ ಯಾರೊಬ್ಬರಿಗೂ ಇಲ್ಲ) ಎಂದು ಮತ ಚಲಾಯಿಸಲು ಅವಕಾಶ ಇರುವುದಿಲ್ಲ. –ಡಾ.ಬಗಾದಿ ಗೌತಮ್, ಡಿಸಿ.

ಚುನಾವಣಾ ನೀತಿ ಸಂಹಿತೆ: ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 308ಎಸಿ ರಂತೆ ಚುನಾವಣಾ ಸಂಹಿತೆಯು ಅಕ್ಟೋಬರ್ 13ರಿಂದ 31ರವರೆಗೆ ಜಾರಿಯಲ್ಲಿರುತ್ತದೆ. ಚುನಾವಣಾ ನೀತಿ ಸಂಹಿತೆಯು ಚುನಾವಣೆ ನಡೆಯುವ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರದೇಶಕ್ಕೆ ಮಾತ್ರ ಅನ್ವಯವಾಗುತ್ತದೆ. ನೀತಿ ಸಂಹಿತೆಯು ಜಾರಿಯಲ್ಲಿರುವ ಪ್ರದೇಶಗಳಲ್ಲಿ ಮತದಾನವು ಮುಕ್ತಾಯಗೊಳ್ಳುವ ನಲವತ್ತೆಂಟು ಗಂಟೆಗಳ ಮೊದಲಿನ ಅವಧಿಯವರೆಗೆ'' ಎಲ್ಲಾ ಮದ್ಯದ ಅಂಗಡಿಗಳನ್ನು ಮತ್ತು ಮದ್ಯ ತಯಾರಿಕಾ ಘಟಕಗಳನ್ನು ಅದರ ಮಾಲೀಕರು, ಅಧಿಭೋಗದಾರರು ಮತ್ತು ಸಂದರ್ಭಾನುಸಾರ ವ್ಯವಸ್ಥಾಪಕರು ಮುಚ್ಚತಕ್ಕದ್ದು ಹಾಗೂ ಮೊಹರು ಮಾಡಿ ಅದರ ಕೀಯನ್ನು ಜಿಲ್ಲಾಧಿಕಾರಿಗಳಿಗೆ ಅಥವಾ ಅಧಿಕಾರ ವ್ಯಾಪ್ತಿಯುಳ್ಳ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರಿಗೆ ಒಪ್ಪಿಸಬೇಕು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ... ಇಲ್ಲಿ ಕೇಳಿ! ಎಲ್ಲಿ ನಿಮಗೆ ಮರ್ಯಾದೆ ಸಿಗುವುದಿಲ್ಲವೋ ಅಲ್ಲಿಗೆ ಹೋಗಲೇ ಬೇಡಿ.

ಗಂಡ : ಅಂದರೆ ನಾನು ಮನೆಗೂ ಬರೋದು ಬೇಡ ಅಂತ ಹೇಳ್ತಾ ಇದೀಯಾ?

ಮೈಸೂರು ಮಿತ್ರ

ಬುಧವಾರ, 12 ಅಕ್ಟೋಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಶ್ರದ್ಧೆಯಿಂದ ಕೆಲಸ ಮಾಡುವವರು ಮಹತ್ವದ ವಿಜಯ ಸಾಧಿಸಬಲ್ಲರು.

–ಎಮರ್ಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೇವು ಬೆಲ್ಲ ಕೊಟ್ಟು ಒಳ್ಳೇ ಮಾತಾಡು

ನಿಮ್ಮ ಪತ್ರಗಳು

ಖಾಸಗಿ ಬಡಾವಣೆಗಳಿಗೆ ಮೋಕ್ಷವೆಂದು?

ಮಾನ್ಯರೆ,

ಮೈಸೂರಿನ ರಿಂಗ್ ರೋಡ್ ಸುತ್ತಮುತ್ತ ಹಲವಾರು ಹೊಸ ಬಡಾವಣೆಗಳು ನಿರ್ಮಿಸಲ್ಪಟ್ಟಿವೆ. ಇದರಲ್ಲಿ ಶೇಕಡಾ 80 ರಷ್ಟು ಬಡಾವಣೆಗಳು ಮುಡಾ ಅನುಮೋದಿತ ನಕ್ಷೆಯಂತೆ ನಿರ್ಮಿಸಲ್ಪಟ್ಟಿವೆ. ಇದಕ್ಕೆ ಸಂಬಂಧಪಟ್ಟ ಎಲ್ಲಾ ಶುಲ್ಕಗಳನ್ನು ಮುಡಾಗೆ ಬಡಾವಣೆಯ ಮತ್ತು ನಿವೇಶನ ಮಾಲೀಕರು ಪಾವತಿಸಿರುತ್ತಾರೆ. ಆದರೆ ವಾಸ್ತವವಾಗಿ ಈ ಬಡಾವಣೆಗಳಿಗೆ ಯಾವುದೇ ಮೂಲಭೂತ ಸೌಲಭ್ಯವಿರುವುದಿಲ್ಲ. ಇದ್ದರೂ ದುಸ್ಥಿತಿಯಲ್ಲಿರುತ್ತದೆ. ಬೃಹದಾಕಾರದಲ್ಲಿ ಮೈಸೂರು ಬೆಳೆದರೂ ನಗರಪಾಲಿಕೆ ಮತ್ತು ಮುಡಾ ಜಟಾಪಟಿಯಿಂದ ಈ ಬಡಾವಣೆಗಳ ರಸ್ತೆಗಳೆಲ್ಲಾ ಹಾಳುಕೊಂಪೆಯಾಗಿದೆ. ಸರ್ಕಾರಗಳು ಈ ಹೊರವಲಯದ ಬಡಾವಣೆಗಳನ್ನು ನಗರಪಾಲಿಕೆ ವ್ಯಾಪ್ತಿಗೆ ಸೇರಿಸುತ್ತೇವೆಂದು ಘೋಷಿಸುವರೇ ವಿನಃ ವರ್ಷಾನುಗಟ್ಟಲೆ ಕಳೆದರೂ ಇದು ಕಾರ್ಯರೂಪಕ್ಕೆ ಬರುವುದಿಲ್ಲ. ಹೀಗಾಗಿ ಈ ಖಾಸಗಿ ಬಡಾವಣೆಗಳು ನಗರಪಾಲಿಕೆಗೂ ಸೇರದೆ ಅತ್ತ ಹಳ್ಳಿಗಳಿಗೂ ಸೇರದೆ ಅನಾಥವಾಗಿರುತ್ತವೆ. ಖಾಸಗಿ ಬಡಾವಣೆಗಳ ಕಳಪೆ ಗುಣಮಟ್ಟದ ಕಾಮಗಾರಿಗಳಿಗೆ ಮುಡಾ ಮಂಜೂರಾತಿ ನೀಡಿ ಅಲ್ಲಿನ ನಿವಾಸಿಗಳು ಬವಣೆ ಅನುಭವಿಸುವಂತೆ ಮಾಡುತ್ತವೆ. ಇದಕ್ಕೆ ಉದಾಹರಣೆ ಬನ್ನೂರು ರಸ್ತೆಯ ವಿದ್ಯಾವಿಕಾಸ ಕಾಲೇಜು ಎದುರು ನಿರ್ಮಿತವಾಗಿರುವ ಬಡಾವಣೆ. ಈ ಬಡಾವಣೆಯಲ್ಲಿ ಹೆಸರಿಗೆ ಹಾಕಿರುವ ಟಾರ್ ಕಿತ್ತು ಬಂದಿದೆ ಮತ್ತು ಕಾಲೇಜು ರಸ್ತೆ ಎದುರು ಇರುವ ಮಣ್ಣಿನ ರಸ್ತೆ ಅಧೋಗತಿಯಲ್ಲಿದೆ. ಈ ಅವ್ಯವಸ್ಥೆಗಳನ್ನು ಸರಿ ಮಾಡಿಕೊಡಿ ಎಂದು ಬಡಾವಣೆ ನಿರ್ಮಿಸಿದವರ ಬಳಿ ಕೇಳಿದರೆ "ನಮ್ಮದು ಇಲ್ಲಿ 5 ವರ್ಷ ನಿರ್ವಹಣೆ ಮಾತ್ರ" ಇನ್ನು ನೀವು ಮುಡಾದಲ್ಲಿ ವಿಚಾರಿಸಿ ಎಂದು ಜಾರಿಕೊಳ್ಳುತ್ತಾರೆ. ಇನ್ನು ಮುಡಾದಲ್ಲಿ ವಿಚಾರಿಸಿದರೆ ನಾವು ಅನುಮೋದನೆಯಷ್ಟೇ ಕೊಡುವುದು, ನಿರ್ವಹಣೆಯನ್ನು ನಾವು ಮಾಡುವುದಿಲ್ಲ ಎಂದು ಉತ್ತರಿಸುತ್ತಾರೆ. ಹಾಗಾದರೆ ಕಂದಾಯವನ್ನು ಮುಡಾಗೆ ಏಕೆ ಪಾವತಿಸಬೇಕು ಎಂದು ಕೇಳಿದರೆ ಮುಡಾ ಬಳಿ ಸೂಕ್ತ ಉತ್ತರವಿಲ್ಲ.

ಜನಪ್ರತಿನಿಧಿಗಳು ಚುನಾವಣೆ ಬಿಟ್ಟರೆ ಮತ್ತೆ ಈ ಕಡೆ ಸುಳಿಯುವುದಿಲ್ಲ. ಈಗಾಗಲೇ ಈ ಪ್ರದೇಶವನ್ನು ರಮ್ಮನಹಳ್ಳಿ ಪಂಚಾಯಿತ್ತಿಗೆ ಸೇರುತ್ತದೆ ಎಂದು ಘೋಷಿಸಿದರೂ ಅಲ್ಲಿ ಹೋಗಿ ವಿಚಾರಿಸಿದರೆ ನಮಗೆ ಈ ರೀತಿಯ ಯಾವುದೇ ಲಿಖಿತ ಆದೇಶವಿಲ್ಲ ಎಂದು ಉತ್ತರಿಸುತ್ತಾರೆ. ಕಾವೇರಿ ನೀರಿನ ಜೋಡಣೆಗೆ ಶುಲ್ಕ ಪಾವತಿಸಿದರೂ ವರ್ಷಾನುಗಟ್ಟಲೆ ಕಾಯುವ ಸ್ಥಿತಿ ಏರ್ಪಟ್ಟಿದೆ. ಆದ್ದರಿಂದ ಸಂಬಂಧಪಟ್ಟ ಮುಡಾ ಅಧಿಕಾರಿಗಳು ಇದಕ್ಕೆ ಉತ್ತರಿಸುವರೇ?

–ನೊಂದ ನಿವಾಸಿಗಳು

ದಸರಾ ವಸ್ತುಪ್ರದರ್ಶನದಲ್ಲಿ ನೂರಾರು ಸಮಸ್ಯೆಗಳು

ಮಾನ್ಯರೆ,

ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಅಧಿಕಾರಿಗಳ ದುರಾಡಳಿತ ಮತ್ತು ನಿರ್ಲಕ್ಷ್ಯದಿಂದಾಗಿ ಅಲ್ಲಿ ಮೂಲಭೂತ ಸೌಕರ್ಯ ಒದಗಿಸಿಕೊಡುವಲ್ಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಮರೆತಿರುವುದು ಮೈಸೂರು ದಸರಾಗೆ ಕಪ್ಪುಚುಕ್ಕೆ. ಅನುಭವವಿಲ್ಲದ ಆಡಳಿತ ಸಿಬ್ಬಂದಿಗಳನ್ನು ಪ್ರಾಧಿಕಾರಕ್ಕೆ ನೇಮಿಸಲಾಗಿದೆ. ಖಾಸಗಿಯವರಿಗೆ ದಸರಾ ವಸ್ತು ಪ್ರದರ್ಶನ 8ಕೋಟಿಗೆ ಮಾರಿ ಪ್ರವಾಸಿಗರಿಗೆ ಮೂಲಭೂತ ಸೌಲಭ್ಯ ನೀಡದೇ ಕಣ್ಮುಚ್ಚಿ ಕುಳಿತಿರುವ ಪ್ರಾಧಿಕಾರದ ನಡೆ ಸಾರ್ವಜನಿಕರಿಗೆ ಬೇಸರ ತಂದಿದೆ. ಸಾಮಾಜಿಕ ಹೋರಾಟಗಾರರು, ಕನ್ನಡಪರ ಸಂಘಟನೆಗಳು ಪ್ರಾಧಿಕಾರದ ದುರಾಡಳಿತ, ನಿರ್ಲಕ್ಷ್ಯ ವಿರುದ್ಧ ಧ್ವನಿಯೆತ್ತುವ ಮುನ್ನವೇ ಜಿಲ್ಲಾಡಳಿತ ಎಚ್ಚೆತ್ತುಕೊಂಡರೆ ಒಳಿತು. ಪ್ರತಿವರ್ಷ ವ್ಯವಸ್ಥಿತವಾಗಿ ದಸರಾ ವಸ್ತುಪ್ರದರ್ಶನ ನಡೆದುಕೊಂಡು ಬರುತ್ತಿತ್ತು. ಆದರೆ ಇಲ್ಲಿಯವರೆಗೂ ದಸರಾ ವಸ್ತು ಪ್ರದರ್ಶನದಲ್ಲಿ ಅಗ್ನಿಶಾಮಕ ದಳ, ಆಂಬುಲೆನ್ಸ್, ವೈದ್ಯಕೀಯ ಸಿಬ್ಬಂದಿ, ತುರ್ತು ಪ್ರಾಥಮಿಕ ಆರೋಗ್ಯ ಘಟಕವಿಲ್ಲ. ಆವರಣದಲ್ಲಿ ಎಲ್ಲಿಯೂ ಸಹ ಸಾರ್ವಜನಿಕರಿಗೆ ಉಚಿತ ಕುಡಿಯುವ ನೀರಿನ ವ್ಯವಸ್ಥೆ ಮಾಡಿಲ್ಲ, ಶೌಚಾಲಯವೆಲ್ಲಿದೆ ಎನ್ನುವ ಮಾಹಿತಿ ನಾಮಫಲಕವಿಲ್ಲ. ಶೌಚಾಲಯಕ್ಕೆ ಹೋದರೆ ಅಲ್ಲಿ ಕತ್ತಲು ಹೆಚ್ಚಿದೆ. ಕುಡುಕರ ಹಾವಳಿ ಹೆಚ್ಚಾಗಿದೆ. ಇದರಿಂದ ಮಹಿಳೆಯರಿಗೆ ತೊಂದರೆಯಾಗುತ್ತಿದೆ. ಸರಗಳ್ಳರ ಭಯ ಕೂಡ ಕಾಡುತ್ತಿದೆ. ಇನ್ನು ಸಾರ್ವಜನಿಕರಿಗೆ ಅವಶ್ಯಕವಿರುವ ಮೊಬೈಲ್ ನೆಟ್‌ವರ್ಕ್, ATM ಸೇವೆ ಸಹ ಇಲ್ಲ. ಮತ್ತು ಎಲ್ಲಾ ಮಳಿಗೆಗಳಲ್ಲೂ ಪ್ಲಾಸ್ಟಿಕ್ ಬಳಕೆ ಹೆಚ್ಚಾಗಿದೆ, ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮವಿಲ್ಲದೇ ಪಿ. ಕಾಳಿಂಗರಾವ್ ಗಾನ ಮಂಟಪ ಕತ್ತಲಿನ ಸ್ಮಶಾನ ಮೌನವಾಗಿದೆ, ಕಲಾವಿದರನ್ನು ಕಡೆಗಣಿಸಲಾಗಿದೆ. ಮನರಂಜನೆ ಕಾರ್ಯಕ್ರಮ ಸಂಪೂರ್ಣವಾಗಿ ಕೈಬಿಟ್ಟಂತಿದೆ. ರಾಜಾರೋಷವಾಗಿ ಸಿಗರೇಟ್ ಮಾರಲಾಗುತ್ತಿದೆ. ಜನರು ಪ್ರತಿಭಟನೆ, ಧಿಕ್ಕಾರ ಘೋಷಣೆ ಕೂಗುವ ಮುನ್ನ ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳು ಚುರುಕಾದರೆ ಒಳಿತು, ಇಲ್ಲವಾದರೆ ಪ್ರತಿಭಟನೆ ದಾರಿ ಹಿಡಿಯಬೇಕಾಗುತ್ತದೆ.

–ಚೇತನ್ ಕಾಂತರಾಜು, ಅಧ್ಯಕ್ಷರು, ಜೈಭೀಮ್ ಸ್ಪಂದನ ವೇದಿಕೆ, ಮೈಸೂರು.

ಒಡೆಯರ್, ಕುವೆಂಪು ಎಕ್ಸ್‌ಪ್ರೆಸ್ ನಾಮಕರಣ ಸ್ವಾಗತಾರ್ಹ

ಮಾನ್ಯರೆ,

ಮೈಸೂರು ಎಂದರೆ ತಕ್ಷಣ ಕಣ್ಮುಂದೆ ಬರುವುದು ಮಹಾರಾಜರು. ಅವರು ನಿರ್ಮಿಸಿದ ಅರಮನೆಗಳು, ಸ್ಮಾರಕಗಳು, ರಸ್ತೆಗಳು, ಅಣೆಕಟ್ಟುಗಳು, ಗ್ರಾಮಗಳು, ಒಂದೇ ಎರಡೇ...ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ನಮ್ಮ ಕನ್ನಡ ಸಂಸ್ಕೃತಿ, ಇಲ್ಲಿನ ಪರಂಪರೆ, ಲಲಿತ ಕಲೆಗಳು ಮುಂದಿನ ತಲೆಮಾರುಗಳಿಗೆ ತಲುಪಲಿ ಎಂದು ಶ್ರಮಿಸಿ ಉಳಿಸಿ ಬೆಳೆಸಿದ ಕೀರ್ತಿ ಅವರದ್ದು. ಹಾಗಾಗಿ ಒಡೆಯರ್ ಎಂದು ರೈಲಿಗೆ ನಾಮಕರಣ ಮಾಡಿದ್ದು ನಿಜಕ್ಕೂ ಸಂತಸದ ಸಂಗತಿ. ಇದು ನಾವುಗಳು ಅವರಿಗೆ ಸಲ್ಲಿಸುವ ಒಂದು ಪುಟ್ಟ ಗೌರವ ಅಷ್ಟೇ.

ಮೈಸೂರು–ಶಿವಮೊಗ್ಗ ರೈಲಿಗೆ ಕುವೆಂಪು ಹೆಸರನ್ನು ನಾಮಕರಣ ಮಾಡಿದ್ದು ತುಂಬಾ ಸೂಕ್ತ ಹಾಗೂ ಆಪ್ತವಾಗಿದೆ. ಏಕೆಂದರೆ ಇದು ಕೇವಲ ಸಂಪರ್ಕವಷ್ಟೇ ಅಲ್ಲದೆ ಭಾವ ಬೆಸುಗೆಯ ಸಂಕೇತವೂ ಹೌದು ಎಂದರೆ ತಪ್ಪಾಗಲಾರದು. ಕುವೆಂಪು ಅವರು ಶಿವಮೊಗ್ಗ ಜಿಲ್ಲೆಯಲ್ಲಿ ಜನಿಸಿ ಬೆಳೆದು, ಮೈಸೂರಿನಲ್ಲಿ ವಾಸ್ತವ್ಯ ಮಾಡಿ ಸಾಹಿತ್ಯ ದಿಗ್ಗಜರಾಗಿ ಮೆರೆದು ಇಲ್ಲಿಯೇ ತಮ್ಮ ಕೊನೆಯ ದಿನಗಳನ್ನು ಕಳೆದರು. ಹಾಗಾಗಿ ಮೈಸೂರು ಶಿವಮೊಗ್ಗದ ನಂಟು ಈ ರೀತಿ ಬೆಸೆದಿದ್ದು ಆನಂದದ ವಿಚಾರ.

ಇನ್ಮುಂದೆ ಒಡೆಯರ್ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣಿಸುವಾಗ ಮೈಸೂರು ಮಹಾರಾಜರ ನೆನಪು ಮಾಡಿಕೊಂಡು ವಂದಿಸಿದರೆ, ಕುವೆಂಪು ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣಿಸುವಾಗ ಅವರ ಕಾವ್ಯ, ವಿಚಾರಧಾರೆ, ಕೃತಿಗಳನ್ನು ನೆನಪಿಸಿಕೊಂಡರೆ ನಾವುಗಳು ಅವರಿಗೆ ಸಲ್ಲಿಸುವ ಗೌರವ. ಇತಿಹಾಸ ನಿರ್ಮಿಸಿದ ಇಬ್ಬರು ಅಗ್ರಗಣ್ಯರು ನಿತ್ಯ ಸ್ಮರಣೀಯರಾಗಿದ್ದು ಅಭಿನಂದನೀಯ.

–ಪುಷ್ಪಲತ ಫಣಿರಾಜ್, ಅಗ್ರಹಾರ ಮೈಸೂರು.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಭಗವದ್ಗೀತೆ ಇಂದು ಪ್ರಸ್ತುತವೇ?

ಕರ್ನಾಟಕ ಸರ್ಕಾರವು ನೀತಿ ಪಾಠ ಕ್ರಮದಲ್ಲಿ ಭಗವದ್ಗೀತೆಯ ಕೆಲವು ಅಂಶಗಳನ್ನು ಸೇರಿಸುವ ಉದ್ದೇಶವನ್ನು ಹೊಂದಿದೆಯೆಂದು ಪತ್ರಿಕಾ ವರದಿಗಳಲ್ಲಿ ಕಂಡಿದ್ದೇನು. ಇದು ಅತ್ಯಂತ ಆವಶ್ಯಕವಾಗಿ ಆಗಲೇಬೇಕಾದ ಕಾರ್ಯವೆಂದು ಕೆಲವರೂ, ಇದು ಬೇಕಾಗಿಲ್ಲವೆಂದು ಮತ್ತೆ ಕೆಲವರೂ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಗೀತೆಯಲ್ಲಿ ಹೇಳಿದ ಕೆಲವು ವಿಚಾರಗಳು ಸಂವಿಧಾನ ವಿರೋಧಿ ಎಂಬ ಭಾವನೆಯನ್ನೂ ಕೆಲವರು ಪತ್ರಿಕೆಗಳಲ್ಲಿ ಬರೆದಿದ್ದಾರೆ. ನಿಷ್ಪಕ್ಷಪಾತವಾಗಿ, ಯಾವ ಪೂರ್ವಾಗ್ರಹವನ್ನೂ ಇಟ್ಟುಕೊಳ್ಳದೆ ಈ ವಿಷಯವನ್ನು ಪರಿಶೀಲಿಸಿ ನಮ್ಮ ಅಭಿಪ್ರಾಯವನ್ನು ರೂಪಿಸಿಕೊಳ್ಳುವುದು ಲೇಸು. ಭಗವದ್ಗೀತೆಯನ್ನು ಸಾಮಾನ್ಯ ಮನುಷ್ಯನಾಗಿ ಮಾತ್ರ ನಾನು ಓದಿರುವುದು. ಇದರಲ್ಲಿ ಅದ್ವೈತ ಸಿದ್ಧಾಂತವನ್ನು ಸಮರ್ಥಿಸಿದ್ದಾರೆ ಅಥವಾ ದ್ವೈತ ಸಿದ್ಧಾಂತವನ್ನು ಎತ್ತಿ ಹಿಡಿದಿದ್ದಾರೆ ಎಂಬ ನಿರ್ಧಾರವನ್ನು ಮೊದಲೇ ತೆಗೆದುಕೊಂಡು ಅದಕ್ಕೆ ಅನುಕೂಲವಾದ ಅಥವಾ ಪ್ರತಿಕೂಲವಾದ ಅಂಶಗಳನ್ನು ಮಾತ್ರ ಹುಡುಕುವ ಪ್ರಯತ್ನವನ್ನು ನಾನು ಮಾಡುವುದಿಲ್ಲ. ಶ್ರೀಕೃಷ್ಣನು ಸಾಕ್ಷಾತ್ ಭಗವಂತನೇ ಆಗಿದ್ದುದರಿಂದ ಅವನು ಹೇಳಿದ ಪ್ರತಿಯೊಂದು ಅಕ್ಷರವೂ ಪದವೂ ವಾಕ್ಯವೂ ಪರಮಸತ್ಯ, ಪರಮ ಪವಿತ್ರ ಎಂಬ ನಿರ್ಣಯವನ್ನೂ ನಾನು ಮಾಡಿಲ್ಲ. ಭಗವದ್ಗೀತೆ ನಮ್ಮ ದೇಶದ ಒಂದು ಗ್ರಂಥ, ಸಕಲ ಮಾನವರಿಗೆ ಹಿತವನ್ನು, ಧರ್ಮವನ್ನು, ಕರ್ತವ್ಯವನ್ನು ಬೋಧಿಸಲು ರಚಿತವಾದ ಗ್ರಂಥ. ರಚಿತವಾದ ಕಾಲದಲ್ಲಿ ಅದರ ಎಲ್ಲಾ ವಿಚಾರಗಳೂ ಪ್ರಸ್ತುತವಾಗಿರಬಹುದು. ಇಂದು ನಮಗೆ ಅದರಲ್ಲಿ ಪ್ರಸ್ತುತವಾದುದು, ಪ್ರಯೋಜನವತ್ತಾದುದು ಏನಾದರೂ ಇದೆಯೇ? ಎಂಬುದು ನನ್ನ ಮುಂದೆ ಇರುವ ಪ್ರಶ್ನೆ. ಜ್ಞಾನಿಯಾಗಿ ಭಗವದ್ಗೀತೆಯನ್ನು ನೋಡುತ್ತಿಲ್ಲ, ಜಿಜ್ಞಾಸುವಾಗಿ ಮಾತ್ರ ನೋಡುತ್ತಿದ್ದೇನೆ. ನನ್ನ ತೀರ್ಮಾನಗಳು ಯಾವಾಗಲೂ ಸರಿಯಾಗಿರುತ್ತವೆ ಎಂಬ ಖಚಿತತೆಯೂ ನನಗಿಲ್ಲ. ವಿಚಾರ ಮಾಡುವುದು ಮಾತ್ರ ನನ್ನ ಕಾರ್ಯ.

ಹಿನ್ನೆಲೆ : ಭಗವದ್ಗೀತೆ ಮಹಾಭಾರತದ ಭೀಷ್ಮ ಪರ್ವದ ಆದಿಯಲ್ಲಿದೆ. ಇದರಲ್ಲಿ ಹದಿನೆಂಟು ಅಧ್ಯಾಯಗಳೂ ಏಳು ನೂರು ಶ್ಲೋಕಗಳೂ ಇವೆ. ಅಭಿನವ ಗುಪ್ತರು ವ್ಯಾಖ್ಯಾನಿಸಿರುವ ಕಾಶ್ಮೀರದ ಪಾಠದಲ್ಲಿ ಕೆಲವು ಹೆಚ್ಚಿನ ಶ್ಲೋಕಗಳಿವೆ. ಕೆಲವು ಪಾಠಾಂತರಗಳೂ ಅಲ್ಲಿವೆ. ಆದರೆ ಶ್ರೀ ಶಂಕರಾಚಾರ್ಯರು ವ್ಯಾಖ್ಯಾನಿಸಿರುವ ಏಳು ನೂರು ಶ್ಲೋಕಗಳನ್ನೊಳಗೊಂಡ ಭಗವದ್ಗೀತೆಯ ಪಾಠವೇ ಮೂಲವೆಂದು ಗ್ರಹಿಸಿ ಅದರ ಪ್ರಸ್ತುತತೆಯನ್ನು ಚರ್ಚಿಸುತ್ತೇನೆ. ಶಂಕರಾಚಾರ್ಯರಿಗೂ ಮುಂಚೆ ಭಗವದ್ಗೀತೆಗೆ ಹಲವರು ವ್ಯಾಖ್ಯಾನಗಳನ್ನು ಬರೆದಿದ್ದಿರಬಹುದು. ಆದರೆ ಅವು ನಮಗೆ ದೊರಕಿಲ್ಲ. ಶಂಕರೋತ್ತರ ಕಾಲದಲ್ಲಿ ಅನೇಕ ವ್ಯಾಖ್ಯಾನಗಳು ಸಂಸ್ಕೃತದಲ್ಲೂ ಇತರ ಭಾಷೆಗಳಲ್ಲೂ ರಚಿತವಾಗಿವೆ. ಅನೇಕ ಶ್ಲೋಕಗಳನ್ನು ಅರ್ಥ ಮಾಡಿಕೊಳ್ಳಲು ಆ ವ್ಯಾಖ್ಯಾನಗಳು ಆವಶ್ಯಕ.



ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳಲ್ಲಿ ಒಂದೊಂದಕ್ಕೂ ಒಂದೊಂದು ಹೆಸರನ್ನು ಕೊಟ್ಟಿದ್ದಾರೆ. ಈ ಹೆಸರುಗಳೆಲ್ಲ ಯೋಗ ಶಬ್ದಾಂತವಾಗಿವೆ. ಅರ್ಜುನ ವಿಷಾದಯೋಗ, ಸಾಂಖ್ಯಯೋಗ, ಕರ್ಮಯೋಗ, ಜ್ಞಾನಕರ್ಮ ಸಂನ್ಯಾಸಯೋಗ, ಕರ್ಮ ಸಂನ್ಯಾಸ ಯೋಗ, ಆತ್ಮ ಸಂಯಮಯೋಗ, ಜ್ಞಾನವಿಜ್ಞಾನ ಯೋಗ, ಅಕ್ಷರ ಬ್ರಹ್ಮಯೋಗ, ರಾಜ ವಿದ್ಯಾರಾಜಗುಹ್ಯ ಯೋಗ, ವಿಭೂತಿ ಯೋಗ, ವಿಶ್ವರೂಪ ದರ್ಶನ ಯೋಗ, ಭಕ್ತಿಯೋಗ, ಕ್ಷೇತ್ರ ಕ್ಷೇತ್ರಜ್ಞ ವಿಭಾಗ ಯೋಗ, ಗುಣತ್ರಯ ವಿಭಾಗ ಯೋಗ, ಪುರುಷೋತ್ತಮ ಯೋಗ, ದೈವಾಸುರ ಸಂಪದ್ವಿಭಾಗ ಯೋಗ, ಶ್ರದ್ಧಾತ್ರಯ ವಿಭಾಗ ಯೋಗ, ಮೋಕ್ಷ ಸಂನ್ಯಾಸ ಯೋಗ ಎಂಬ ಹೆಸರುಗಳನ್ನು ಕ್ರಮವಾಗಿ ಹದಿನೆಂಟು ಅಧ್ಯಾಯಗಳಿಗೆ ಕೊಟ್ಟಿರುವುದನ್ನು ಕಾಣುತ್ತೇವೆ. ಮಹಾಭಾರತದಲ್ಲಿ ಈ ಯಾವ ಹೆಸರುಗಳೂ ಇಲ್ಲ. ಅಲ್ಲಿ ಪ್ರಥಮೋಽಧ್ಯಾಯ, ದ್ವಿತೀಯೋಽಧ್ಯಾಯ: ಇತ್ಯಾದಿ ಮಾತ್ರ ಇದೆ. ಸಾಂಖ್ಯ ಯೋಗ ಇತ್ಯಾದಿ ಹೆಸರುಗಳನ್ನು ಯಾರು ಕೊಟ್ಟರೋ ತಿಳಿಯದು. ಈ ಹೆಸರುಗಳು ಯಥಾರ್ಥವೆಂದು ಹೇಳುವಂತೆಯೂ ಇಲ್ಲ. ಎರಡನೆಯ ಅಧ್ಯಾಯ ಸಾಂಖ್ಯಯೋಗವೆಂಬ ಹೆಸರನ್ನು ಹೊಂದಿದ್ದರೂ ಅದರಲ್ಲಿ ಕರ್ಮಕ್ಕೆ ಸಂಬಂಧಿಸಿದ ಹಲವು ಶ್ಲೋಕಗಳಿವೆ. ಸಾಂಖ್ಯಕ್ಕೆ ಸಂಬಂಧಿಸಿದ ಪ್ರಕೃತಿ–ಪುರುಷ ಎಂಬ ತತ್ತ್ವಗಳ ವಿವೇಚನೆ ಹದಿಮೂರನೆಯ ಅಧ್ಯಾಯದಲ್ಲಿದೆ ಮೂರನೆಯ ಅಧ್ಯಾಯವನ್ನು ಕರ್ಮಯೋಗ ಎಂದು ಕರೆದಿದ್ದರೂ ಕರ್ಮದ ವಿಷಯ ಹಲವು ಅಧ್ಯಾಯಗಳಲ್ಲಿ ಹಂಚಿ ಹೋಗಿದೆ.

ಪ್ರಸ್ತುತತೆಯ ಪ್ರಶ್ನೆ

ಮಹಾಭಾರತ ಯುದ್ಧ ಈಗ್ಗೆ ಐದು ಸಾವಿರ ವರ್ಷಗಳ ಹಿಂದೆ ನಡೆದಿರಬಹುದು. ಅದನ್ನು ವ್ಯಾಸರು ಯಾವಾಗ ಇತಿಹಾಸದ ರೂಪದಲ್ಲಿ ಬರೆದು ಎರಡು ಸಾವಿರ ವರ್ಷಗಳಿಗಿಂತ ಹೆಚ್ಚು ಕಾಲ ಸರಿದಿದೆ. ಈಗ ಕಾಲ ಬದಲಾಗಿದೆ. ಹಿಂದಿನದು ಈಗ ಹೇಗೆ ಪ್ರಸ್ತುತ? ಎಂಬುದು ಮೊದಲನೆಯ ಪ್ರಶ್ನೆ. ಅರ್ಜುನ ಒಬ್ಬ ಯೋಧ. ಅವನನ್ನು ಯುದ್ಧದಲ್ಲಿ ತೊಡಗಿಸಲು ಕೃಷ್ಣನು ಗೀತೆಯನ್ನು ಉಪದೇಶಿಸಿದನು.

> ಭಗವದ್ಗೀತೆ ಅಧ್ಯಾತ್ಮ ವಿಷಯಗಳನ್ನು ಹೇಳುತ್ತದೆ. ಕೇವಲ ಲೌಕಿಕದಲ್ಲಿ ಆಸಕ್ತರಾದ ನಮಗೆ ಗೀತೆ ಹೇಗೆ ಪ್ರಸ್ತುತ? ಎಂಬುದು ಮೂರನೆಯ ಪ್ರಶ್ನೆ. ಭಗವದ್ಗೀತೆ ಕೇವಲ ಆಧ್ಯಾತ್ಮಿಕ ವಿಷಯಗಳನ್ನು ಬೋಧಿಸುತ್ತಿಲ್ಲ. ಜೀವನೋಪಯೋಗಿಯಾದ ಅನೇಕ ವಿಷಯಗಳನ್ನೂ ಬೋಧಿಸುತ್ತಿದೆ. ಕೃಷ್ಣನನ್ನು ಗೀತೆಯು ಯೋಗೇಶ್ವರ ಎಂದು ಕರೆದಿದೆ. ಅವನು ಉಪದೇಶಿಸಿದ ಯೋಗ ಇಂದು ಭಾರತದಲ್ಲಿ ಮಾತ್ರವಲ್ಲ, ಪ್ರಪಂಚದ ಎಷ್ಟೋ ರಾಷ್ಟ್ರಗಳಲ್ಲಿ ಮನ್ನಣೆಯನ್ನು ಪಡೆದಿದೆ.

ಅದು ನಮಗೆ ಏಕೆ ಬೇಕು? ಎಂಬುದು ಎರಡನೆಯ ಪ್ರಶ್ನೆ. ಗೀತೆಯಲ್ಲಿರುವುದು ಆತ್ಮ–ಪರಮಾತ್ಮರ ವಿಚಾರ. ಲೋಕ ವ್ಯಾಪಾರದಲ್ಲಿ ಮುಳುಗಿರುವ ನಮಗೆ ಅಧ್ಯಾತ್ಮ ಹೇಗೆ ಪ್ರಯೋಜನಕಾರಿ? ಎಂಬುದು ಮೂರನೆಯ ಪ್ರಶ್ನೆ.

ಪ್ರಶ್ನೆಗಳ ಉತ್ತರ

ಹಳೆಯದಾಯಿತೆಂದು ಎಲ್ಲವೂ ಅಪ್ರಸ್ತುತವಾಗುವುದಿಲ್ಲ. ಹಳೆಯ ಬೇರು ಹೊಸ ಚಿಗುರನ್ನು ಉತ್ಪಾದಿಸುತ್ತದೆ. ಅಶೋಕನ ಶಾಸನಗಳು ಎರಡು ಸಾವಿರದ ಮುನ್ನೂರು ವರ್ಷ ಹಳೆಯವಾದರೂ ಅವುಗಳ ಪ್ರಾಮುಖ್ಯ ಇದ್ದೇ ಇದೆ ಅದಕ್ಕೂ ಹಿಂದಿನ ಬುದ್ಧನ ಉಪದೇಶಗಳನ್ನು ಈಗಲೂ ಅನೇಕರು ಗೌರವಿಸುತ್ತಾರೆ. ರಾಮಾಯಣವನ್ನು ಇಂದೂ ಓದುತ್ತೇವೆ, ಅದರ ಕಥೆಯನ್ನು ಚಲನಚಿತ್ರಗಳಲ್ಲಿ ನೋಡುತ್ತೇವೆ. ಅವುಗಳು ಅಮೂಲ್ಯವಾಗಿಯೇ ಉಳಿದಿವೆ. ಹಾಗೆ ಭಗವದ್ಗೀತೆಯ ತತ್ತ್ವಗಳು ಶಾಶ್ವತ. ಅವು ಇಂದು ಮಾತ್ರವಲ್ಲ, ಮುಂದಿನ ಕಾಲದಲ್ಲೂ ಪ್ರಸ್ತುತವೇ.

**ಉದ್ಧರೇದ್ ಆತ್ಮನಾತ್ಮಾನಂ
ನಾತ್ಮಾನಮವಸಾದಯೇತ್ ।
ಆತ್ಮೈವ ಹ್ಯಾತ್ಮನೋ ಬಂಧುಃ ಆತ್ಮೈವ
ರಿಪುರಾತ್ಮನಃ ॥**

ಎಂಬ ಗೀತಾವಾಕ್ಯವನ್ನು ನೋಡೋಣ. ''ಪ್ರತಿಯೊಬ್ಬ ವ್ಯಕ್ತಿಯೂ ತನ್ನನ್ನು ತಾನೇ ಉದ್ಧರಿಸಿಕೊಳ್ಳಬೇಕು, ತನ್ನನ್ನು ತಾನೇ ಹಾಳು ಮಾಡಿಕೊಳ್ಳಬಾರದು. ತನಗೆ ತಾನೇ ಬಂಧು, ತನಗೆ ತಾನೇ ಶತ್ರು" ಎಂಬುದು ಇದರ ಭಾವಾರ್ಥ. ಕಷ್ಟದಲ್ಲಿರುವ ಯಾರಿಗಾದರೂ ಇದು ಧೈರ್ಯವನ್ನು ತುಂಬುವ ವಾಕ್ಯ. ಆತ್ಮವಿಶ್ವಾಸವನ್ನುಳ್ಳವನು ಎಂದಾದರೂ ಕಷ್ಟಗಳನ್ನು ದಾಟಬಲ್ಲನು. ಇನ್ನು ಯಾರೋ ಬಂದು ನನ್ನನ್ನು ಮೇಲೆ ಎತ್ತುವರು ಎಂದು ಸುಮ್ಮನಿದ್ದರೆ ವ್ಯಕ್ತಿ ಕಷ್ಟಗಳ ಹೊಳೆಯಲ್ಲಿ ಮುಳುಗಿ ಹೋಗುವನು. ಹಾಗೆ ಮಾಡಿದರೆ ತನಗೆ ತಾನೇ ಶತ್ರು ಎಂಬ ತತ್ತ್ವವನ್ನಿದು ತಿಳಿಸುತ್ತದೆ. ಇದು ದ್ವಾಪರಯುಗದಲ್ಲಿ ಮಾತ್ರ ಸತ್ಯ, ಈಗ ಅದು ಅಪ್ರಸ್ತುತ ಎನ್ನಲಾಗುವುದೇ?

ಎರಡನೆಯ ಪ್ರಶ್ನೆ–ಅರ್ಜುನ ಯೋಧ. ಅವನಿಗೆ ಹೇಳಿದ್ದು ಯೋಧರಲ್ಲದ ನಮಗೆ ಹೇಗೆ ಪ್ರಸ್ತುತ? ಎಂಬುದು. ಆದರೆ ಇಲ್ಲಿ ಅರಿತುಕೊಳ್ಳಬೇಕಾದ ಸತ್ಯವೇನೆಂದರೆ ನಾವೆಲ್ಲರೂ ಯೋಧರೇ. ನಾವು ಧನುರ್ಬಾಣಗಳನ್ನೋ ಬಂದೂಕುಗಳನ್ನೋ ಹಿಡಿದಿಲ್ಲದಿದ್ದರೂ ಬದುಕೆಂಬ ಯುದ್ಧದಲ್ಲಿ ಹೋರಾಡುತ್ತಿರುವವರೇ. ನಮ್ಮ ಶತ್ರುಗಳು ಕಾಮ, ಕ್ರೋಧ, ಲೋಭ ಇತ್ಯಾದಿಗಳು. ಜೀವನದಲ್ಲಿ ಪರೀಕ್ಷೆಯ ಕ್ಷಣಗಳು ಅನಿವಾರ್ಯ. ಕರ್ತವ್ಯಲೋಪದ ನಿಮಿಷಗಳಲ್ಲಿ ಎದೆಗುಂದುವ ನಮಗೆ ಭಗವದ್ಗೀತೆ ಕರ್ತವ್ಯ ಮಾರ್ಗವನ್ನು ತೋರಿಸುತ್ತದೆ. ಆದ್ದರಿಂದಲೇ ಪ್ರಾಚೀನವಾದ ಆಚಾರ್ಯರೂ ಆಧುನಿಕರಾದ ಬಾಲಗಂಗಾಧರ ತಿಲಕ್, ಮಹಾತ್ಮ ಗಾಂಧಿ ಮುಂತಾದ ನಾಯಕರೂ ಸಮಸ್ಯೆಗಳು ಎದುರಾದಾಗ ಗೀತೆಯಲ್ಲಿ ಪರಿಹಾರಗಳನ್ನು ಕಂಡುಕೊಂಡರು.

ಭಗವದ್ಗೀತೆ ಅಧ್ಯಾತ್ಮ ವಿಷಯಗಳನ್ನು ಹೇಳುತ್ತದೆ. ಕೇವಲ ಲೌಕಿಕದಲ್ಲಿ ಆಸಕ್ತರಾದ ನಮಗೆ ಗೀತೆ ಹೇಗೆ ಪ್ರಸ್ತುತ? ಎಂಬುದು ಮೂರನೆಯ ಪ್ರಶ್ನೆ. ಭಗವದ್ಗೀತೆ ಕೇವಲ ಆಧ್ಯಾತ್ಮಿಕ ವಿಷಯಗಳನ್ನು ಬೋಧಿಸುತ್ತಿಲ್ಲ. ಜೀವನೋಪಯೋಗಿಯಾದ ಅನೇಕ ವಿಷಯಗಳನ್ನೂ ಬೋಧಿಸುತ್ತಿದೆ. ಕೃಷ್ಣನನ್ನು ಗೀತೆಯು ಯೋಗೇಶ್ವರ ಎಂದು ಕರೆದಿದೆ. ಅವನು ಉಪದೇಶಿಸಿದ ಯೋಗ ಇಂದು ಭಾರತದಲ್ಲಿ ಮಾತ್ರವಲ್ಲ, ಪ್ರಪಂಚದ ಎಷ್ಟೋ ರಾಷ್ಟ್ರಗಳಲ್ಲಿ ಮನ್ನಣೆಯನ್ನು ಪಡೆದಿದೆ. ಅಮೆರಿಕೆಯಲ್ಲಿ ಸಾವಿರಾರು ಯೋಗ ಶಾಲೆಗಳಿವೆ. ಲಕ್ಷಾಂತರ ಪುರುಷರೂ ಸ್ತ್ರೀಯರೂ ಅಲ್ಲಿ ಯೋಗಾಭ್ಯಾಸವನ್ನು ಮಾಡುತ್ತಿದ್ದಾರೆ. ಅವರು ಅಧ್ಯಾತ್ಮ ಪ್ರಯೋಜನಕ್ಕಾಗಿ ಯೋಗವನ್ನು ಅಭ್ಯಸಿಸುತ್ತಿಲ್ಲ. ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕಾಗಿ ಯೋಗಾಭ್ಯಾಸಿಗಳಾಗಿದ್ದಾರೆ. ಭಾರತದಲ್ಲೂ ಅನೇಕ ವೈದ್ಯರು ರೋಗಿಗಳಿಗೆ 'ಯೋಗಾಭ್ಯಾಸ ಮಾಡಿರಿ' ಎಂದು ಸಲಹೆಯನ್ನು ನೀಡುತ್ತಿದ್ದಾರೆ. ಆತ್ಮನಲ್ಲಿ, ಪರಮಾತ್ಮನಲ್ಲಿ ನಂಬಿಕೆ ಇಲ್ಲದವರಿಗೂ ಈ ಸಲಹೆ ಉಪಯುಕ್ತವಾಗುತ್ತಿದೆ. ಬೆಟ್ಟದ ಮೇಲೆ ಋಷಿಗಳು ತಪಸ್ಸು ಮಾಡುತ್ತಿದ್ದರು. ಆದರೆ ಬೆಟ್ಟವನ್ನು ಹತ್ತುವವರೆಲ್ಲ ತಪಸ್ಸು ಮಾಡುವುದಕ್ಕಾಗಿಯೇ ಹತ್ತಬೇಕಾಗಿಲ್ಲ. ಸಾಹಸ ಕ್ರೀಡೆಗಾಗಿ ಕೆಲವರು, ವೃಕ್ಷ ಸಂಪತ್ತನ್ನು ನೋಡಲು ಹಲವರು ಪರ್ವತಾರೋಹಣ ಮಾಡುತ್ತಾರೆ. ತಪಸ್ಸನ್ನು ಮಾಡುವವರೇ ಇಲ್ಲದ ಕಾಲದಲ್ಲಿ ಬೆಟ್ಟಗಳಿಂದ ಪ್ರಯೋಜನವೇನು? ಅವು ಈಗ ಹೇಗೆ ಪ್ರಸ್ತುತ? ಎಂಬ ಪ್ರಶ್ನೆ ಹೇಗೆ ಅಸಂಗತವೋ, ಹಾಗೆ ಅಧ್ಯಾತ್ಮಾಸಕ್ತರಲ್ಲದ ನಮಗೆ ಗೀತೆ ಹೇಗೆ ಪ್ರಸ್ತುತ ಎಂಬ ಪ್ರಶ್ನೆಯೂ ಅಸಂಗತವಾಗಿದೆ. ಗೀತಾಧ್ಯಾಯನದ ಹಲವು ಪ್ರಯೋಜನಗಳಲ್ಲಿ ಅಧ್ಯಾತ್ಮ ಜ್ಞಾನವೂ ಒಂದು. ಹಾಗೆ ನೋಡಿದರೆ ಅರ್ಜುನನು 'ನನಗೆ ಅಧ್ಯಾತ್ಮವನ್ನು ಬೋಧಿಸು, ನಾನು ಮೋಕ್ಷಕಾಂಕ್ಷಿ' ಎಂದು ಎಲ್ಲೂ ಹೇಳಿಲ್ಲ. ಮುಂದೆ ಅವನು ಧ್ಯಾನಾಸಕ್ತನಾಗಿ ತಪಸ್ಸಿಗೆ ಕುಳಿತುಕೊಂಡನೆಂದೂ ಮಹಾಭಾರತದಲ್ಲಿ ಹೇಳಿಲ್ಲ.

ಆದ್ದರಿಂದ ಅಧ್ಯಾತ್ಮಮಗ್ನರಿಗೆ ಹೇಗೋ ಹಾಗೆ ಲೋಕ ವ್ಯವಹಾರದಲ್ಲಿ ಮಗ್ನರಾದವರಿಗೂ ಭಗವದ್ಗೀತೆ ಪ್ರಸ್ತುತ.

ಜನಸಂಖ್ಯಾ ಸ್ಫೋಟ ತಡೆಯಲು ಸಕಾಲವಿದು...

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖ್ಯಸ್ಥರಾದ ಮೋಹನ್ ಭಾಗವತ್ ದೇಶದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ಕಡಿವಾಣ ಹಾಕಲು ಜನಸಂಖ್ಯಾ ತಡೆ ಕಾಯಿದೆಯನ್ನು ಜಾರಿಗೆ ತರಬೇಕೆಂದು ಸೂಚಿಸಿರುವುದು ರಾಷ್ಟ್ರೀಯ ಮಟ್ಟದ ಚರ್ಚೆಗೆ ಗ್ರಾಸವಾಗಿದೆ. ದೇಶದಲ್ಲಿ ಜನಸಂಖ್ಯೆ ಇದೇ ರೀತಿಯಲ್ಲಿ ಏರುತ್ತಿದ್ದರೆ; ಮುಂದಿನ 50 ವರ್ಷಗಳ ನಂತರ ನಮ್ಮ ದೇಶ ಎಷ್ಟು ಜನರಿಗೆ ಆಹಾರ ನೀಡುವ ಸ್ಥಿತಿಯಲ್ಲಿರುತ್ತದೆ ಎಂದು ಪ್ರಶ್ನಿಸಿರುವ ಭಾಗವತ್ ಜನಸಂಖ್ಯಾ ತಡೆ ಕಾಯ್ದೆಯನ್ನು ಜಾರಿಗೊಳಿಸಲು ಇದು ಸಕಾಲವೆಂದು ಇತ್ತೀಚೆಗೆ ಮಹಾರಾಷ್ಟ್ರದ ನಾಗಪುರದಲ್ಲಿ ಜರುಗಿದ ಆರ್‌ಎಸ್‌ಎಸ್ ಸಂಸ್ಥಾಪನಾ ದಿನಾಚರಣೆಯಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಭಾಗವತ್ ಅವರ ಅಭಿಪ್ರಾಯ ನಿಜವೇ ಆಗಿದ್ದು, ನಮ್ಮ ದೇಶದಲ್ಲಿ ಮುಂಬರುವ ವರ್ಷಗಳಲ್ಲಿ ಜನಸಂಖ್ಯಾ ಸ್ಫೋಟ ಸಂಭವಿಸಬಹುದೆಂಬ ಆತಂಕ ಪ್ರಜ್ಞಾವಂತ ನಾಗರಿಕರನ್ನು ಕಾಡುತ್ತಿದೆ. 2030ರ ವೇಳೆಗೆ ಜನಸಂಖ್ಯೆಯಲ್ಲಿ ನಮ್ಮ ದೇಶ ಚೀನಾವನ್ನು ಹಿಂದಿಕ್ಕಿ ಮೊದಲ ಸ್ಥಾನಕ್ಕೆ ಏರಲಿದೆ ಎಂಬ ವಿಶ್ವಸಂಸ್ಥೆಯ ಎಚ್ಚರಿಕೆ ಇಲ್ಲಿ ಸ್ಮರಣಾರ್ಹವಾಗಿದೆ. ಜನಸಂಖ್ಯೆ ಪರಿಸರದ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದು ಒತ್ತಿ ಹೇಳಿರುವ ಭಾಗವತ್ ಅವರು, ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಜನಸಂಖ್ಯಾ ನೀತಿಯನ್ನು ರೂಪಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಸೂಚಿಸಿದ್ದಾರೆ.

ಅದೇ ರೀತಿ ಜನಸಂಖ್ಯಾ ಕಾನೂನು ಎಲ್ಲಾ ಜನಾಂಗದವರಿಗೂ ಒಂದೇ ರೀತಿಯಲ್ಲಿ ಅನ್ವಯಿಸಬೇಕೆಂದು ಹೇಳಿದ್ದಾರೆ. ಕಳೆದ ಹಲವಾರು ದಶಕಗಳಿಂದ ದೇಶದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ ಬಗ್ಗೆ ತಜ್ಞರು ಎಚ್ಚರಿಕೆ ನೀಡುತ್ತಲೇ ಬಂದಿದ್ದರೂ, ಕೇಂದ್ರ ಸರ್ಕಾರ ಇದರ ಬಗ್ಗೆ ಅಷ್ಟಾಗಿ ಗಮನಹರಿಸಿಲ್ಲ. ಐದಾರು ದಶಕಗಳ ಹಿಂದೆಯೇ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕುಟುಂಬ ಯೋಜನೆಯ ಬಗ್ಗೆ ವ್ಯಾಪಕ ಪ್ರಚಾರ ನೀಡುತ್ತಾ ಬಂದಿದ್ದರೂ ಜನಸಂಖ್ಯೆ ಮಾತ್ರ ಏರುಗತಿಯಲ್ಲಿ ಸಾಗುತ್ತಿದೆ. ಈ ಹಿನ್ನಲೆಯಲ್ಲಿ ಚೈನಾ ಹಾಗೂ ಇತರ ಕೆಲವು ದೇಶದಲ್ಲಿ ಇರುವ ಹಾಗೆ ನಮ್ಮ ದೇಶದಲ್ಲಿ ಸಹ ಜನಸಂಖ್ಯಾ ತಡೆ ಕಾನೂನನ್ನು ಜಾರಿಗೊಳಿಸಬೇಕಾದ ಅಗತ್ಯವಿದೆ.

ವಿಶ್ವದ ಪ್ರಮುಖ 10 ರಾಷ್ಟ್ರಗಳ ಜನಸಂಖ್ಯೆ (2022 ರ ಅಂಕಿ ಅಂಶಗಳ ಪ್ರಕಾರ)

ದೇಶ	ಜನಸಂಖ್ಯೆ
1. ಚೈನಾ	144 ಕೋಟಿ +
2. ಭಾರತ	140 ಕೋಟಿ +
3. ಅಮೆರಿಕಾ	33 ಕೋಟಿ +
4. ಇಂಡೋನೇಷ್ಯಾ	27 ಕೋಟಿ +
5. ಪಾಕಿಸ್ತಾನ	22 ಕೋಟಿ +
6. ಬ್ರೆಜಿಲ್	21 ಕೋಟಿ +
7. ನೈಜಿರಿಯಾ	21 ಕೋಟಿ +
8. ಬಾಂಗ್ಲಾದೇಶ	16 ಕೋಟಿ +
9. ರಷ್ಯಾ	14 ಕೋಟಿ +
10. ಮೆಕ್ಸಿಕೊ	13 ಕೋಟಿ +



> ಕೇಂದ್ರ ಸರ್ಕಾರದ ಮೂಲಗಳ ಪ್ರಕಾರ ಸಂಸತ್ತಿನಲ್ಲಿ 35 ಬಾರಿ ಜನಸಂಖ್ಯೆ ತಡೆ ಮಸೂದೆ ಮಂಡನೆಯಾಗಿದ್ದರೂ, ನಾನಾ ಕಾರಣಗಳಿಂದಾಗಿ ಈ ಕಾಯ್ದೆ ಅಂಗೀಕಾರವಾಗುತ್ತಿಲ್ಲ. 2017ರಲ್ಲಿ ಅಸ್ಸಾಂ ವಿಧಾನಸಭೆ ಜನಸಂಖ್ಯೆ ಮತ್ತು ಮಹಿಳಾ ಸಬಲೀಕರಣ ಮಸೂದೆ ಅಂಗೀಕರಿಸಿತ್ತು. ಇಬ್ಬರು ಮಕ್ಕಳನ್ನು ಹೊಂದಿರುವ ಅಭ್ಯರ್ಥಿಗಳು ಮಾತ್ರ ಸರ್ಕಾರಿ ಹುದ್ದೆಗೆ ಅರ್ಹರಾಗುತ್ತಾರೆ ಎಂಬ ನಿಯಮವನ್ನು ಜಾರಿಗೆ ತಂದಿತ್ತು. 2021 ರಲ್ಲಿ ಈ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ಕೆಲವು ರಾಜ್ಯ ಸರ್ಕಾರಗಳು ಮಿತ ಕುಟುಂಬವನ್ನು ಪ್ರೋತ್ಸಾಹಿಸುವ ಹಲವಾರು ಕ್ರಮಗಳನ್ನು ಅನುಸರಿಸುತ್ತಿವೆಯಾದರೂ ಜನಸಂಖ್ಯೆ ತಡೆಗೆ ಕಠಿಣವಾದ ಕಾನೂನನ್ನು ರೂಪಿಸಿಲ್ಲ.

ಜನಸಂಖ್ಯೆಯ ಹೆಚ್ಚಳದಿಂದ ದೇಶ ನಾನಾ ರೀತಿಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಬಹುಮುಖ್ಯವಾಗಿ ವಸತಿ ಸಮಸ್ಯೆ. ಅದರ ಜೊತೆ ಜೊತೆಗೆ ಆರೋಗ್ಯ, ಆಹಾರ, ಉದ್ಯೋಗ ಮುಂತಾದ ಜ್ವಲಂತ ಸಮಸ್ಯೆಗಳು ಜನರನ್ನು ಕಾಡುತ್ತವೆ. ಜನಸಂಖ್ಯೆ ಹೆಚ್ಚಳದಿಂದ ಪರಿಸರದ ಮೇಲೆ ಭೀಕರವಾದ ಪರಿಣಾಮಗಳು ಉಂಟಾಗುತ್ತಿವೆ. ಮಿತಿ ಮೀರಿದ ನಗರೀಕರಣ ಹಾಗೂ ಕೈಗಾರೀಕರಣದಿಂದಾಗಿ ಅರಣ್ಯ ಪ್ರದೇಶಗಳೆಲ್ಲಾ ಬರಬರುತ್ತಾ ಕಾಂಕ್ರೀಟ್‌ಮಯವಾಗುತ್ತಿದೆ. ಈ ರೀತಿಯ ಪ್ರಾಕೃತಿಕ ಅಸಮತೋಲನ, ಅತಿವೃಷ್ಟಿ, ಅನಾವೃಷ್ಟಿ ಮುಂತಾದ ಪ್ರಾಕೃತಿಕ ವಿಕೋಪಗಳಿಗೂ ಕಾರಣವಾಗುತ್ತಿವೆ. ಇತ್ತೀಚೆಗೆ ದೇಶದಲ್ಲಿ ಸುರಿದ ಅಕಾಲಿಕ ಮಳೆ ಮತ್ತು ಹಿಮಪಾತದಿಂದ ನೂರಾರು ಜನರು ಸಾವಿಗೀಡಾಗಿದ್ದು ಸಾವಿರಾರು ಕೋಟಿ ರೂಪಾಯಿ ನಷ್ಟವಾಗಿರುವುದನ್ನು ಇಲ್ಲಿ ಉಲ್ಲೇಖಿಸಬಹುದು. ಇದರ ಜೊತೆಗೆ ಹುಟ್ಟು ಮತ್ತು ಸಾವಿನ ನಡುವೆ ಇರಬೇಕಾದ ಅನುಪಾತದಲ್ಲಿ ಅಜಗಜಾಂತರವಿದೆ. ಹುಟ್ಟುವವರ ಸಂಖ್ಯೆ ಹೆಚ್ಚಾಗುತ್ತ ಹೋದಂತೆಲ್ಲಾ, ವಸತಿ, ಆಹಾರ, ಉದ್ಯೋಗ ಮುಂತಾದ ಸಮಸ್ಯೆಗಳು ಕೂಡ ಹೆಚ್ಚಾಗುತ್ತವೆ. ಜಗತ್ತಿನ ಪ್ರಮುಖ ರಾಷ್ಟ್ರಗಳು ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಕಡ್ಡಾಯ ಜನಸಂಖ್ಯಾ ತಡೆ ಕಾಯ್ದೆಯನ್ನು ಜಾರಿಗೊಳಿಸಿವೆ.

ಜನಸಂಖ್ಯೆಯ ಹೆಚ್ಚಳ ಪರಿಸರ ಮಾಲಿನ್ಯಕ್ಕೂ ಪರೋಕ್ಷ ರೀತಿಯಲ್ಲಿ ಕಾರಣವಾಗುತ್ತದೆ. ಆದ್ದರಿಂದ ನಮ್ಮ ದೇಶದಲ್ಲಿ ಏರುತ್ತಿರುವ ಜನಸಂಖ್ಯೆಗೆ ಕಡಿವಾಣ ಹಾಕಲು ಈಗಲಾದರೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪ್ರಯತ್ನಿಸಬೇಕಾಗಿದೆ. ಕಡಿಮೆ ಜನಸಂಖ್ಯೆ ಹೊಂದಿರುವ ಜಪಾನ್, ಇಟಲಿ, ಜರ್ಮನಿ ಮುಂತಾದ ದೇಶಗಳು ಬಲಾಢ್ಯ ಆರ್ಥಿಕ ಶಕ್ತಿಶಾಲಿಯಾಗಿ ಹೊರಹೊಮ್ಮಿವೆ. ಆದರೆ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶವಾದ ಭಾರತ ಅನೇಕ ರಂಗಗಳಲ್ಲಿ ಇನ್ನೂ ತೀರಾ ಹಿಂದುಳಿದಿದೆ. ಜನಸಂಖ್ಯೆ ತಡೆಗೆ ಕಾನೂನು ಜಾರಿಗೊಳಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ವಕೀಲ ಅಶ್ವಿನಿ ಉಪಾಧ್ಯಾಯ ಸೇರಿದಂತೆ ಹಲವರು ಸರ್ವೋಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸರ್ವೋಚ್ಚ ನ್ಯಾಯಾಲಯ ಕೇಂದ್ರ ಸರ್ಕಾರ ಹಾಗೂ ಇತರರಿಗೆ ಈ ಬಗ್ಗೆ 3 ತಿಂಗಳ ಒಳಗೆ ಸಮಗ್ರ ವರದಿ ನೀಡಲು ಸೂಚಿಸಿತ್ತು.


ಕೇಂದ್ರ ಸರ್ಕಾರದ ಮೂಲಗಳ ಪ್ರಕಾರ ಸಂಸತ್ತಿನಲ್ಲಿ 35 ಬಾರಿ ಜನಸಂಖ್ಯೆ ತಡೆ ಮಸೂದೆ ಮಂಡನೆಯಾಗಿದ್ದರೂ, ನಾನಾ ಕಾರಣಗಳಿಂದಾಗಿ ಈ ಕಾಯ್ದೆ ಅಂಗೀಕಾರವಾಗುತ್ತಿಲ್ಲ. 2017ರಲ್ಲಿ ಅಸ್ಸಾಂ ವಿಧಾನಸಭೆ ಜನಸಂಖ್ಯೆ ಮತ್ತು ಮಹಿಳಾ ಸಬಲೀಕರಣ ಮಸೂದೆ ಅಂಗೀಕರಿಸಿತ್ತು ಇಬ್ಬರು ಮಕ್ಕಳನ್ನು ಹೊಂದಿರುವ ಅಭ್ಯರ್ಥಿಗಳು ಮಾತ್ರ ಸರ್ಕಾರಿ ಹುದ್ದೆಗೆ ಅರ್ಹರಾಗುತ್ತಾರೆ ಎಂಬ ನಿಯಮವನ್ನು ಜಾರಿಗೆ ತಂದಿತ್ತು. 2021ರಲ್ಲಿ ಈ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ಕೆಲವು ರಾಜ್ಯ ಸರ್ಕಾರಗಳು ಮಿತ ಕುಟುಂಬವನ್ನು ಪ್ರೋತ್ಸಾಹಿಸುವ ಹಲವಾರು ಕ್ರಮಗಳನ್ನು ಅನುಸರಿಸುತ್ತಿವೆಯಾದರೂ ಜನಸಂಖ್ಯೆ ತಡೆಗೆ ಕಠಿಣವಾದ ಕಾನೂನನ್ನು ರೂಪಿಸಿಲ್ಲ. 2021ರಲ್ಲಿ ಉತ್ತರ ಪ್ರದೇಶದ ಕಾನೂನು ಆಯೋಗವು ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರುವ ವ್ಯಕ್ತಿ ಸರ್ಕಾರದಿಂದ ಸಹಾಯ ಧನವನ್ನು ಪಡೆಯಲು ರಾಜ್ಯ ಸರ್ಕಾರದ ಮುಂದೆ ಪ್ರಸ್ತಾವನೆ ಸಲ್ಲಿಸಿದ್ದು, ಇದು ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿ ಇದೆ. ಸರ್ಕಾರಿ ಮೂಲಗಳ ಪ್ರಕಾರ, ದೇಶದ 12 ರಾಜ್ಯಗಳಲ್ಲಿ "ಎರಡು ಮಕ್ಕಳ ಯೋಜನೆ" ಜಾರಿಯಲ್ಲಿದೆ. ಈ ಯೋಜನೆಯ ಪ್ರಕಾರ, ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರುವಂತಹ ವ್ಯಕ್ತಿಗಳು, ಗ್ರಾಮ ಪಂಚಾಯಿತಿ ಅಥವಾ ಇತರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಭಾಗವಹಿಸುವಂತಿಲ್ಲ. ಅವರು ಸರ್ಕಾರಿ ಕೆಲಸಕ್ಕೂ ಅರ್ಜಿ ಸಲ್ಲಿಸುವಂತಿಲ್ಲ. ಇದು ದೇಶದ ರಾಷ್ಟ್ರೀಯ ಜನಸಂಖ್ಯಾ ನೀತಿಯ ಒಂದು ಭಾಗ ವಾಗಿದೆ. ಈ ಹಿನ್ನೆಲೆಯಲ್ಲಿ ಏರುತ್ತಿರುವ ಜನ ಸಂಖ್ಯೆಗೆ ಕಡಿವಾಣ ಹಾಕಲು ಜನಸಂಖ್ಯೆ ಏರಿಕೆ ತಡೆ ಕಾಯ್ದೆ ರೂಪಿಸುವುದು ತೀರಾ ಅಗತ್ಯವಾಗಿದೆ.



■ ಕೆ.ವಿ.ವಾಸು
ವಕೀಲರು ಮತ್ತು ನೋಟರಿ
ವಿವೇಕಾನಂದ ನಗರ, ಮೈಸೂರು. 9341731661

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಉಜ್ಜಯಿನಿಯ ಮಹಾಕಾಲ ಕಾರಿಡಾರ್‌ನ ಮೊದಲ ಹಂತ ಉದ್ಘಾಟಿಸಿದ ಮೋದಿ





ಭೋಪಾಲ್, ಅ.11– ಮಧ್ಯಪ್ರದೇಶದ ಉಜ್ಜಯಿನಿಯಲ್ಲಿ 856 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಮಹಾಕಾಲ ಕಾರಿಡಾರ್‌ನ ಮೊದಲ ಹಂತವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಉದ್ಘಾಟಿಸಿದರು.

ಮಧ್ಯ ಪ್ರದೇಶ ರಾಜಧಾನಿ ಭೋಪಾಲ್‌ನಿಂದ ಸುಮಾರು 200 ಕಿಮೀ ದೂರದಲ್ಲಿರುವ ಉಜ್ಜಯಿನಿಯಲ್ಲಿ ಇಂದು ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಸಂಜೆ 7 ಗಂಟೆ ಸುಮಾರಿಗೆ ಪ್ರಧಾನಿ ಮೋದಿ ಅವರು ಮಹಾಕಾಲ ಕಾರಿಡಾರ್‌ನ ಮೊದಲ ಹಂತ – 'ಮಹಾಕಾಲ್ ಲೋಕ' ಉದ್ಘಾಟಿಸಿದರು. ಮಹಾಕಾಲ್ ಲೋಕ ಕಾರಿಡಾರ್‌ನ ಮೊದಲ ಹಂತದ ಉದ್ಘಾಟನೆಗೆ ಮುನ್ನ ಪ್ರಧಾನಿ ನರೇಂದ್ರ ಮೋದಿ ಉಜ್ಜಯಿನಿಯ ಮಹಾಕಾಳೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. 2ನೇ ಹಂತದ ಮೆಗಾ ಕಾರಿಡಾರ್ ಅಭಿವೃದ್ಧಿ ಯೋಜನೆಯ ಭಾಗವಾಗಿ ಮಹಾಕಾಳೇಶ್ವರ ದೇವಸ್ಥಾನದ ಬಳಿ ಇರುವ ಪಾರಂಪರಿಕ ಕಟ್ಟಡದಲ್ಲಿ ಪಂಚತಾರಾ ಹೋಟೆಲ್ ನಂತಹ ಸೌಲಭ್ಯದೊಂದಿಗೆ 40 ಕೊಠಡಿಗಳ ಧರ್ಮಶಾಲಾವನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಉಜ್ಜಯಿನಿ ಸ್ಮಾರ್ಟ್ ಸಿಟಿ ಯೋಜನೆ ಅಡಿಯಲ್ಲಿ ಮಹಾಕಾಳೇಶ್ವರ ದರ್ಶನ ಪಡೆಯಲು 856 ಕೋಟಿ ವೆಚ್ಚದಲ್ಲಿ 'ಮಹಾಕಾಲ್ ಲೋಕ' ಅನ್ನು ಅಭಿವೃದ್ಧಿಪಡಿಸಲಾಗಿದ್ದು, ಕಾರಿಡಾರ್‌ನಲ್ಲಿ 190ಕ್ಕೂ ಹೆಚ್ಚು ಶಿವನ ಪ್ರತಿಮೆಗಳನ್ನು ಕೆತ್ತಲಾಗಿದೆ. 12 ಮೀ. ಅಗಲದ ಪ್ರದೇಶವನ್ನು ಪಾದಚಾರಿಗಳ ಓಡಾಟಕ್ಕೆ ಮೀಸಲಿಡಲಾಗಿದೆ. ಆಂಬುಲೆನ್ಸ್ ಮತ್ತು ಅಗ್ನಿಶಾಮಕ ವಾಹನಗಳು ಚಲಿಸುವುದಕ್ಕೂ ವ್ಯವಸ್ಥೆ ಇದೆ.

ಟಿಪ್ಪು ಎಕ್ಸ್‌ಪ್ರೆಸ್ ಹೆಸರು ಬದಲಾವಣೆಗೆ ಆಕ್ಷೇಪ

ಮೈಸೂರು, ಅ.11–ಟಿಪ್ಪು ಎಕ್ಸ್‌ಪ್ರೆಸ್‌ಗೆ ಒಡೆಯರ್ ಹೆಸರು ನಾಮಕರಣ ಮಾಡಿರುವುದು ಸಂತಸದ ವಿಚಾರ. ರೈಲಿಗೆ ಮಾತ್ರವಲ್ಲ ರೈಲ್ವೆ ನಿಲ್ದಾಣಕ್ಕೂ ಅವರ ಹೆಸರಿಟ್ಟರೂ ಕಡಿಮೆಯೇ ಎಂದು ಅಭಿಪ್ರಾಯಪಟ್ಟಿರುವ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಲ್ಪಸಂಖ್ಯಾತರ ಘಟಕದ ಸಂಘಟನಾ ಕಾರ್ಯದರ್ಶಿ ಸೈಯದ್ ಫಾರೂಖ್, ಆದರೆ ಟಿಪ್ಪು ಎಕ್ಸ್‌ಪ್ರೆಸ್ ಹೆಸರು ಬದಲಾವಣೆ ಕ್ರಮದ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಒಡೆಯರ್ ಹೆಸರನ್ನು ಉದ್ದೇಶಿತ ಬುಲೆಟ್ ಟ್ರೈನ್‌ಗೆ ಇಡಬಹುದಾಗಿತ್ತು. ಇದು ಕೇವಲ ಚುನಾವಣೆಯಲ್ಲಿ ಲಾಭ ಗಳಿಸುವ ಉದ್ದೇಶವಷ್ಟೆ. ಇಂತಹ ಕ್ರಮದಿಂದ ಎರಡು ಸಮುದಾಯಗಳಲ್ಲಿನ ಸಾಮರಸ್ಯ ಹಾಳು ಮಾಡಿ ಲಾಭ ಮಾಡಿ ಕೊಳ್ಳುತ್ತೇವೆ ಎಂಬುದು ಸಾಧ್ಯವಾಗದ ಮಾತು. ಜನ ಅಭಿವೃದ್ಧಿಗಷ್ಟೇ ಮನ್ನಣೆ ನೀಡುತ್ತಾರೆ. ಅಭಿವೃದ್ಧಿ ಮಾಡಲು ಸಾಧ್ಯವಾಗದವರು ಇಂತಹ ಕೆಲಸ ಕಾರ್ಯದ ಮೂಲಕ ಜನರ ಭಾವನಾತ್ಮಕವಾಗಿ ಸೆಳೆಯಲೆತ್ನಿಸುತ್ತಾರೆ ಎಂದು ಬೇಸರಿಸಿದ್ದಾರೆ.

ಪೂಜಾ ಸಿಂಗ್‌ಗೆ ಪಿಹೆಚ್.ಡಿ

ಮೈಸೂರು,ಅ.11–ಪೂಜಾ ಜಿ. ಸಿಂಗ್‌ಗೆ ಅವರು ಸಂಶೋಧನೆ ನಡೆಸಿ ಸಾದರಪಡಿಸಿದ 'ಆಂಟಿ–ಆಂಜಿಯೋಜೆನಿಕ್ ಮೆಕ್ಯಾನಿಸಮ್ ಎಲುಸಿಡೇಷನ್ ಫ್ರಂ ಬಯೋಆಕ್ಟಿವ್ಸ್ ಯೂಸಿಂಗ್ ಲಿನಮ್ ಯುಸಿಟೇಟಿಸಸಿಮಮ್' ಮಹಾ ಪ್ರಬಂಧವನ್ನು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್‌ಡಿ)ಗೆ ಅಂಗೀಕರಿಸಿದೆ.



ಸುಂದರ ನಗರಿ ಮೈಸೂರಿನ ಅಂದ ಹೆಚ್ಚಿಸಲಿವೆ ಹೊಸ ವೃತ್ತಗಳು

● ಹಳೆಯ ವೃತ್ತಗಳಿಗೆ ಹೊಸ ಮೆರಗಿನೊಂದಿಗೆ ಏಳು ಹೊಸ ವೃತ್ತಗಳ ನಿರ್ಮಾಣ ● ಒಂದಕ್ಕಿಂತ ಒಂದು ಮೈಸೂರು ಸೌಂದರ್ಯಕ್ಕೆ ಇಂಬು ನೀಡುವ ವಿಶ್ವಾಸ


ಅಲ್-ಬದರ್ ವೃತ್ತದ ನೀಲನಕ್ಷೆ


ಫೌಂಟೆನ್ ವೃತ್ತದ ನೀಲನಕ್ಷೆ

ಮೈಸೂರು, ಅ.11(ಜಿಎ)– ಸಾಂಸ್ಕೃತಿಕ ನಗರಿ ಮೈಸೂರು ನಗರದ ಆಕರ್ಷಣೆಯನ್ನು ಮತ್ತಷ್ಟು ಹೆಚ್ಚಿಸಲು ಮೈಸೂರು ಮಹಾನಗರ ಪಾಲಿಕೆ, ಹಳೆ ವೃತ್ತಗಳ ನವೀಕರಣದ ಜೊತೆಗೆ 7ಕ್ಕೂ ಹೆಚ್ಚು ನೂತನ ವೃತ್ತಗಳನ್ನು ನಿರ್ಮಿಸಲು ನಿರ್ಧರಿಸಿದೆ.

ಮೈಸೂರು ನಗರವು ಕಲೆ, ಸಂಸ್ಕೃತಿ, ಸಾಹಿತ್ಯ, ಜನಪದ, ನೃತ್ಯ, ಪರಂಪರೆ ಗಳೊಂದಿಗೆ ಪ್ರತಿಷ್ಠಿತ ಕೆ.ಆರ್.ವೃತ್ತ, ಚಾಮರಾಜ ವೃತ್ತ, ಜಯಚಾಮರಾಜ ಒಡೆಯರ್ ವೃತ್ತಗಳಿಂದಲೂ ಹೆಸರುವಾಸಿಯಾಗಿದೆ. ಅಂದದ ವೃತ್ತಗಳ ಸಾಲಿಗೆ ಮತ್ತಷ್ಟು ಸೇರ್ಪಡೆಯಾಗಲಿದ್ದು, ಈಗಾಗಲೇ ಕೆಲ ವೃತ್ತಗಳ ಕಾಮಗಾರಿ ಆರಂಭವಾಗಿದೆ.

ಪಾಲಿಕೆ ಅನುದಾನ, ಸರ್ಕಾರದ ಅನುದಾನ ಮತ್ತು ಪಾಲಿಕೆ ಸದಸ್ಯರ ಅನುದಾನದಲ್ಲಿ ಈ ವೃತ್ತಗಳ ನಿರ್ಮಾಣವಾಗುತ್ತಿದ್ದು, 75ನೇ ಸ್ವಾತಂತ್ರ್ಯ ದಿನಾಚರಣೆಯ 'ಅಜಾದಿ ಕಾ ಅಮೃತ್ ಮಹೋತ್ಸವ'ದ ಹಿನ್ನೆಲೆಯಲ್ಲಿ ದೇಶದಾದ್ಯಂತ ಅನೇಕ ಕಾರ್ಯಕ್ರಮಗಳು ನಡೆಯುತ್ತಿದ್ದು, ಅದರ ವಿಶೇಷತೆಗಳನ್ನೊಳಗೊಂಡಂತೆ ನೂತನ ವೃತ್ತಗಳು ನಿರ್ಮಾಣಗೊಳ್ಳಲಿವೆ.


ಕಾಮಗಾರಿ ಆರಂಭಗೊಂಡಿರುವ ಅಲ್ ಬದರ್ ವೃತ್ತ

ಈಗಾಗಲೇ ರಾಜೀವನಗರ 2ನೇ ಹಂತದಲ್ಲಿರುವ ಅಲ್–ಬದರ್ ವೃತ್ತವನ್ನು ಅಂದಾಜು 2.47 ಕೋಟಿ ರೂ.ವೆಚ್ಚದಲ್ಲಿ ಬೆಂಗಳೂರಿನ ಸಂಸ್ಥೆಯೊಂದು ಟೆಂಡರ್ ಪಡೆದು ಕಾಮಗಾರಿ ಆರಂಭಿಸಿದ್ದು, ಈ ವೃತ್ತದಲ್ಲಿ 25 ಅಡಿ ಎತ್ತರದ ಪೀಠ, ಕಾರಂಜಿ, ಇಂಟರ್‌ಲಾಕಿಂಗ್ ಟೈಲ್ಸ್ ಪಾಥ್‌ವೇ, ಇಲ್ಯುಮಿನೇಷನ್ ಇತ್ಯಾದಿ ಒಳಗೊಂಡಂತೆ ಮತ್ತಷ್ಟು ಆಕರ್ಷಕ ತಾಣವನ್ನಾಗಿಸಲಾಗುತ್ತಿದೆ. ಈ ವೃತ್ತವನ್ನು ಸಂಪೂರ್ಣ ನನ್ನ ಅನುದಾನದಲ್ಲಿ ಮಾಡುತ್ತಿದ್ದು, ಬೆಂಗಳೂರು ಮೂಲದ ಆರ್ಕಿಟೆಕ್ಟ್ ಮೂಲಕ ವೃತ್ತದ ಡಿಸೈನ್ ಮಾಡಿಸಲಾಗಿದೆ. ಅಂದಾಜು 2.47 ಕೋಟಿ ರೂ. ನಲ್ಲಿ ಮಾಡಬೇಕು ಎಂದು ನಿರ್ಧರಿಸಲಾಗಿತ್ತು. ಆದರೆ, ಕಾಮಗಾರಿಗೂ ಮುನ್ನ ಇದರ ಕೆಳಗೆ ಬರುವ ಒಳಚರಂಡಿಯ ಪೈಪ್‌ಗಳು, ವಿದ್ಯುತ್ ಕಂಬಗಳನ್ನು ತೆಗೆದು ನಿರ್ಮಾಣ ಮಾಡಲಾಗುತ್ತಿರುವುದರಿಂದ ಕಾಮಗಾರಿಯ ವೆಚ್ಚ 3 ಕೋಟಿ ರೂ. ತಲುಪುವ ಸಾಧ್ಯತೆ ಇದೆ ಎಂದು ಪಾಲಿಕೆ ಸದಸ್ಯ, ಮಾಜಿ ಮೇಯರ್ ಅಯೂಬ್ ಖಾನ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ವೃತ್ತದ ತಳ ಭಾಗದಲ್ಲಿ ಹೊಸದಾಗಿ ವೈರಿಂಗ್ ಮಾಡಲಾಗುತ್ತಿದೆ. ನಾಳೆ ಈ ಕಾಮಗಾರಿಗೆ ಸಂಬಂಧಿಸಿದಂತೆ ಬೆಂಗಳೂರಿಗೆ ತೆರಳುತ್ತಿದ್ದು, ಬೇಕಿರುವ ಟೈಲ್ಸ್ ಸೇರಿದಂತೆ ಇತರ ಪರಿಕರಗಳನ್ನು ಆಯ್ಕೆ ಮಾಡಬೇಕಿದೆ. 3 ತಿಂಗಳಲ್ಲಿ ವೃತ್ತವನ್ನು ಪೂರ್ಣಗೊಳಿಸುವ ಉದ್ದೇಶವನ್ನು ಹೊಂದಿದ್ದೇವೆ. ಜನವರಿ ಅಂತ್ಯದೊಳಗೆ ಕಾಮಗಾರಿ ಮುಗಿಸಿ ಲೋಕಾರ್ಪಣೆ ಮಾಡುವ ಪ್ರಯತ್ನಗಳು ನಡೆಯುತ್ತಿದೆ ಎಂದರು.

ಫೌಂಟೆನ್ ವೃತ್ತಕ್ಕೆ ಆಧುನಿಕ ಸ್ಪರ್ಶ: ಬೆಂಗಳೂರಿನಿಂದ ಮೈಸೂರಿಗೆ ಬರುವವರನ್ನು ಫೌಂಟೆನ್ ವೃತ್ತ ಸ್ವಾಗತಿಸುತ್ತದೆ. ವೃತ್ತದ ಮೂಲ ಸ್ವರೂಪ ಉಳಿಸಿಕೊಂಡು ಪಾಲಿಕೆಯೂ ಆಧುನಿಕ ಸ್ಪರ್ಶ ನೀಡಲು ಮುಂದಾಗಿದೆ. ಅಂದಾಜು 1.20 ಕೋಟಿ ರೂ ವೆಚ್ಚದಲ್ಲಿ ಅಂದಗೊಳ್ಳುತ್ತಿರುವ ಈ ವೃತ್ತವು ಆಜಾದಿ ಕಾ ಅಮೃತ ಮಹೋತ್ಸವ ಬಿಂಬಿಸುವ ಉದ್ದೇಶವನ್ನು ಹೊಂದಿದ್ದು, ಕನ್ನಡ ಅಂಕಿಯಲ್ಲಿ '75' ಡಿಸೈನ್ ಮೂಡಿ ಬರಲಿದೆ ಎಂದು ವಾರ್ಡ್ ನಂ.27ರ ನಗರಪಾಲಿಕೆ ಸದಸ್ಯ ಮೊಹಮ್ಮದ್ ರಫೀಕ್ ತಿಳಿಸಿದ್ದಾರೆ.

ರಾಜಧಾನಿ ಬೆಂಗಳೂರಿನ ಕಡೆಯಿಂದ ಮೈಸೂರಿಗೆ ಬರುವ ಪ್ರತಿಯೊಬ್ಬರು ಈ ವೃತ್ತವನ್ನು ಹಾದು ಹೋಗಬೇಕಿರುವುದರಿಂದ ಇದನ್ನು ಅತ್ಯಂತ ಆಕರ್ಷಣೀಯವಾಗಿ ಕಾಣುವಂತೆ ಮಾಡುತ್ತಿದ್ದೇವೆ. ಪಾಲಿಕೆ ಸಾಮಾನ್ಯ ಅನುದಾನದಲ್ಲಿ 50 ಲಕ್ಷ ರೂ., ಬಿಡುಗಡೆಯಾಗಿದೆ ಹಾಗೂ ನಗರಪಾಲಿಕೆ ಆಯುಕ್ತರು 30 ಲಕ್ಷ ನೀಡಲಿದ್ದು, ಟೆಂಡರ್ ಪ್ರಕ್ರಿಯೆ ಬಾಕಿ ಇದೆ. ಅದು ಮುಗಿದ ತಕ್ಷಣ ಕಾಮಗಾರಿ ಆರಂಭವಾಗಲಿದೆ ಎಂದರು.

ಹೊಸದಾಗಿ 7 ವೃತ್ತಗಳು

"ನಗರ ಪಾಲಿಕೆ ಅನುದಾನ, ಮೇಯರ್ ಅನುದಾನ, ಸರ್ಕಾರದ ಅನುದಾನ ಮತ್ತು ಪಾಲಿಕೆ ಸದಸ್ಯರ ಅನುದಾನದಲ್ಲಿ ಮೈಸೂರು ನಗರದಲ್ಲಿ ಕೆಲ ವೃತ್ತಗಳನ್ನು ಹೊಸದಾಗಿ ನಿರ್ಮಾಣ ಮಾಡುತ್ತಿದ್ದೇವೆ. ಕೆಲ ಹಳೆಯ ವೃತ್ತಗಳನ್ನು ಅವುಗಳ ಮೂಲ ಸ್ವರೂಪವನ್ನು ಹಾಳು ಮಾಡದಂತೆ ನವೀನತೆ ಸ್ಪರ್ಶ ನೀಡಲಾಗುತ್ತಿದೆ. ಈ ವರ್ಷ ವಿವೇಕಾನಂದ ವೃತ್ತ, ವಿಶ್ವಮಾನವ ಡಬಲ್ ರಸ್ತೆಯ ಸಿದ್ಧ ಗಂಗಾ ಸ್ವಾಮೀಜಿ ವೃತ್ತ, ಕೆ.ಆರ್.ಎಸ್ ರಸ್ತೆಯ ಜಯದೇವ ಆಸ್ಪತ್ರೆಯ ಜಂಕ್ಷನ್ ವೃತ್ತ, ಆಯುರ್ವೇದ ಆಸ್ಪತ್ರೆಯ ವೃತ್ತ ಹಾಗೂ ಎನ್.ಆರ್.ಮೊಹಲ್ಲಾದ ಸಂತ ಫಿಲೋಮಿನಾ ಚರ್ಚ್ ಬಳಿಯ ವೃತ್ತ



ಸೇರಿದಂತೆ 7ಕ್ಕೂ ಹೆಚ್ಚು ವೃತ್ತಗಳ ನಿರ್ಮಾಣಕ್ಕೆ ಪಾಲಿಕೆ ನಿರ್ಧರಿಸಿದೆ. ಕೆಲ ಕಾಮಗಾರಿಗೆ ಬೆಂಗಳೂರು ಮೂಲದವರು ಆರ್ಕಿಟೆಕ್ಟ್ ಆಗಿದ್ದಾರೆ. ವಿವೇಕಾನಂದ ವೃತ್ತ ಮತ್ತು ಸಿದ್ಧಗಂಗಾ ಸ್ವಾಮೀಜಿ ವೃತ್ತವನ್ನು ಮೈಸೂರು ಮೂಲದ ಆರ್ಕಿಟೆಕ್ಟ್ ಕೈಗೊಳ್ಳಲಿದ್ದಾರೆ.

–ಲಕ್ಷ್ಮಿಕಾಂತ ರೆಡ್ಡಿ, ಆಯುಕ್ತ, ಮೈಸೂರು ಮಹಾನಗರ ಪಾಲಿಕೆ

ಪೊಲೀಸ್ ಠಾಣಾಗಳ ವ್ಯಾಪ್ತಿಗೆ ಒಳಪಡುವ ಪ್ರದೇಶಗಳ ಮರುಹಂಚಿಕೆ

ಮೈಸೂರು, ಅ.11–ಪೊಲೀಸ್ ಅಧೀಕ್ಷಕರ ಕಚೇರಿ ವತಿಯಿಂದ ಪೊಲೀಸ್ ಠಾಣಾಗಳ ವ್ಯಾಪ್ತಿಗೆ ಒಳಪಡುವ ಹಳ್ಳಿಗಳನ್ನು ಆದೇಶದ ಅನ್ವಯ ಮರುಹಂಚಿಕೆ ಮಾಡಿ ಪೊಲೀಸ್ ಅಧೀಕ್ಷಕ ಆರ್.ಚೇತನ್ ಆದೇಶಿಸಿದ್ದಾರೆ.

ಮೈಸೂರು ಜಿಲ್ಲೆಯ ಮೈಸೂರು ಗ್ರಾಮಾಂತರ ಉಪವಿಭಾಗದ ಸಾಲಿಗ್ರಾಮ ಪೊಲೀಸ್ ಠಾಣಾ ವ್ಯಾಪ್ತಿಗೆ ಚುಂಚನಕಟ್ಟೆ, ಕುಪ್ಪೆ, ಶ್ರೀರಾಮಪುರ, ಹೊಸಕೋಟೆ, ಹೊಸಕೋಟೆ ಕೊಪ್ಪಲು, ನಿಜಗನಹಳ್ಳಿ, ಕರ್ತಾಳು, ತಂದ್ರೆ, ಅಬ್ಬೂರು, ಚಿಬುಕನಹಳ್ಳಿ, ಕೋಗಿಲೂರು, ಬೆಣಹನಹಳ್ಳಿ, ಹಳಿಯೂರು, ಹಳಿಯೂರು ಬಡಾವಣೆ, ಹಾಡ್ಯ, ಸಕ್ಕರೆ, ಕಗ್ಗಳ, ಅಂಕನಹಳ್ಳಿ, ಸೋಮನಹಳ್ಳಿ, ಮಾಯಿಗೌಡನಹಳ್ಳಿ, ಗುಡುಗನಹಳ್ಳಿ, ಹೊಸೂರು, ದಿಡ್ಡಹಳ್ಳಿ, ಹನಸೋಗೆ, ಚನ್ನಂಗೆರೆ, ಎರೆಮನುಗನಹಳ್ಳಿ, ಚಿಕ್ಕಹನಸೋಗೆ, ಕೊಳೂರು, ಬಂಡಹಳ್ಳಿ, ನಾಡಪ್ಪನಹಳ್ಳಿ, ದಮ್ಮನಹಳ್ಳಿ, ಸಣ್ಣೇಗೌಡನ ಕೊಪ್ಪಲು, ಮುದ್ದನಹಳ್ಳಿ, ಚಿಕ್ಕಕೊಪ್ಪಲು, ಅಂಕನ ಹಳ್ಳಿ ಕೊಪ್ಪಲು, ವಡ್ಡರ ಕೊಪ್ಪಲು, ದೊಡ್ಡಕೊಪ್ಪಲು, ಸಾಲೆ ಕೊಪ್ಪಲು, ಜವರೇಗೌಡನಕೊಪ್ಪಲು, ಹಲಗೇಗೌಡನ ಕೊಪ್ಪಲು, ಗೊಲ್ಲರಕೊಪ್ಪಲು, (ಬೇಚಾರ ಹಳ್ಳಿಗಳು) ವಲ್ಲಂ ಬುದಿ, ಹಲ್ಲೇ ಹೊಸೂರು, ಹಾಡ್ಯ ಹಂತ, ಹನಸೋಗೆ ಹಂತ, ಕೊಳೂರು ಹಂತ, ಕುಪ್ಪೆ ಹಂತ ಸೇರಿದೆ.

ಕೆ.ಆರ್.ನಗರ ಪೊಲೀಸ್ ಠಾಣೆ ವ್ಯಾಪ್ತಿಗೆ: ಚಿಕ್ಕವಡ್ಡರ ಗುಡಿ, ದೊಡ್ಡವಡ್ಡರಗುಡಿ, ಬೊಮ್ಮನಹಳ್ಳಿ, ಗಂಧನಹಳ್ಳಿ, ಬೀರನಹಳ್ಳಿ, ಕಾಕನಹಳ್ಳಿ, ಕಂಚಿನಕೆರೆ, ಹೊಸ ಅಗ್ರಹಾರ, ಸುಗ್ಗನಹಳ್ಳಿ, ಹರಂಬಹಳ್ಳಿ, ಹರಂಬಹಳ್ಳಿ ಕೊಪ್ಪಲು, ಮಂಡಿಗನಹಳ್ಳಿ, ಆಲಂ ಬಾಡಿ ಕಾವಲ್, ಕಗ್ಗಲಿಬೋರೆ ಕಾವಲ್, ಮಾರಗೌಡನಹಳ್ಳಿ

ನಂಜನಗೂಡು ಪಟ್ಟಣ ಪೊಲೀಸ್ ಠಾಣೆ ವ್ಯಾಪ್ತಿಗೆ: ಚಾಮಲಾಪುರದ ಹುಂಡಿ, ಕೊರೆಹುಂಡಿ, ಕಲ್ಲಹಳ್ಳಿ ಬಡಾವಣೆಗಳು: ವಿದ್ಯಾನಗರ ಬಡಾವಣೆ, ಬಾಲಾಜಿ ನಗರ, ದೇವಿನಗರ, ಸೂರ್ಯೋದಯ ನಗರ, ಪ್ರಗತಿನಗರ, ಶ್ರೀಕಂಠೇಶ್ವರ ನಗರ, ಕನ್ನಿಕಾ ಪರಮೇಶ್ವರಿ ಬಡಾವಣೆ, ಮಹದೇವಪ್ಪ ಬಡಾವಣೆ, ಚೆನ್ನಪ್ಪ ಬಡಾವಣೆ, ಗೌತಮ್ ಬಡಾವಣೆ, ರಾಮಸ್ವಾಮಿ ಬಡಾವಣೆ, ವೈ.ಕೆ.ಸ್ವಾಮಿ ಬಡಾವಣೆ, ವಿ.ಎ. ಬಡಾವಣೆ, ನಾಗರಾಜಯ್ಯ ಬಡಾವಣೆ, ಮಹದೇವು ಬಡಾವಣೆ, ಕೃಷ್ಣಮೂರ್ತಿ ಬಡಾವಣೆ, ರಾಜಣ್ಣ ಬಡಾವಣೆ, ಏಕಾಂಬರ ಬಡಾವಣೆ, ಮಾಯಣ್ಣ ಬಡಾವಣೆ, ಶ್ರೀಕಂಠ ಬಡಾವಣೆ, ಗೋವಿಂದರಾಜ ಬಡಾವಣೆ, ಜುಬಿಲಿಯಂಟ್ ಬಡಾವಣೆ, ಪಿ.ಕೆ. ಬಡಾವಣೆ, ಬ್ರೇಕ್ಸ್ ಇಂಡಿಯಾ ಬಡಾವಣೆ, ಮುಡಾ ಬಡಾವಣೆ, ಹಂಡುವಿನಹಳ್ಳಿ ಬಡಾವಣೆ, ಥಾಮಸ್ ಬಡಾವಣೆ, ವೆಂಕಟಾದ್ರಿ ಬಡಾವಣೆ, ಕೃಷ್ಣಪ್ಪ ಬಡಾವಣೆ, ಕಲ್ಲಹಳ್ಳಿ ಕೈಗಾರಿಕಾ ಬಡಾವಣೆ, ಮುದ್ದುಮಾದಪ್ಪ ಬಡಾವಣೆ, ಪಿ.ಎನ್.ಟಿ. ಬಡಾ ವಣೆ, ಎನ್.ಜಿ.ಓ. ಕಾಲೋನಿ, ನಂಜುಂಡೇಶ್ವರ ಬಡಾವಣೆ, ಭಾಗ್ಯಲಕ್ಷ್ಮಿ ಬಡಾವಣೆ, ನೆಸ್ಲೆ ಬಡಾವಣೆ, ಸದಾಶಿವ ಬಡಾವಣೆ, ಶಿವಮೂರ್ತಿ ಬಡಾವಣೆ, ಕೃಷ್ಣರಾವ್ ಬಡಾವಣೆ, ನಂಜುಂಡಸ್ವಾಮಿ ಬಡಾವಣೆ, ಸರೋಜಮ್ಮ ಬಡಾವಣೆ, ಮಹದೇವಸ್ವಾಮಿ ಬಡಾವಣೆ.

ಹುಣಸೂರು ಪಟ್ಟಣ ಪೊಲೀಸ್ ಠಾಣೆ ವ್ಯಾಪ್ತಿಗೆ: ಅಜಾದ್‌ನಗರ (ಹೆಚ್.ಡಿ. ಕೋಟೆ ರಸ್ತೆಯ ಹಜರತ್ ಗೌಸೆ ಅಜಮ್ ಸಾಬ್ರಿಯ ಮಠದವರೆಗೆ), ಬಚಾಳ್ಳಿ ಕ್ರಾಸ್ (ಹೆಚ್.ಡಿ. ಕೋಟೆ ರಸ್ತೆಯಿಂದ–ರತ್ನಪುರಿ ರಸ್ತೆಗೆ ಹೋಗುವ ಮಧ್ಯೆ), ರತ್ನಪುರಿ ರಸ್ತೆ ಹೊಸಕೋಟೆ ಗೇಟ್, ರೆಡ್ಡಿಕೊಪ್ಪಲು, ಮಂಟಿಕೊಪ್ಪಲು, ಬೀಜಗನಹಳ್ಳಿ, ಯಶೋಧರಪುರ ಗ್ರಾಮ (ಹಾರಂಗಿ ನಾಲಾವರೆಗೆ) ಸೋಮನಹಳ್ಳಿ (ಕಾಡನಕೊಪ್ಪಲು ಗೇಟ್‌ವರೆಗೆ).

ಅಂತರಸಂತೆ ಪೊಲೀಸ್ ಠಾಣೆ ವ್ಯಾಪ್ತಿಗೆ: ಶಿರಮಹಳ್ಳಿ, ಶೀರನಹುಂಡಿ, ಮೊತ್ತ, ಸತ್ತಿಗೆಹುಂಡಿ, ಅಂಕನಾಥಪುರ, ಮಾಚನಾಯಕನಹಳ್ಳಿ, ಪೆಂಜಹಳ್ಳಿ ಗ್ರಾಮ ಜೊತೆಗೆ ಹಾಡಿ, ಹುಣಸೇಕುಪ್ಪೆ ಗ್ರಾಮ ಜೊತೆಗೆ ಹಾಡಿ, ತಾರಕ, ಹಿರೇಹಳ್ಳಿ ಎ ಕಾಲೋನಿ, ಹಿರೇಹಳ್ಳಿ ಬಿ.

ಸರಗೂರು ಪೊಲೀಸ್ ಠಾಣೆ ವ್ಯಾಪ್ತಿಗೆ: ಅಡಹಳ್ಳಿ, ಕೆ.ಬೆಳತ್ತೂರು (ಹೊಸ ಬಡಾವಣೆ (ಮಾನಿ), ಬೆಟ್ಟದಹುಂಡಿ), ಚಕ್ಕೂರು, ಹುನಗನಹಳ್ಳಿ, ಕೂಲ್ಯ, ಮುದ್ದನಹಳ್ಳಿ, ಮೊಳೆಯೂರು (ಕಾಳಿಹುಂಡಿ), ಶಂಖಹಳ್ಳಿ, ಬೆಟ್ಟದಹುಂಡಿ (ಬೇಚಾರ್ ಗ್ರಾಮ).

ಬೈಲಕುಪ್ಪೆ ಪೊಲೀಸ್ ಠಾಣೆ ವ್ಯಾಪ್ತಿಗೆ: ನೇರಳೆಕುಪ್ಪೆ, ನೇರಳೆಕುಪ್ಪೆ ಕೊಪ್ಪಲು, ಹರಳಹಳ್ಳಿ ಕೆ, ಮಲ್ಲಿನಾಥಪುರ, ಪೊನಾಡಹಳ್ಳಿ, ಪೊನಾಡಹಳ್ಳಿ ಕೊಪ್ಪಲು, ಗಾಂಧಿನಗರ, ಕೋಗಿಲೂರು, ಪಿ.ಬಸವನಹಳ್ಳಿ, ಹುಣಸವಾಡಿ, ಸೆಣಬಿನಕುಪ್ಪೆ, ಕುಂದನಹಳ್ಳಿ, ಭೂತನಹಳ್ಳಿ, ಕೋರಲಹೊಸಳ್ಳಿ, ಆಲನಹಳ್ಳಿ, ನವಿಲೂರು, ಕಾಮನಹಳ್ಳಿ, ಬೆಮ್ಮತ್ತಿ, ಆಯರಬೀಡು.

ಬೈಲಕುಪ್ಪೆ ಪೊಲೀಸ್ ಠಾಣೆ ವ್ಯಾಪ್ತಿಗೆ: ನಿಲವಾಡಿ, ಬೆಣಗಾಲು, ಸುಂಕದಹಳ್ಳಿ, ಚನ್‌ಕಲ್ ಕಾವಲ್, ಸೂಳೆಕೋಟೆ, ಚೆನ್ನಕೇಶವಪುರ, ಶ್ಯಾನುಬೋಗನಹಳ್ಳಿ, ದೊಡ್ಡಕಮ್ಮರವಳ್ಳಿ, ಚಿಕ್ಕಕಮರಹಳ್ಳಿ, ಮರಟಿ ಕೊಪ್ಪಲು, ದಿಂಡಗಾಡು, ಮುತ್ತಿನಮುಳುಸೋಗೆ, ಮುತ್ತಿನಮುಳುಸೋಗೆ ಕೊಪ್ಪಲು, ಬೆಣಗಾಲು ಬೋವಿ ಕಾಲೋನಿ, ಚೆನ್‌ಕಲ್ ನಾಯಕರ ಕಾಲೋನಿ, ಲಕ್ಷ್ಮಿಪುರ ಈ ಎಲ್ಲಾ ಪ್ರದೇಶಗಳು ನಮೂದಿಸಿರುವ ಆಯಾ ಪೊಲೀಸ್‌ಠಾಣಾ ವ್ಯಾಪ್ತಿಗೆ ಒಳಪಟ್ಟಿರುತ್ತವೆ ಎಂದು ಪೊಲೀಸ್ ಅಧೀಕ್ಷಕರು ತಿಳಿಸಿದ್ದಾರೆ.

ನಾರಾಯಣ ಶಾಸ್ತ್ರಿ ರಸ್ತೆಯ ಫುಟ್‌ಪಾತ್ ಮೇಲಿನ ಮಣ್ಣಿನ ರಾಶಿ ತೆರವು

ಮೈಸೂರು, ಅ.8(ಜಿಎ)– ನಗರದ ನಾರಾಯಣ ಶಾಸ್ತ್ರಿ ರಸ್ತೆಯ ಫುಟ್‌ಪಾತ್ ಮೇಲೆ ಬಿದ್ದಿದ್ದ ರಾಶಿ ರಾಶಿ ಮಣ್ಣನ್ನು ಪಾಲಿಕೆ ಸಿಬ್ಬಂದಿ ತೆರವುಗೊಳಿಸಿ ಪಾದಚಾರಿಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ.

ನಾರಾಯಣ ಶಾಸ್ತ್ರಿ ರಸ್ತೆಯ ಫುಟ್‌ಪಾತ್‌ನಲ್ಲಿ ರಾಶಿ ರಾಶಿ ಮಣ್ಣು ಹಾಕಿ ಸಾರ್ವಜನಿಕರು ಮತ್ತು ಹಿರಿಯ ನಾಗರಿಕರು ಓಡಾಡುವುದೇ ಕಷ್ಟಕರವಾಗಿತ್ತು. ಈ ಕುರಿತು ಅ.8ರ 'ಮೈಸೂರು ಮಿತ್ರ' ಸಂಚಿಕೆಯಲ್ಲಿ 'ನಾರಾಯಣ ಶಾಸ್ತ್ರಿ ರಸ್ತೆಯ ಫುಟ್‌ಪಾತ್‌ನಲ್ಲಿ ರಾಶಿ ರಾಶಿ ಮಣ್ಣು ಪಾದಚಾರಿಗಳ ಪರದಾಟ' ಶೀರ್ಷಿಕೆಯಡಿ ಸುದ್ದಿ ಪ್ರಕಟವಾದ ಕೂಡಲೇ ಎಚ್ಚೆತ್ತ ಪಾಲಿಕೆ ಸಿಬ್ಬಂದಿ ಮಣ್ಣನ್ನು ತೆರವುಗೊಳಿಸಿದ್ದಾರೆ.



ದಸರಾ ಅಂಗವಾಗಿ ನಾರಾಯಣಶಾಸ್ತ್ರಿ ರಸ್ತೆಗೆ ಡಾಂಬರೀಕರಣ ಮಾಡುವ ವೇಳೆ ರಸ್ತೆಯಲ್ಲಿದ್ದ ಕಟ್ಟಡದ ತ್ಯಾಜ್ಯ, ಮಣ್ಣಿನ ರಾಶಿಯನ್ನು ಫುಟ್‌ಪಾತ್ ಮೇಲೆ ಸುರಿದಿದ್ದರಿಂದ ಸಾರ್ವಜನಿಕರು ರಸ್ತೆಯಲ್ಲಿ ಓಡಾಡಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿತ್ತು. ಈ ಬಗ್ಗೆ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದರು. ಈ ವರದಿಗೆ ಸ್ಪಂದಿಸಿದ ನಗರ ಪಾಲಿಕೆ, ಫುಟ್‌ಪಾತ್ ಮೇಲಿನ ಮಣ್ಣಿನ ರಾಶಿ ತೆರವುಗೊಳಿಸಿ, ಪಾದಚಾರಿಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದಾರೆ.




ಪೇಟಾ ದೂರಿನನ್ವಯ ಗ್ರೇಟ್ ಬಾಂಬೆ ಸರ್ಕಸ್ ವಿರುದ್ಧ ಪ್ರಕರಣ ದಾಖಲು

ಮೈಸೂರು, ಅ.11– ಮೈಸೂರಿನ ಕಾರಂಜಿಕೆರೆ ಬಳಿ ಆರಂಭವಾಗಿರುವ 'ಗ್ರೇಟ್ ಬಾಂಬೆ ಸರ್ಕಸ್' ವಿರುದ್ಧ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅನಿಮಲ್ ವೆಲ್ಫೇರ್ ಬೋರ್ಡ್ ಆಫ್ ಇಂಡಿಯಾದಲ್ಲಿ(ಎಡಬ್ಲ್ಯೂಬಿಐ) ನೋಂದಾಯಿಸದ ಈ ಸರ್ಕಸ್ ಕಂಪನಿಯಲ್ಲಿ ಶ್ವಾನ ಹಾಗೂ ಪಕ್ಷಿಗಳನ್ನು ಪ್ರದರ್ಶನಕ್ಕೆ ಬಳಸಲಾಗುತ್ತಿದೆ ಎಂದು ಪೇಟಾ (ಪೀಪಲ್ ಫಾರ್ ಎಥಿಕಲ್ ಟ್ರೀಟ್ಮೆಂಟ್ ಆಫ್ ಅನಿಮಲ್ಸ್ ಇಂಡಿಯಾ) ದೂರು ನೀಡಿದೆ.

ಶ್ವಾನಗಳು ರಿಂಗ್ ಅಂಚಿನಲ್ಲಿ ಮುಂಗಾಲುಗಳ ಮೇಲೆ ನಡೆಯುವ ಹಾಗೂ ಪಕ್ಷಿಗಳನ್ನು ಬಂಡಿ ಎಳೆಯುವ ಪ್ರದರ್ಶನಕ್ಕೆ ಬಳಸಲಾಗುತ್ತಿದ್ದು, ಅವುಗಳು ಎಡಬ್ಲ್ಯೂಬಿಐನಲ್ಲಿ ನೋಂದಾಯಿಸದ ಪ್ರದರ್ಶನ ಗಳಾಗಿವೆ ಎಂದು ದೂರಿನಲ್ಲಿ ಉಲ್ಲೇಖಿಸದ್ದು, ಐಪಿಸಿ ಸೆಕ್ಷನ್ 429, 3, 11(1) ಅನ್ವಯ ಪ್ರಕರಣ ದಾಖಲಾಗಿದೆ. 'ಗ್ರೇಟ್ ಬಾಂಬೆ ಸರ್ಕಸ್' ವಿರುದ್ಧ ದೂರು ದಾಖಲಾಗಿದ್ದು, ಸರ್ಕಸ್‌ನಲ್ಲಿ ಶ್ವಾನ ಹಾಗೂ ಪಕ್ಷಿಗಳ ಮನರಂಜನಾ ಪ್ರದರ್ಶನ ಕುರಿತು ಎಡಬ್ಲ್ಯೂಬಿಐನಿಂದ ಪರಿಶೀಲನೆ ನಡೆಸಲಾಗುತ್ತದೆ ಎಂಬ ಮಾಹಿತಿ ತಿಳಿದು ಬಂದಿದ್ದು, ಸದ್ಯಕ್ಕೆ ಎಂದಿನಂತೆ ಸರ್ಕಸ್ ನಡೆಯುತ್ತಿದೆ ಎಂದು ನಜರ್‌ಬಾದ್ ಠಾಣೆ ಪೊಲೀಸರು ತಿಳಿಸಿದ್ದಾರೆ.

ನಾಮಪತ್ರ ಸಲ್ಲಿಸುವ 18 ಗಂಟೆಗಳ ಮುನ್ನ ಚುನಾವಣೆಗೆ ಸ್ಪರ್ಧಿಸಲು ಸೂಚನೆ: ಖರ್ಗೆ

ನವದೆಹಲಿ: ಕಾಂಗ್ರೆಸ್ ಅಧ್ಯಕ್ಷ ಅಭ್ಯರ್ಥಿ ಮಲ್ಲಿಕಾರ್ಜುನ ಖರ್ಗೆ ತಮ್ಮ ಉಮೇದುವಾರಿಕೆ ಅಂತಿಮಗೊಂಡ ಬಗ್ಗೆ ಮಾಹಿತಿ ಹಂಚಿಕೊಂಡಿದ್ದು, ನಾಮಪತ್ರ ಸಲ್ಲಿಸುವುದಕ್ಕೂ 24 ಗಂಟೆಗಳ ಮುನ್ನ ತಮಗೆ ಚುನಾವಣೆಗೆ ಸ್ಪರ್ಧಿಸುವುದು ಖಾತ್ರಿಯಾಗಿತ್ತು ಎಂದು ಹೇಳಿದ್ದಾರೆ. ಖರ್ಗೆ ಪಕ್ಷದೊಂದಿಗೆ ದಶಕಗಳಷ್ಟು ಹಳೆಯದಾದ ತಮ್ಮ ಒಡನಾಟದ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡಿದ್ದು, ರಾಹುಲ್ ಗಾಂಧಿಯೇ ಪಕ್ಷವನ್ನು ಮುನ್ನಡೆಸಬಹುದಿತ್ತು ಎಂಬ ಅಭಿಪ್ರಾಯದೊಂದಿಗೆ ನಾನು ಚುನಾವಣೆಗೆ ಸ್ಪರ್ಧಿಸುತ್ತಿದ್ದೇನೆ. ನಾಮಪತ್ರ ಸಲ್ಲಿಸುವುದಕ್ಕೂ ಕೇವಲ 18 ಗಂಟೆಗಳ ಮುನ್ನ ಅಷ್ಟೇ ನನಗೆ ಚುನಾವಣೆಗೆ ಸ್ಪರ್ಧಿಸುವಂತೆ ಸೂಚನೆ ಬಂದಿತ್ತು.

ಪರಮೇಶ್ವರ್, ಖರ್ಗೆ, ಶ್ರೀನಿವಾಸಪ್ರಸಾದ್, ವಿಶ್ವನಾಥ್‌ರ ಬೆನ್ನಿಗೆ ಚೂರಿ ಹಾಕಿದ್ದು ಯಾರು?

ಬೆಂಗಳೂರು,ಅ.11(ಕೆಎಂಶಿ)–ಬಿಜೆಪಿ ದಲಿತರು ಹಾಗೂ ಪರಿಶಿಷ್ಟ ವರ್ಗಗಳ ವಿರೋಧಿ ಎಂಬ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರ ಆರೋಪಕ್ಕೆ ಸಚಿವ ಶ್ರೀರಾಮುಲು ತಿರುಗೇಟು ನೀಡಿದ್ದಾರೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಅವರು, ಭಾರತ್ ಜೋಡೋ ಯಾತ್ರೆ ಮಾಡುತ್ತಿರುವ ರಾಹುಲ್ ಗಾಂಧಿಯವರೇ, ಬಿಜೆಪಿ ದಲಿತರ ವಿರೋಧಿ ಎಂದು ಯಾವ ಬಾಯಲ್ಲಿ ಹೇಳುತ್ತೀರೋ ಅಥವಾ ಯಾರಾದರೂ ಹೇಳುವಂತೆ ನಿಮಗೆ ಬಲವಂತ ಮಾಡಿದರೋ ಗೊತ್ತಿಲ್ಲ. ಆದರೆ, ನಿಮ್ಮ ಹೇಳಿಕೆಗೆ ನನ್ನ ಕನಿಕರವಿದೆ ಎಂದು ವ್ಯಂಗ್ಯವಾಡಿದ್ದಾರೆ. ರಾಜ್ಯದ ಇತಿಹಾಸದಲ್ಲೇ ಮೊದಲ ಬಾರಿಗೆ ವಿಶ್ವದ ಶ್ರೇಷ್ಠ ದಾರ್ಶನಿಕ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಘೋಷಣೆ ಮಾಡಿದ್ದು ನಮ್ಮ ಬಿಜೆಪಿ ಸರ್ಕಾರವೇ ಹೊರತು, ಕಾಂಗ್ರೆಸ್ ಪಕ್ಷ ಅಲ್ಲ ಎಂಬುದನ್ನು ನಿಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ ಎಂದು ಶ್ರೀರಾಮುಲು ಹೇಳಿದ್ದಾರೆ.

ಪ್ರಥಮ ಬಾರಿಗೆ ರಾಜ್ಯದ ಎಲ್ಲೆಡೆ ವಾಲ್ಮೀಕಿ ಸಮುದಾಯ ಭವನ ನಿರ್ಮಾಣ, ಪ್ರತ್ಯೇಕ ಶ್ರೀ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ ಮಾಡಿದ್ದು ಯಾವ ಸರ್ಕಾರ? ಇದರ ಬಗ್ಗೆ ನಿಮಗೆ ಮಾಹಿತಿ ಇಲ್ಲದಿದ್ದರೆ, ನಿಮ್ಮ ಜೊತೆಗೆ ಜೋಡೋ ಯಾತ್ರೆ ನಾಟಕವಾಡುತ್ತಿರುವ ಹಕ್ಕ– ಬುಕ್ಕರಿಂದ ತಿಳಿಯಬಹುದಿತ್ತು ಎಂದು ಪರೋಕ್ಷವಾಗಿ ಸಿದ್ದರಾಮಯ್ಯ ಹಾಗೂ ಡಿಕೆ.ಶಿವಕುಮಾರ್ ಅವರಿಗೂ ಟಕ್ಕರ್ ಕೊಟ್ಟಿದ್ದಾರೆ. ಮಹರ್ಷಿ ವಾಲ್ಮೀಕಿ ಜಯಂತಿಗೆ ಸರ್ಕಾರಿ ರಜೆ ಘೋಷಣೆ, ಕೇಂದ್ರ ಹಾಗೂ ರಾಜ್ಯ ಎರಡೂ ಕಡೆ ಪ್ರತ್ಯೇಕ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಚಿವಾ ಲಯ ರಚಿಸಿದ್ದು, ಇದೇ ಬಿಜೆಪಿ ಸರ್ಕಾರ. 5 ವರ್ಷ ಆಡಳಿತ ನಡೆಸಿದ್ದ ಸ್ವಯಂ ಘೋಷಿತ ಯಶಸ್ವಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಈ ಆಲೋಚನೆ ಏಕೆ ಬರಲಿಲ್ಲ ಎಂದಿದ್ದಾರೆ.



ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ನಾಯಕ ಸಮುದಾಯದ 36 ವರ್ಷಗಳ ಬೇಡಿಕೆಯಾಗಿದ್ದ ಪರಿವಾರ ಮತ್ತು ತಳವಾರ ಸಮಸ್ಯೆ ಇತ್ಯರ್ಥಪಡಿಸಿದ್ದು ವಿಶ್ವವೇ ಮೆಚ್ಚಿದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ. ಹತ್ತು ವರ್ಷ ಕೇಂದ್ರದಲ್ಲಿ ಯುಪಿಎ ಸರ್ಕಾರ ಅಧಿಕಾರ ದಲ್ಲಿದ್ದಾಗ ಈ ಸಮುದಾಯಕ್ಕೆ ನೀವು ನ್ಯಾಯ ಕೊಡಿಸಬಹು ದಿತ್ತಲ್ಲವೇ ಎಂದು ರಾಮುಲು ತರಾಟೆಗೆ ತೆಗೆದುಕೊಂಡಿದ್ದಾರೆ. ಮೈಸೂರು ಮಹಾನಗರ ಪಾಲಿಕೆಗೆ ಮೊದಲ ಬಾರಿಗೆ ನಾಯಕ ಸಮುದಾಯಕ್ಕೆ ಮಹಾಪೌರರ ಸ್ಥಾನ ಅತ್ಯಂತ ಹಿಂದುಳಿದ ಸಿದ್ಧಿ ಸಮುದಾಯದ ಸಾಮಾನ್ಯ ಕಾರ್ಯಕರ್ತನಿಗೆ ವಿಧಾನಪರಿಷತ್ತಿಗೆ ನಾಮಕರಣ ಮಾಡಿದ್ದು ಬಿಜೆಪಿಯೇ ಹೊರತು ಕಾಂಗ್ರೆಸ್ ಪಕ್ಷವಲ್ಲ ಎಂಬುದನ್ನು ನಿಮ್ಮ ಗಮನಕ್ಕೆ ತರುತ್ತೇನೆ ಎಂದು ಹೇಳಿದ್ದಾರೆ.

ಸುಮಾರು 40 ವರ್ಷಗಳ ಬೇಡಿಕೆಯಾಗಿದ್ದ ಪರಿಶಿಷ್ಟ ಜಾತಿ 17% ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ 7% ಹೆಚ್ಚಳ.ಈಗ ಹೇಳಿ ಶ್ರೀಯುತ ರಾಹುಲ್ ಗಾಂಧಿಯವರೇ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ನಿಜವಾದ ವಿರೋಧಿ ಯಾರೆಂದು ಪ್ರಶ್ನೆ ಮಾಡಿದ್ದಾರೆ.

ಇಷ್ಟು ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಜಾರಿಗೆ ತಂದಿರುವ ಬಿಜೆಪಿ ಸರ್ಕಾರ ಎಸ್‌ಸಿ, ಎಸ್‌ಟಿ ಪರವಾಗಿ ಇದೆಯೋ ಇಲ್ಲವೋ ಏನು ಮಾಡದೆ ಈ ಎರಡೂ ಸಮುದಾಯದ ಮೂಗಿಗೆ ತುಪ್ಪ ಸವರಿದ್ದೇ ಕಾಂಗ್ರೆಸ್ ಎಂದು ರಾಹುಲ್ ಗಾಂಧಿಯವರ ಆರೋಪಕ್ಕೆ ದಾಖಲೆ ಸಮೇತ ತಿರುಗೇಟು ನೀಡಿದ್ದಾರೆ. ಕಳೆದ 2018 ಹಾಗೂ 2019ರ ವಿಧಾನಸಭೆ ಮತ್ತು ಲೋಕಸಭಾ ಚುನಾವಣೆಯಲ್ಲಿ ಎಸ್‌ಸಿ, ಎಸ್‌ಟಿ ಹಿಂದುಳಿದ ಸಮುದಾಯದವರು ಕಾಂಗ್ರೆಸ್ ಪಕ್ಷದಿಂದ ಏಕೆ ದೂರವಾದರು ಎಂಬುದನ್ನು ಆತ್ಮಾವಲೋಕನ ಮಾಡಿಕೊಂಡಿದ್ದರೆ ಬಿಜೆಪಿ ಬಗ್ಗೆ ಮಾತನಾಡುವ ಭ್ರಮೆಯೇ ಬರುತ್ತಿರಲಿಲ್ಲ ಎಂದಿದ್ದಾರೆ.



ನಾಳೆಯಿಂದ ದಕ್ಷಿಣ ಭಾರತದ ಮಹಾ ಕುಂಭಮೇಳ

6 ಲಕ್ಷಕ್ಕೂ ಅಧಿಕ ಜನರು ಸೇರುವ ನಿರೀಕ್ಷೆ- ಸಚಿವ ಡಾ.ನಾರಾಯಣಗೌಡ

ಕೆ.ಆರ್.ಪೇಟೆ, ಅ.11– ಕೆ.ಆರ್ ಪೇಟೆಯ ಅಂಬಿಗರಹಳ್ಳಿ–ಸಂಗಾಪುರ–ಪುರ ಗ್ರಾಮದ ತ್ರಿವೇಣಿ ಸಂಗಮದಲ್ಲಿ ಅ.13ರಿಂದ ಆರಂಭಗೊಳ್ಳಲಿರುವ ನಡೆಯಲಿರುವ ದಕ್ಷಿಣ ಭಾರತದ ಮಹಾ ಕುಂಭಮೇಳಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದ್ದು, 16 ರಂದು ಯೋಗಿ ಆದಿತ್ಯನಾಥ್ ಆಗಮಿಸುತ್ತಿದ್ದಾರೆ ಎಂದು ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ನಾರಾಯಣಗೌಡ ತಿಳಿಸಿದರು.

ಇಂದು ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡೆ ಸಚಿವ ಡಾ.ನಾರಾಯಣಗೌಡ ಮತ್ತು ಅಬಕಾರಿ ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಕೆ. ಗೋಪಾಲಯ್ಯ ಜಂಟಿ ಸುದ್ದಿಗೋಷ್ಠಿ ನಡೆಸಿ ಮಹಾಕುಂಭಮೇಳದ ಕುರಿತು ಮಾಹಿತಿ ನೀಡಿದರು.



ಪ್ರತಿದಿನ ಎರಡು ಲಕ್ಷಕ್ಕೂ ಅಧಿಕ ಜನರು ಸೇರುವ ನಿರೀಕ್ಷೆಯಿದ್ದು, ಹಲವು ಸಾಧು ಸಂತರು ಸೇರಿದಂತೆ 6 ಲಕ್ಷಕ್ಕೂ ಹೆಚ್ಚಿನ ಜನರು ಭೇಟಿ ನೀಡುವ ಸಾಧ್ಯತೆ ಇದೆ. ಯಾವುದೇ ರೀತಿಯ ಸಮಸ್ಯೆ ಆಗದಂತೆ ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಸ್ವಾಮೀಜಿಗಳಿಗೆ, ಸಾಧು ಸಂತರಿಗೆ, VVIPಗಳಿಗೆ, ಭಕ್ತರಿಗೆ ಪ್ರತ್ಯೇಕ ಸ್ನಾನಘಟ್ಟ ನಿರ್ಮಿಸಲಾಗಿದೆ ಎಂದು ಸಚಿವ ಡಾ.ನಾರಾಯಣಗೌಡ ಮಾಹಿತಿ ನೀಡಿದರು.

ಬರುವ ಜನರಿಗೆ ನಾಲ್ಕು ದಿನಗಳ ಕಾಲ ನಿರಂತರವಾಗಿ ಊಟದ ವ್ಯವಸ್ಥೆ ಮಾಡಲಾಗಿದೆ. 200 ಕ್ಕೂ ಹೆಚ್ಚು ಬಯೋ ಟಾಯ್ಲೆಟ್ ವ್ಯವಸ್ಥೆ, 200 ಸಾಧುಗಳ ವಾಸ್ತವ್ಯಕ್ಕೆ ಟೆಂಟ್ ವ್ಯವಸ್ಥೆ ಕಲ್ಪಿಸಲಾಗಿದೆ. ಎರಡು ಸಾವಿರಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ ಎಂದು ಸಚಿವ ಡಾ.ನಾರಾಯಣಗೌಡ ತಿಳಿಸಿದರು.

ಆದಿಚುಂಚನಗಿರಿ ಪೀಠಾಧ್ಯಕ್ಷರಾದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಸುತ್ತೂರು ಮಠದ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿಯವರ ನೇತೃತ್ವದಲ್ಲಿ ಮಹಾಕುಂಭಮೇಳ ನಡೆಯಲಿದ್ದು, ಹಲವು ಸ್ವಾಮೀಜಿಗಳು ಪಾಲ್ಗೊಳ್ಳಲಿದ್ದಾರೆ. 14 ರಂದು ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರಿಂದ ಉದ್ಘಾಟನೆ, 16 ರಂದು ಉತ್ತರ ಪ್ರದೇಶದ



ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ನಿಕಟಪೂರ್ವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಹಲವು ಸಚಿವರು ಭಾಗವಹಿಸಲಿದ್ದಾರೆ. ಇದರ ಜೊತೆಗೆ ಆಳ್ವಾಸ್, ಆದಿ ಚುಂಚನಗಿರಿ ಹಾಗೂ ಸುತ್ತೂರು ಸಂಸ್ಥೆಯಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಚಿವ ಡಾ.ನಾರಾಯಣಗೌಡ ಹೇಳಿದರು.

ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಮಾತನಾಡಿ, ಡಾ.ಕೆ.ಸಿ.ನಾರಾಯಣ ಗೌಡರು ಮೊದಲಬಾರಿ ಶಾಸಕರಾದಾಗ ಕುಂಭಮೇಳ ನಡೆದಿತ್ತು. ಇದೀಗ ಮತ್ತೆ ಆಯೋಜಿಸಲಾಗಿದೆ. ಕುಂಭ ಮೇಳಕ್ಕೆ ಆಡಳಿತ, ವಿಪಕ್ಷದ ಎಲ್ಲರಿಗೂ ಆಹ್ವಾನ ನೀಡಲಾಗಿದೆ ಎಂದರು. ಇದು ಧಾರ್ಮಿಕ ಕಾರ್ಯಕ್ರಮವಾಗಿದ್ದು, ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ನೇತೃತ್ವದಲ್ಲಿ ನಡೆಯಲಿದೆ. 40 ಜನ ಸಾಧು ಸಂತರು ಭಾಗಿಯಾಗಲಿದ್ದಾರೆ. ಬರುವವರಿಗೆ ಎಲ್ಲಾ ವ್ಯವಸ್ಥೆ ಮಾಡಲಾಗಿದೆ. ಸಂಗಮದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಎಚ್ಚರಿಕೆ ವಹಿಸಲು ಕ್ರಮ ಕೈಗೊಳ್ಳಲಾಗಿದೆ. ನುರಿತ ಈಜುಪಟುಗಳು, ಪೊಲೀಸರನ್ನು ನೇಮಕ ಮಾಡಲಾಗಿದೆ. ಅ.13ರಂದು ಶ್ರೀ ಮಲ್ಲೆ ಮಹದೇಶ್ವರ ದೇವಸ್ಥಾನದ ಉದ್ಘಾಟನೆ ನಡೆಯಲಿದೆ. ಅದು ಸದಾ ಕಾಲ ತೆರೆದಿರಬೇಕು. ರಾಜ್ಯ ಸರ್ಕಾರದಿಂದ 2 ಕೋಟಿ ಹಣ ಬಿಡುಗಡೆ ಮಾಡಿದ್ದಾರೆ. ಊಟ, ಪ್ರಸಾದಕ್ಕಾಗಿ ದಾನಿಗಳು ವ್ಯವಸ್ಥೆ ಮಾಡಿದ್ದಾರೆ ಎಂದರು.

ಪಾಂಡವಪುರದಲ್ಲಿ ಮಹದೇಶ್ವರ ಜ್ಯೋತಿ ಯಾತ್ರೆಗೆ ಅದ್ದೂರಿ ಸ್ವಾಗತ



ಪಾಂಡವಪುರ ಪಟ್ಟಣಕ್ಕೆ ಆಗಮಿಸಿದ ಮಲೆಮಹದೇಶ್ವರ ಜ್ಯೋತಿರಥವನ್ನು ಬಿಜೆಪಿ ಮುಖಂಡ ಡಾ. ಎನ್.ಎಸ್ ಇಂದ್ರೇಶ್ ನೇತೃತ್ವದಲ್ಲಿ ಭಕ್ತಾದಿಗಳು ಸ್ವಾಗತಿಸಿದರು.

ಪಾಂಡವಪುರ, ಅ.11– ಪಟ್ಟಣಕ್ಕೆ ಆಗಮಿಸಿದ ಮಲೆಮಹದೇಶ್ವರ ಜ್ಯೋತಿ ರಥವನ್ನು ಬಿಜೆಪಿ ಮುಖಂಡ ಡಾ. ಎನ್.ಎಸ್ ಇಂದ್ರೇಶ್ ನೇತೃತ್ವದಲ್ಲಿ ಭಕ್ತಾದಿಗಳು ಸ್ವಾಗತಿಸಿದರು.

ನಂತರ ಮಾತನಾಡಿ, ಕೆ.ಆರ್.ಪೇಟೆ ತಾಲೂಕಿನ ಅಂಬಿಗರಹಳ್ಳಿ ಗ್ರಾಮದಲ್ಲಿ ನಡೆಯುವ ಕುಂಭ ಮೇಳಕ್ಕೆ ರಾಜ್ಯದ ವಿವಿಧೆಡೆಗಳಿಂದ ಲಕ್ಷಾಂತರ ಮಂದಿ ಭಾಗವಹಿಸಲಿದ್ದು, ತಾಲೂಕಿನಿಂದಲೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಮೂಲಕ ಕುಂಭಮೇಳ ಯಶಸ್ವಿಗೆ ಕೈಜೋಡಿಸಬೇಕೆಂದರು.

ಜೀವನದಿ ಮಹಾಸಂಗಮ ತ್ರಿವೇಣಿ ಸಂಗಮದಲ್ಲಿ ಹಲವಾರು ವರ್ಷಗಳ ನಂತರ ಅ.13 ರಿಂದ 16 ರವರಿಗೆ ಮಹಾಕುಂಭ ಮೇಳ ನೆರವೇರಲಿದೆ. ಲಕ್ಷಾಂತರ ಭಕ್ತರು ಪುಣ್ಯಸ್ನಾನ ಮಾಡಲಿದ್ದಾರೆ ಎಂದರು.

ಈ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಸವರಾಜಬೊಮ್ಮಾಯಿ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹಾಗೂ ಮಂತ್ರಿಗಳು ಮತ್ತು ವಿವಿಧ ಮಠಾಧೀಶರು ಪಾಲ್ಗೊಳ್ಳಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ಅಶೋಕ್, ವಿಜಯ, ಕಾಲೇಜ್ ನಿವೃತ್ತ ಪ್ರಾಂಶುಪಾಲ ಶಿವಣ್ಣ, ಮುಖಂಡರಾದ ಚಿಕ್ಕಮರಳಿ, ನವೀನ್‌ಕುಮಾರ್, ಸಂದೇಶ್, ಧನಂಜಯ್ಯ, ಅಶೋಕ್, ರಾಜೀವ್, ಪುರಸಭಾ ಸದಸ್ಯರಾದ ಬೇಕರಿ ರಾಮಲಿಂಗಂ, ನರಸಿಂಹಚಾರ್, ಶ್ರೀನಿವಾಸ್‌ನಾಯಕ ಹಾಗೂ ಸಿದ್ಧಿ ವಿನಾಯಕ ಸೇವಾ ಸಮಿತಿ ಸದಸ್ಯರು ಹಾಜರಿದ್ದರು.

ಆರತಿ ಉಕ್ಕಡದಲ್ಲಿ ವಾಲ್ಮೀಕಿ ಜಯಂತಿ



ಶ್ರೀರಂಗಪಟ್ಟಣ, ಅ.11– ತಾಲೂಕಿನ ಆರತಿ ಉಕ್ಕಡ ಅಹಲ್ಯಾದೇವಿ ದೇವಾಲಯದ ಬಳಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆಯನ್ನು ಗ್ರಾಮಸ್ಥರ ನೆರವಿನೊಂದಿಗೆ ಸಂಭ್ರಮದಿಂದ ಆಚರಿಸಿದರು.

ಅಹಲ್ಯಾದೇವಿ ದೇವಾಲಯದ ಸಮಿತಿ ಅಧ್ಯಕ್ಷ ಎಂ.ಚಂದ್ರು ಮಹರ್ಷಿ ವಾಲ್ಮೀಕಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿದ ಎಂ.ಚಂದ್ರು, ಮಹರ್ಷಿ ವಾಲ್ಮೀಕಿ ಅವರ ತತ್ವ ಸಿದ್ಧಾಂತಗಳನ್ನು ಎಲ್ಲರೂ ಅಳವಡಿಸಿಕೊಳ್ಳುವಂತೆ ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಗಂಗಾಧರ್ ಕುಮಾರ್, ಲೋಕೇಶ್, ಗೌರೀಶ್, ದರ್ಶನ್, ಶಿವು ಕಡತನಾಳು, ಗಣೇಶ್ ಕ್ಯಾತನಹಳ್ಳಿ, ಮರಿಯಪ್ಪ, ವಿನಯ್, ಹೋಟೆಲ್ ವೆಂಕಟೇಶ್, ಬಾಲು, ವಿಶ್ವೇಶ್ವರಯ್ಯ ಸೇರಿದಂತೆ ಮತ್ತಿತರರು, ಗ್ರಾಮಸ್ಥರು ಭಾಗವಹಿಸಿದ್ದರು.

ಸ್ವಾತಂತ್ರ್ಯೋತ್ಸವಕ್ಕೆ ಜಯಪ್ರಕಾಶ್ ನಾರಾಯಣ್ ಕೊಡುಗೆ ಅಪಾರ



ಮಂಡ್ಯ,ಅ.11– ಜಯಪ್ರಕಾಶ್ ನಾರಾಯಣ್ ಅವರು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮಹತ್ವದ ಪಾತ್ರ ವಹಿಸಿದ ಸಮಾಜವಾದಿ ಎಂದು ವಿಚಾರವಾದಿ ಕೆ.ಮಾಯಿಗೌಡ ತಿಳಿಸಿದರು.

ನಗರದ ಕಲಾಮಂದಿರದ ಪಕ್ಕದಲ್ಲಿರುವ ಜೆ.ಪಿ.ಸ್ಮಾರಕ ವಿದ್ಯಾಸಂಸ್ಥೆಯಲ್ಲಿ ಏರ್ಪಡಿಸಿದ್ದ ಲೋಕನಾಯಕ ಜಯಪ್ರಕಾಶ ನಾರಾಯಣ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಗಾಂಧೀಜಿ, ಡಾ.ಬಿ.ಆರ್.ಅಂಬೇಡ್ಕರ್, ಜೆ.ಪಿ.ಅವರು ಮಹಾತ್ಮರ ಸಾಲಿಗೆ ಸೇರುತ್ತಾರೆ, ಗಾಂಧೀಜಿ ಅವರಿಗಿಂತ ಉದಾತ್ತ ಭಾವನೆ ಇಟ್ಟುಕೊಂಡಿದ್ದವರು ಜಯಪ್ರಕಾಶ ನಾರಾಯಣ ಎಂದು ಹೇಳಿದರು.

ಕೇಂದ್ರದಲ್ಲಿ ಮೊಟ್ಟಮೊದಲ ಬಾರಿಗೆ ಕಾಂಗ್ರೆಸ್ಸೇತರ ಸರ್ಕಾರ ಉಂಟುಮಾಡುವಲ್ಲಿ ಜಯಪ್ರಕಾಶ ನಾರಾಯಣರ ಪಾತ್ರ ಬಹಳ ದೊಡ್ಡದಿದೆ. ಈ ಎಲ್ಲಾ ಕಾರಣದಿಂದ ಅವರಿಗೆ ಜನಸಾಗರವೇ ಲೋಕನಾಯಕ ಎನ್ನುವ ಬಿರುದು ಕೊಟ್ಟಿದೆ ಎಂದು ಹೇಳಿದರು.

ಜೆಪಿ ಸ್ಮಾರಕ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಕೌಡ್ಲೆ ಚೆನ್ನಪ್ಪ ಮಾತನಾಡಿ, ಪ್ರಜಾತಂತ್ರ ವ್ಯವಸ್ಥೆಗೆ ಸವಾಲಾಗಿದ್ದ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ದುರಾಡಳಿತಗಳ ವಿರುದ್ಧ ಜೆ.ಪಿ.ಯವರು ದೇಶದಾದ್ಯಂತ ಚಳವಳಿಗೆ ಕರೆಕೊಟ್ಟು ಸಂಪೂರ್ಣ ಕ್ರಾಂತಿಯನ್ನು ಹುಟ್ಟು ಹಾಕಿದರು. ದೇಶದಾದ್ಯಂತ ನಡೆದ ಈ ಚಳುವಳಿಯ ಕರೆಗೆ ಓಗೊಟ್ಟು ಜನತೆ ಜೆಪಿ.ಮನದಾಳವನ್ನು ಅರಿತು ಚಳುವಳಿಗೆ ಧುಮಿಕಿದರು ಎಂದು ಹೇಳಿದರು.

ಇದರ ವಿರುದ್ಧವಾಗಿ ಅಂದಿನ ಕೇಂದ್ರ ಸರಕಾರ ತುರ್ತು ಪರಿಸ್ಥಿತಿಯನ್ನು ಜಾರಿಗೆ ತಂದಿತು. ಸಾವಿರಾರು ಜನ ಮುಖಂಡರುಗಳ ಜೊತೆಗೆ ದೇಶಪ್ರೇಮಿಗಳು ಮತ್ತು ಪ್ರಜಾತಂತ್ರ ಪ್ರೇಮಿಗಳು ಸೆರೆಮನೆ ವಾಸವನ್ನು ಅನುಭವಿಸಿದ್ದಲ್ಲದೆ ಸುಮಾರು ಒಂದೂವರೆ ವರ್ಷಗಳ ಕಾಲ ಜೈಲಿನಲ್ಲಿರಬೇಕಾಯಿತು. ಜೈಲಿನಿಂದಲೇ ಎಲ್ಲಾ ದೇಶಭಕ್ತರು, ರಾಜಕೀಯ ಪಕ್ಷಗಳನ್ನು ಒಂದುಗೂಡಿಸಿದ್ದರಿಂದ ಜನತಾ ಪಕ್ಷ ರಚನೆಯಾಗಲು ಕಾರಣವಾಯಿತು. ತುರ್ತು ಪರಿಸ್ಥಿತಿಯ ನಂತರ ನಡೆದ ಮಹಾಚುನಾವಣೆಯಲ್ಲಿ ಅಂದಿನ ಕಾಂಗ್ರೆಸ್ ಸರಕಾರ ಸೋಲನ್ನು ಅನುಭವಿಸಿತು ಎಂದು ಹೇಳಿದರು.

ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಗಾಂಧೀಜಿಗೆ ಕೊಟ್ಟ ಗೌರವವನ್ನು ಬೇರೆ ಸ್ವಾತಂತ್ರ್ಯ ಹೋರಾಟಗಾರರಿಗೆ ಕೊಡಲಿಲ್ಲ ಎಂದರು. 1970 ರ ದಶಕದಲ್ಲಿ ಲೋಕನಾಯಕ ಜಯಪ್ರಕಾಶ ನಾರಾಯಣ ಅವರು ಮಂಡ್ಯಕ್ಕೆ ಬಂದು ಭಾಷಣ ಮಾಡಿದ ಜೆಪಿ ವಿದ್ಯಾಸಂಸ್ಥೆಯ ಸ್ಥಳವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸ್ಮಾರಕ ಮಾಡುವಂತೆ ಪ್ರಯತ್ನ ಮಾಡಿ ಪತ್ರವ್ಯವಹಾರ ಮಾಡಲಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಜೆಪಿಯವರ ಸಂಪೂರ್ಣ ಕ್ರಾಂತಿಯ ಸಮಯದಲ್ಲಿ ಸಂಚಾಲಕರಾಗಿ ಕೆಲಸ ನಿರ್ವಹಿಸಿದ ಡಾ.ಟಿ.ಎಲ್.ಲಿಂಗಯ್ಯ ಅವರನ್ನು ಅವರ ನಿವಾಸಕ್ಕೆ ತೆರಳಿ ಸನ್ಮಾನಿಸಲಾಯಿತು.

ಜೆಪಿ ವಿದ್ಯಾಸಂಸ್ಥೆಯ ಅಧ್ಯಕ್ಷ ಎ.ಹೆಚ್.ನಾರಾಯಣ್, ವೈ.ಎಸ್.ಸಿದ್ದರಾಜು, ಬಿ.ವಿವೇಕಾನಂದ, ದಳವಾಯಿ ಕೋಡಹಳ್ಳಿ ಚಂದ್ರಶೇಖರ್ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಕೆರೆಯಲ್ಲಿ ಬಲೆಗೆ ಸಿಲುಕಿ ವ್ಯಕ್ತಿ ಸಾವು


ನಾಗಮಂಗಲ, ಅ.11– ಮೀನು ಹಿಡಿಯಲು ಹೋದ ವ್ಯಕಿಯೊಬ್ಬ ಬಲೆಯಲ್ಲಿ ಸಿಕ್ಕಿಹಾಕಿಕೊಂಡು ಹೊರಬರ ಲಾರದೇ ಸಾವಿಗೀಡಾದ ಘಟನೆ ತಾಲೂಕಿನ ಕೋಟೆ ಬೆಟ್ಟ ಬಳಿಯಿರುವ ಪಾಲಕೆರೆಯಲ್ಲಿ ನಡೆದಿದೆ.



ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಹೊಸಹಳ್ಳಿ ಗ್ರಾಮದ ರವಿ (45) ಸಾವಿಗೀಡಾದ ವ್ಯಕ್ತಿ. ಈತ ಹಲವಾರು ವರ್ಷಗಳಿಂದ ಮೀನು ಗುತ್ತಿಗೆದಾರರ ಬಳಿ ಕೆಲಸ ಮಾಡಿಕೊಂಡಿದ್ದು, ಮಂಗಳವಾರ ಬೆಳಗ್ಗೆ 10 ಘಂಟೆಗೆ ಸಹಚರರೊಡನೆ ಮೀನು ಹಿಡಿಯಲು ತೆಪ್ಪದಲ್ಲಿ ಹೋಗಿ ಬಲೆಬೀಸಿದ್ದಾನೆ ಆದರೆ ಬಲೆ ನೀರಿನಲ್ಲಿ ಸಿಕ್ಕಿಹಾಕಿಕೊಂಡಿದ್ದು, ಅದನ್ನು ತೆಗೆಯುವ ಪ್ರಯತ್ನದಲ್ಲಿ ಆತ ನೀರಿನಲ್ಲಿ ಬಿದ್ದಿದ್ದಾನೆ. ಈ ವೇಳೆ ಬಲೆಯಲ್ಲಿ ಸಿಕ್ಕಿಹಾಕಿಕೊಂಡು ಹೊರಬರಲಾರದೇ ಸಾವಿಗೀಡಾಗಿದ್ದಾನೆ ಎನ್ನಲಾಗಿದೆ. ರವಿ ಎಷ್ಟು ಹೊತ್ತಾದರೂ ಬಾರದಿದ್ದುದನ್ನು ಕಂಡು ಸಹಚರರು ತೆಪ್ಪವಿದ್ದ ಜಾಗಕ್ಕೆ ಹೋಗಿ ನೋಡಿದಾಗ ಬಲೆಯಲ್ಲಿ ಸಾವಿಗೀಡಾಗಿದ್ದ ಶವವನ್ನು ನೋಡಿ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಮೀನುಗಾರಿಕಾ ಇಲಾಖೆ ಅಧಿಕಾರಿಗಳು ಬಂದು ಪರಿಶೀಲನೆ ನಡೆಸಿ, ಪೊಲೀಸರಿಗೆ ಸುದ್ದಿ ಮುಟ್ಟಿಸಿದ್ದಾರೆ. ಸ್ಥಳಕ್ಕೆ ಪಟ್ಟಣ ಠಾಣೆ ಪೊಲೀಸರು ಆಗಮಿಸಿ, ಶವ ಹೊರತೆಗೆದು, ಶವಪರೀಕ್ಷೆಯ ನಂತರ ವಾರಸುದಾರರಿಗೆ ನೀಡಿದರು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬಿಸಿಸಿಐ ನೂತನ ಅಧ್ಯಕ್ಷರಾಗಿ ಕರ್ನಾಟಕದ ರೋಜರ್ ಬಿನ್ನಿ ಆಯ್ಕೆ

ಕಾರ್ಯದರ್ಶಿಯಾಗಿ ಜಯ್ ಶಾ ಮುಂದುವರಿಕೆ


ರೋಜರ್ ಬಿನ್ನಿ


ಜಯ್ ಶಾ

ನವದೆಹಲಿ, ಅ.11– 1983ರ ವಿಶ್ವ ಕಪ್ ವಿಜೇತ ಟೀಂ ಇಂಡಿಯಾ ಹೀರೋ, ಬೆಂಗಳೂರಿನ ರೋಜರ್ ಬಿನ್ನಿ ಬಿಸಿಸಿಐನ ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳಲು ಸಜ್ಜಾಗಿದ್ದಾರೆ. ಹಾಲಿ ಅಧ್ಯಕ್ಷ ಸೌರವ್ ಗಂಗೂಲಿ ಅವರ ಅಧಿಕಾರಾವಧಿ ಅಕ್ಟೋಬರ್ 18 ರಂದು ಅಂತ್ಯಗೊಳ್ಳಲಿದೆ. ಕಳೆದ ಒಂದು ವಾರದಿಂದ ಹಲವು ಸುತ್ತಿನ ಚರ್ಚೆಯ ನಂತರ 67 ವರ್ಷದ ಬೆಂಗಳೂರಿನ ರೋಜರ್ ಬಿನ್ನಿ ಬಿಸಿಸಿಐನ 36ನೇ ಅಧ್ಯಕ್ಷರಾಗಲು ನಿರ್ಧರಿಸಲಾಯಿತು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಪುತ್ರ ಜಯ್ ಶಾ ಬಿಸಿಸಿಐ ಕಾರ್ಯದರ್ಶಿಯಾಗಿ ಎರಡನೇ ಅವಧಿಗೆ ಮುಂದುವರೆಯಲಿದ್ದಾರೆ. ಐಸಿಸಿ ಮಂಡಳಿಯಲ್ಲಿ ಗಂಗೂಲಿ ಬದಲಿಗೆ ಜಯ್ ಶಾ ಭಾರತವನ್ನು ಪ್ರತಿನಿಧಿಸಲಿದ್ದಾರೆ. ರಾಜೀವ್ ಶುಕ್ಲಾ ಉಪಾಧ್ಯಕ್ಷರಾಗಿ ಮುಂದುವರೆಯಲಿದ್ದಾರೆ.

ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರ ಸಹೋದರ ಅರುಣ್ ಸಿಂದ್ ಧುಮಲ್ ಇದೀಗ ಐಪಿಎಲ್ ಮುಖ್ಯಸ್ಥರಾಗಲಿದ್ದಾರೆ. ಬ್ರಿಜೇಶ್ ಪಟೇಲ್ ಜಾಗಕ್ಕೆ ಧುಮಲ್ ಬರಲಿದ್ದಾರೆ. ಮಹಾರಾಷ್ಟ್ರ ಬಿಜೆಪಿ ಮುಖಂಡ ಅಶಿಶ್ ಶೆಲರ್ ನೂತನ ಖಜಾಂಚಿಯಾಗಿದ್ದು, ಅಸ್ಸಾಂ ಮುಖ್ಯಮಂತ್ರಿ ಹಿಮಂತಾ ಬಿಸ್ವಾ ಶರ್ಮಾ ಆಪ್ತ ದೇವಜಿತ್ ಸೈಕಿಯಾ ನೂತನ ಜಂಟಿ ಕಾರ್ಯದರ್ಶಿಯಾಗಿದ್ದಾರೆ.

ರೋಜರ್ ಬಿನ್ನಿ ಅಕ್ಟೋಬರ್ 18 ರಂದು ಮುಂಬೈನ ಎಜಿಎಂನಲ್ಲಿ ಅಧಿಕಾರ ವಹಿಸಿಕೊಳ್ಳುವರು. ಎಲ್ಲಾ ಅಭ್ಯರ್ಥಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಿರುವುದರಿಂದ ಯಾವುದೇ ಚುನಾವಣೆ ನಡೆಸುತ್ತಿಲ್ಲ. ಭಾರತ ತಂಡ 1983ರ ವಿಶ್ವಕಪ್ ಗೆಲ್ಲುವಲ್ಲಿ ರೋಜರ್ ಬಿನ್ನಿ ಪ್ರಮುಖ ಪಾತ್ರ ನಿರ್ವಹಿಸಿದರು. ಪ್ರತಿಷ್ಠಿತ ಟೂರ್ನಿಯಲ್ಲಿ ಮಧ್ಯಮ ವೇಗಿ ರೋಜರ್ ಬಿನ್ನಿ 8 ಪಂದ್ಯಗಳಲ್ಲಿ 18 ವಿಕೆಟ್ ಪಡೆದಿದ್ದರು.

ಐಪಿಎಲ್ ಮುಖ್ಯಸ್ಥ ಸ್ಥಾನ ತಿರಸ್ಕರಿಸಿದ ಗಂಗೂಲಿ: ಬಿಸಿಸಿಐ ಅಧ್ಯಕ್ಷರಾಗಿ ಎರಡನೇ ಅವಧಿಗೆ ಮುಂದುವರೆಯಲು ಗಂಗೂಲಿ ಬಯಸಿದ್ದರು. ಆದರೆ, ಅಂತಹ ಅವಕಾಶ ಇಲ್ಲ ಎಂಬುದನ್ನು ಅವರಿಗೆ ಹೇಳಲಾಯಿತು. ಐಪಿಎಲ್ ಮುಖ್ಯಸ್ಥ ಸ್ಥಾನದ ಅವಕಾಶವನ್ನು ಅವರು ನಿರಾಕರಿಸಿದರು ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ದ.ಆಫ್ರಿಕಾ ವಿರುದ್ಧ ಏಕದಿನ ಸರಣಿ ಗೆದ್ದ ಭಾರತ

ಕುಲದೀಪ್ ಯಾದವ್ ಪಂದ್ಯ, ಮೊಹಮ್ಮದ್ ಸಿರಾಜ್ ಸರಣಿ ಶ್ರೇಷ್ಠ



ದೆಹಲಿ, ಅ.11– ಕುಲದೀಪ್ ಯಾದವ್ ಅವರ ಸ್ಪಿನ್ ಮೋಡಿ ನೆರವಿನಿಂದ ಭಾರತ ಪ್ರವಾಸಿ ದಕ್ಷಿಣ ಆಫ್ರಿಕಾ ವಿರುದ್ಧ 7 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಮೂರು ಪಂದ್ಯಗಳ ಏಕದಿನ ಸರಣಿಯನ್ನು 2–1 ಅಂತರದಿಂದ ತನ್ನದಾಗಿಸಿಕೊಂಡಿತು.

ಇಲ್ಲಿನ ಅರುಣ್ ಜೆಟ್ಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ಪರ ಹೆನ್ರಿಕ್ ಕ್ಲಾಸೆನ್ 34 ಮಲಾನ್ 15, ಜೇಸನ್ 14 ರನ್ ಗಳಿಸಿದ್ದು ಬಿಟ್ಟರೆ, ಉಳಿದ ಆಟಗಾರರು ಭಾರತೀಯ ಬೌಲರ್‌ಗಳ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿ ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು. ಅಂತಿಮವಾಗಿ ದಕ್ಷಿಣ ಆಫ್ರಿಕಾ 27.1 ಓವರ್‌ಗಳಲ್ಲಿ 99 ರನ್‌ಗಳಿಗೆ ಆಲೌಟ್ ಆಯಿತು. ಭಾರತದ ಪರ 4 ವಿಕೆಟ್ ಕಬಳಿಸಿದ ಕುಲ ದೀಪ್ ಯಾದವ್ ಯಶಸ್ವಿ ಬೌಲರ್ ಎನಿಸಿದರು. ಮೊಹಮ್ಮದ್ ಸಿರಾಜ್, ವಾಷಿಂಗ್ಟನ್ ಸುಂದರ್ ಮತ್ತು ಶಹಬಾಜ್ ಅಹ್ಮದ್ ತಲಾ 2 ವಿಕೆಟ್ ಉರುಳಿಸಿ ಗಮನ ಸೆಳೆದರು. 100 ರನ್‌ಗಳ ಸಾಧಾರಣ ಗೆಲುವಿನ ಗುರಿ ಬೆನ್ನತ್ತಿದ ಭಾರತ 19.1 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 105 ರನ್ ಗಳಿಸುವ ಮೂಲಕ ಗುರಿ ತಲುಪಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ಶಿಖರ್ ಧವನ್ 8 ರನ್ ಗಳಿಸಿ ಬಹುಬೇಗ ನಿರ್ಗಮಿಸಿದರು. ನಂತರ ಬಂದ ಇಶಾನ್ ಕಿಶನ್ ಕೂಡ 10 ರನ್ ಗಳಿಸಿ ಔಟಾದರು. ಮತ್ತೊಂದೆಡೆ ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿದ ಶುಭ್‌ಮನ್ ಗಿಲ್ 49 ರನ್‌ಗಳಿಗೆ ಔಟಾಗುವ ಮೂಲಕ 1 ರನ್‌ನಿಂದ ಅರ್ಧಶತಕದಿಂದ ವಂಚಿತರಾದರು. ಉಳಿದಂತೆ ಶ್ರೇಯಸ್ ಅಯ್ಯರ್ 28, ಸಂಜು ಸ್ಯಾಮ್ಸನ್ 2 ರನ್ ಗಳಿಸಿದರು. ಲುಂಗಿ ಎನ್‌ಗಿಡಿ, ಜಾರ್ನ್ ಫಾರ್ಚುಯಿನ್ ತಲಾ ಒಂದೊಂದು ವಿಕೆಟ್ ಪಡೆದರು. ಕುಲದೀಪ್ ಯಾದವ್ ಪಂದ್ಯಶ್ರೇಷ್ಠ, ಮೊಹಮ್ಮದ್ ಸಿರಾಜ್ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಪ್ರೊ ಕಬಡ್ಡಿ ಲೀಗ್: ತೆಲುಗು ಟೈಟಾನ್ಸ್, ಹರಿಯಾಣ ಸ್ಟೀಲರ್ಸ್‌ಗೆ ಜಯ

ಬೆಂಗಳೂರು, ಅ.10– ಕಂಠೀರವ ಕ್ರೀಡಾಂಗಣದಲ್ಲಿ ನಡೆದ 9ನೇ ಆವೃತ್ತಿ ಪ್ರೊ ಕಬಡ್ಡಿ ಲೀಗ್‌ನ ಮಂಗಳವಾರದ ಮೊದಲ ಪಂದ್ಯದಲ್ಲಿ ತೆಲುಗು ಟೈಟಾನ್ಸ್ ತಂಡ 30–21 ಅಂಕಗಳಿಂದ ಪ್ರಬಲ ಪಾಟ್ನಾ ಪೈರೇಟ್ಸ್ ತಂಡವನ್ನು ಮಣಿಸಿತು.



ಎರಡೂ ತಂಡಗಳು ಪ್ರತೀ ಅಂಕಕ್ಕಾಗಿ ತೀವ್ರವಾಗಿ ಹೋರಾಡಿದ್ದರಿಂದ ಅಂಕಪಟ್ಟಿ ದೊಡ್ಡದಾಗಿ ಬೆಳೆಯಲಿಲ್ಲ. ಗೆಲುವು ಸಾಧಿಸಿದ ತೆಲುಗು ಪರ ದಾಳಿಕಾರ ಸಿದ್ಧಾರ್ಥ ಮಿಂಚಿದರು. ಅವರು 13 ಬಾರಿ ಎದುರಾಳಿಗಳ ಕೋಟೆಯೊಳಕ್ಕೆ ನುಗ್ಗಿದರು. ಈ ಯತ್ನದಲ್ಲಿ 5 ಬಾರಿ ಯಶಸ್ವಿಯಾಗಿ ಒಟ್ಟು 7 ಅಂಕ ಗಳಿಸಿದರು. ತಂಡದಲ್ಲಿ ಅತ್ಯುತ್ತಮ ಯಶಸ್ಸು ಸಾಧಿಸಿದ ಇನ್ನೊಬ್ಬ ದಾಳಿಕಾರ ಮೋನು ಗೋಯತ್. ಒಟ್ಟು 18 ಯತ್ನಗಳಲ್ಲಿ ಅವರು 9 ಅಂಕ ಗಳಿಸಿದರು. ರಕ್ಷಣೆಯಲ್ಲೂ ಅವರು ಯಶಸ್ವಿಯಾಗಿ 1 ಅಂಕ ಪಡೆದರು.

ರಕ್ಷಣೆಯಲ್ಲಿ ನಾಯಕ ಸುರ್ಜೀತ್ ಸಿಂಗ್ (4), ಪರ್ವೇಶ್ (2) ಉತ್ತಮ ನಿಯಂತ್ರಣ ಸಾಧಿಸಿದರು. ಪಾಟ್ನಾ ಪರ ಸಚಿನ್ ಉತ್ತಮ ದಾಳಿ ನಡೆಸಿದರು. ಅವರ 19 ಯತ್ನಗಳಲ್ಲಿ ಸಿಕ್ಕಿದ್ದು 6 ಅಂಕ ಮಾತ್ರ. ಆಲ್‌ರೌಂಡರ್ ರೋಹಿತ್ ಗುಲಿಯ 5 ಅಂಕ ಪಡೆದರು. ರಕ್ಷಣೆಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ್ದು ಸುನೀಲ್. ಅವರು 6 ಬಾರಿ ಎದುರಾಳಿಯನ್ನು ಕೋಟೆಯೊಳಕ್ಕೆ ಕೆಡವಿಕೊಳ್ಳಲು ಯತ್ನಿಸಿ 4 ಅಂಕ ಪಡೆದರು.

ಹರಿಯಾಣಕ್ಕೆ ಸ್ಟೀಲರ್ಸ್‌ಗೆ ಜಯ: ಇನ್ನೊಂದು ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ 27–22 ಅಂಕಗಳಿಂದ ತಮಿಳ್ ತಲೈವಾಸ್ ತಂಡವನ್ನು ಮಣಿಸಿತು. ಈ ಪಂದ್ಯವೂ ಸಂಪೂರ್ಣ ಜಿದ್ದಾಜಿದ್ದಿಯಿಂದ ಕೂಡಿತ್ತು.

ಹಾಸ್ಟೆಲ್‌ನಲ್ಲಿ ಪಿಯು ವಿದ್ಯಾರ್ಥಿ ಆತ್ಮಹತ್ಯೆ

ಮೈಸೂರು, ಅ.11(ಎಸ್‌ಪಿಎನ್)– ಪ್ರಥಮ ಪಿಯುಸಿ ವಿದ್ಯಾರ್ಥಿಯೋರ್ವ ಹಾಸ್ಟೆಲ್‌ನಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ವಿನಾಯಕನಗರ(ಪಡುವಾರಹಳ್ಳಿ) ಮಂಗಳವಾರ ನಡೆದಿದೆ.



ಹೆಚ್.ಡಿ.ಕೋಟೆ ತಾಲೂಕಿನ ಅಂತರಸಂತೆ ನಿವಾಸಿ ಶ್ರೀಧರ್ ಅವರ ಪುತ್ರ ದೀಕ್ಷಿತ್ (16) ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ. ನಗರದ ಖಾಸಗಿ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವಿದ್ಯಾಭ್ಯಾಸ ಮಾಡುತ್ತಿದ್ದ. ಈತ ದಸರಾ ರಜೆ ಮುಗಿಸಿಕೊಂಡು ಮಂಗಳವಾರ ಬೆಳಗ್ಗೆಯಷ್ಟೇ ಹಾಸ್ಟೆಲ್‌ಗೆ ಬಂದಿದ್ದಾನೆ. ಹಾಸ್ಟೆಲ್‌ನಲ್ಲಿದ್ದ ವಿದ್ಯಾರ್ಥಿಗಳು ಕಾಲೇಜಿಗೆ ಹೋಗಿದ್ದ ವೇಳೆ ರೂಂನಲ್ಲಿ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಆಗಮಿಸಿದ ಜಯಲಕ್ಷ್ಮಿಪುರಂ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಇನ್ನೂ ಈ ಸಂಬಂಧ ಯಾವುದೇ ಪ್ರಕರಣ ದಾಖಲಾಗಿಲ್ಲ.

ಸರ್ಕಾರಿ ಗೌರವದೊಂದಿಗೆ ಸ್ವಗ್ರಾಮದಲ್ಲಿ ಮುಲಾಯಂ ಸಿಂಗ್ ಅಂತ್ಯಕ್ರಿಯೆ

ಲಕ್ನೋ, ಅ.11– ಸಮಾಜವಾದಿ ಪಕ್ಷದ ಸಂಸ್ಥಾಪಕ ಮತ್ತು ಉತ್ತರಪ್ರದೇಶದ ಮಾಜಿ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್ ಅವರ ಅಂತ್ಯಕ್ರಿಯೆ, ಇಂದು ಅವರ ಹುಟ್ಟೂರಿನಲ್ಲಿ ನೆರವೇರಿದೆ. ಇಟಾವಾ ಜಿಲ್ಲೆಯ ಅವರ ಹುಟ್ಟೂರಾದ ಸೈಫಾಯಿ ಗ್ರಾಮದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ಮಾಡಲಾಯಿತು.



ಅಂತಿಮ ವಿಧಿ ವಿಧಾನದ ವೇಳೆ ಗ್ರಾಮದಲ್ಲಿ ದೇಶದ ರಾಜಕಾರಣಿಗಳು ಸೇರಿದಂತೆ ಜನಸಾಗರವೇ ನೆರೆದಿತ್ತು. ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಹಾಗೂ ಸಿಂಗ್ ಅವರ ಪುತ್ರ ಅಖಿಲೇಶ್ ಯಾದವ್, ತಂದೆಯ ಚಿತೆಗೆ ಅಗ್ನಿಸ್ಪರ್ಶ ಮಾಡಿದರು. ಸಮಾಜವಾದಿ ಪಕ್ಷದ ಹಿರಿಯ ನಾಯಕ ಕಳೆದ ಸೋಮವಾರ ಗುರುಗ್ರಾಮ್‌ನ ಮೇದಾಂತ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 82 ವರ್ಷ ವಯಸ್ಸಾಗಿತ್ತು. ಅವರ ಪಾರ್ಥಿವ ಶರೀರವನ್ನು ಸೋಮವಾರ ಸಂಜೆ ಹುಟೂರಾದ ಸೈಫಾಯಿ ಗ್ರಾಮಕ್ಕೆ ತರಲಾಯಿತು. ಗ್ರಾಮದಲ್ಲಿ ಸೇರಿದ್ದ ಸಾವಿರಾರು ಜನರು "ನೇತಾಜಿ" ಅವರಿಗೆ ಅಂತಿಮ ನಮನ ಸಲ್ಲಿಸಲು ಸೇರಿದ್ದರು.

ಯಾದವ್ ಅವರ ಪಾರ್ಥಿವ ಶರೀರವನ್ನು ಅಂತಿಮ ಸಂಸ್ಕಾರಕ್ಕಾಗಿ ವಾಹನದಲ್ಲಿ ಕೊಂಡೊಯ್ಯುತ್ತಿದ್ದಂತೆ ವೇಳೆ "ನೇತಾಜಿ ಅಮರ್ ರಹೇನ್" (ನೇತಾಜಿ ಚಿರಾಯುವಾಗಲಿ!) ಎಂದು ಜನಸಾಗರದಿಂದ ಘೋಷಣೆ ಮೊಳಗಿತು. ನೆಚ್ಚಿನ ನಾಯಕನ ಅಗಲಿಕೆಗೆ ಸಾವಿರಾರು ಜನ ಕಂಬನಿ ಮಿಡಿದರು. ಅಖಿಲೇಶ್ ಯಾದವ್ ಮಾತ್ರವಲ್ಲದೆ, ಅವರ ಸಹೋದರ ಶಿವಪಾಲ್ ಯಾದವ್ ಮತ್ತು ಇತರ ಕುಟುಂಬ ಸದಸ್ಯರು ಹೂವಿನ ಹಾರಗಳಿಂದ ಅಲಂಕರಿಸಲ್ಪಟ್ಟ ಟ್ರಕ್‌ನಲ್ಲಿ ಇದ್ದರು.

ಗ್ರಾಮದ ಕಾಂಕ್ರೀಟ್ ರಸ್ತೆಯಲ್ಲಿ ವಾಹನ ನಿಧಾನಗತಿಯಲ್ಲಿ ಸಾಗುತ್ತಿದ್ದಂತೆ ಅಪಾರ ಜನಸ್ತೋಮವೇ ವಾಹನದೊಂದಿಗೆ ಸಾಗಿತು. ರಕ್ಷಣಾ ಸಚಿವ ರಾಜನಾಥ್ ಸಿಂಗ್, ಛತ್ತೀಸ್‌ಗಢ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಮತ್ತು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ತೆಲುಗು ದೇಶಂ ಪಕ್ಷದ ಮುಖ್ಯಸ್ಥ ಎನ್ ಚಂದ್ರಬಾಬು ನಾಯ್ಡು ಮತ್ತು ಬಿಜೆಪಿ ನಾಯಕಿ ರೀಟಾ ಬಹುಗುಣ ಜೋಶಿ ಸಹ ಉಪಸ್ಥಿತರಿದ್ದರು.

ಭಾರತ್ ಜೋಡೋ ಯಾತ್ರೆ ವೇಳೆ ರಸ್ತೆಯಲ್ಲಿ ಪುಷ್ ಅಪ್ ಮಾಡಿದ ರಾಹುಲ್ ಗಾಂಧಿ; ಡಿಕೆ ಶಿವಕುಮಾರ್ ಸಾಥ್



ಬೆಂಗಳೂರು: ಭಾರತ್ ಜೋಡೋ ಯಾತ್ರೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿಭಿನ್ನವಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಭಿನ್ನ ವಿಭಿನ್ನ ವಿಶೇಷ ವೈರಲ್ ದೃಶ್ಯಗಳು ಭಾರತ್ ಜೋಡೋ ಯಾತ್ರೆಯಲ್ಲಿ ಕಂಡುಬರುತ್ತಿವೆ. ಸದ್ಯ ಕರ್ನಾಟಕದಲ್ಲಿರುವ ರಾಹುಲ್ ಗಾಂಧಿ ರಸ್ತೆಯಲ್ಲಿ ಪುಶ್ ಅಪ್ ಮಾಡಿದ್ದಾರೆ.

52 ವರ್ಷದ ರಾಹುಲ್ ಗಾಂಧಿ ರಸ್ತೆಯೊಂದರಲ್ಲಿ ಪುಷ್–ಅಪ್‌ಗಳನ್ನು ಪ್ರದರ್ಶಿಸುತ್ತಿದ್ದಾರೆ. ರಾಹುಲ್ ಗಾಂಧಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್, ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ ವೇಣುಗೋಪಾಲ್ ಅವರು ಬಾಲಕನೊಬ್ಬನೊಂದಿಗೆ ಪುಷ್–ಅಪ್ ಮಾಡುತ್ತಿರುವ ಫೋಟೋಗಳು ವೈರಲ್ ಆಗಿವೆ. ರಾಹುಲ್ ಗಾಂಧಿ ಮಾತ್ರ ಸರಿಯಾಗಿ ಪುಷ್ ಅಪ್ ಮಾಡುತ್ತಿದ್ದಾರೆ. ಚಿತ್ರಗಳನ್ನು ಹಂಚಿಕೊಂಡ ರಂದೀಪ್ ಸುರ್ಜೆವಾಲಾ ಕೂಡ ಅದೇ ರೀತಿ ಹೇಳಿದ್ದಾರೆ. 'ಒಂದು ಪೂರ್ಣ ಮತ್ತು ಎರಡು ಅರ್ಧ ಪುಷ್‌ಅಪ್‌ಗಳು!' ಎಂದು ರಂದೀಪ್ ಸುರ್ಜೆವಾಲಾ ಚಿತ್ರಕ್ಕೆ ಶೀರ್ಷಿಕೆ ನೀಡಿದ್ದಾರೆ. ಕೆಲವು ದಿನದ ಹಿಂದೆ 75 ವರ್ಷದ ಪಕ್ಷದ ಹಿರಿಯ ಸಿದ್ದರಾಮಯ್ಯ ಅವರೊಂದಿಗೆ ರಾಹುಲ್ ಗಾಂಧಿ ಕೈ ಕೈ ಹಿಡಿದು ಓಡುತ್ತಿದ್ದ ವಿಡಿಯೋ ವೈರಲ್ ಆಗಿತ್ತು. ಮತ್ತೊಂದು ಹೃದಯಸ್ಪರ್ಶಿ ಚಿತ್ರದಲ್ಲಿ ಕಾಂಗ್ರೆಸ್ ನಾಯಕಿ ತಾಯಿ ಸೋನಿಯಾ ಗಾಂಧಿಯವರ ಶೂಲೇಸ್‌ಗಳನ್ನು ರಾಹುಲ್ ಕಟ್ಟುತ್ತಿದ್ದರು. ಮಳೆಯಲ್ಲೂ ರಾಹುಲ್ ಗಾಂಧಿ ಭಾಷಣ ಮಾಡುತ್ತಿದ್ದ ಫೋಟೋ ಕೂಡ ಭಾರೀ ವೈರಲ್ ಆಯಿತು.

ಭಾರತದಿಂದ ಆಸ್ಕರ್‌ಗೆ ನಾಮನಿರ್ದೇಶನವಾಗಿದ್ದ 'ಛೆಲ್ಲೋ ಶೋ' ಚಿತ್ರದ ಬಾಲನಟ ಕ್ಯಾನ್ಸರ್‌ಗೆ ಬಲಿ

ಅಹ್ಮದಾಬಾದ್: ಭಾರತದಿಂದ 95ನೇ ಆಸ್ಕರ್ ಅಕಾಡೆಮಿ ಅವಾರ್ಡ್ಸ್ ಗೆ ನಾಮನಿರ್ದೇಶನವಾಗಿದ್ದ ಗುಜರಾತಿ 'ಛೆಲ್ಲೋ ಶೋ' ಚಿತ್ರದ ಬಾಲನಟ ಕ್ಯಾನ್ಸರ್‌ಗೆ ಬಲಿಯಾಗಿದ್ದಾನೆ.

95ನೇ ಆಸ್ಕರ್ ಅಕಾಡೆಮಿ ಅವಾರ್ಡ್ಸ್‌ಗೆ ಪ್ರವೇಶ ಪಡೆದಿರುವ ಗುಜರಾತಿ ಸಿನಿಮಾ 'ಛೆಲ್ಲೋ ಶೋ'ದಲ್ಲಿ ಬಾಲನಟನಾಗಿ ನಟಿಸಿದ್ದ ರಾಹುಲ್ ಕೋಲಿ ಕ್ಯಾನ್ಸರ್‌ನಿಂದ ನಿಧನರಾಗಿದ್ದಾರೆ. ಈ ಕುರಿತು ಗುಜರಾತ್ ಮಾಧ್ಯಮಗಳು ವರದಿ ಮಾಡಿದ್ದು, ಉದಯೋನ್ಮುಖ ಬಾಲನಟನ ಸಾವಿಗೆ ಗುಜರಾತ್ ಸಿನಿರಂಗ ಕಂಬನಿ ಮಿಡಿದಿದೆ.

ಗುಜರಾತ್ ಮಾಧ್ಯಮಗಳ ವರದಿ ಪ್ರಕಾರ, ಮೊದಲಿಗೆ ರಾಹುಲ್ ಕೋಲಿ(15) ಅವರಿಗೆ ಜ್ವರ ಕಾಣಿಸಿಕೊಂಡಿತ್ತು. ಜ್ವರ ಉಲ್ಬಣಗೊಂಡ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಅವರು ಸಾವನ್ನಪ್ಪಿದ್ದಾರೆ ಎನ್ನಲಾಗಿದೆ. ಈ ಕುರಿತು ರಾಹುಲ್ ತಂದೆ ಮಾಧ್ಯಮದ ಜೊತೆ ಮಾತನಾಡಿ, ಅ.2 ರಂದು (ಭಾನುವಾರ) ರಾಹುಲ್ ತಿಂಡಿ ಮುಗಿಸಿದ ಮೇಲೆ, ಅವರಿಗೆ ವಿಪರೀತ ಜ್ವರ ಕಾಣಿಸಿಕೊಂಡಿದೆ. ಮೂರು ಬಾರಿ ರಕ್ತದ ವಾಂತಿ ಮಾಡಿದ್ದಾನೆ. ಆ ಬಳಿಕ ಆಸ್ಪತ್ರೆಗೆ ಸಾಗಿಸಲಾಯಿತು. ಆದರೆ ಆತ ನಮ್ಮನ್ನು ಅಗಲಿದ್ದಾನೆ. ನಮ್ಮ ಕುಟುಂಬಕ್ಕೆ ದಿಕ್ಕೇ ತೋಚದಂತಾಗಿದೆ ಎಂದು ಅಳಲು ತೋಡಿಕೊಂಡಿದ್ದಾರೆ.

ಅಂತೆಯೇ ರಾಹುಲ್ ನಟಿಸಿರುವ 'ಛೆಲ್ಲೋ ಶೋ' ಅ.14 ರಂದು ರಿಲೀಸ್ ಆಗಲಿದೆ. ಅದನ್ನು ನಾವೆಲ್ಲಾ ಒಟ್ಟಾಗಿ ನೋಡಿದ ಬಳಿಕ, ಆತನ ಅಂತಿಮ ಕ್ರಿಯಾವಿಧಾನವನ್ನು ಮಾಡುತ್ತೇವೆಂದು ರಾಹುಲ್ ತಂದೆ ಹೇಳಿದ್ದಾರೆ.

ಉತ್ತರಾಖಂಡ್‌ನಲ್ಲಿ ಕೊಡಗಿನ ಯೋಧ ಹೃದಯಾಘಾತದಿಂದ ನಿಧನ

ಇನ್ನೆರಡು ದಿನಗಳಲ್ಲಿ ಹುಟ್ಟೂರಿಗೆ ಪಾರ್ಥಿವ ಶರೀರ

ಮಡಿಕೇರಿ, ಅ.11– ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಕೊಡಗಿನ 'ಯೋಧ'ರೊಬ್ಬರು ಹೃದಯಾಘಾತದಿಂದ ಮೃತಪಟ್ಟಿರುವ ಘಟನೆ ಉತ್ತಾಖಂಡ್‌ನ ಜೋಷಿ ಮತ್‌ನಲ್ಲಿ ಸಂಭವಿಸಿದೆ.



ಸೋಮವಾರಪೇಟೆ ತಾಲೂಕಿನ ತಾಕೇರಿ ಮೂಲದ ನಾಪಂಡ ಸಿ.ಮಹೇಶ್ (46) ಮೃತ ದುರ್ದೈವಿ. ಮೃತ ಯೋಧ ಪತ್ನಿ, 10 ವರ್ಷದ ಓರ್ವ ಪುತ್ರಿ ಹಾಗೂ 6 ವರ್ಷದ ಓರ್ವ ಪುತ್ರನನ್ನು ಅಗಲಿದ್ದಾರೆ.

ಕಳೆದ 22 ವರ್ಷಗಳಿಂದ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಮಹೇಶ್, ನಾಲ್ಕು ವರ್ಷಗಳಲ್ಲಿ ನಿವೃತ್ತಿ ಹೊಂದಿ ಗ್ರಾಮಕ್ಕೆ ಬರುವ ನಿರೀಕ್ಷೆಯಲ್ಲಿದ್ದರು. ಜೂನಿಯರ್ ಕಮೀಷನ್ ಆಫೀಸರ್ (ಜೆಸಿಒ) ಆಗಿ ಉತ್ತರಾಖಂಡ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದ ಯೋಧ ಕಳೆದ ತಿಂಗಳಷ್ಟೇ ರಜೆಯಲ್ಲಿ ತಾಕೇರಿಗೆ ಬಂದು ಮರಳಿದ್ದರು.

ಬೆಂಗಳೂರು–ಹೈದರಾಬಾದ್, ಜಮ್ಮು ಮತ್ತು ಕಾಶ್ಮೀರ, ಉತ್ತರಾ ಖಂಡ್ ಸೇರಿದಂತೆ ವಿವಿಧ ಭಾಗದಲ್ಲಿ ಸೇವೆ ಸಲ್ಲಿಸಿದ್ದಾರೆ. ಪಾರ್ಥಿವ ಶರೀರ ಇನ್ನೆರಡು ದಿನಗಳಲ್ಲಿ ಹುಟ್ಟೂರಿಗೆ ಬರಲಿದೆ. ಉತ್ತರಾಖಂಡ್‌ನಿಂದ ಏರ್‌ಲಿಫ್ಟ್ ಮೂಲಕ ಪಾರ್ಥಿವ ಶರೀರ ದೆಹಲಿ ತಲುಪಲಿದೆ. ನಂತರ ಅಲ್ಲಿನ ಸೇನಾ ಕ್ಯಾಂಪ್‌ನಲ್ಲಿ ಸಕಲ ಸೇನಾ ಗೌರವಗಳೊಂದಿಗೆ ರಸ್ತೆಮಾರ್ಗದ ಮೂಲಕ ಹುಟ್ಟೂರಿಗೆ ಬೀಳ್ಕೊಡಲಾಗುವುದು ಎಂದು ತಿಳಿದು ಬಂದಿದೆ.

ಕೊಕ್ಕಲೇರ ಜೋಯಪ್ಪ ನಿಧನ



ನಾಪೋಕ್ಲು, ಅ.11– ಮೂಲತಃ ಕಣ್ಣಂಗೇರಿ ನಿವಾಸಿ ಪ್ರಸ್ತುತ ಗುಡ್ಡೆಹೊಸೂರಿನಲ್ಲಿ ವಾಸವಾಗಿದ್ದ ಲೆಫ್ಟಿನೆಂಟ್ ಕರ್ನಲ್ ಕೊಕ್ಕಲೇರ ಜೋಯಪ್ಪ (78) ಮೈಸೂರಿನಲ್ಲಿ ಅ.5ರಂದು ನಿಧನ ಹೊಂದಿದ್ದಾರೆ. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗದವರನ್ನು ಅಗಲಿದ್ದಾರೆ. ಬುಧವಾರ (ಅ.12) ಮೃತರ ಅಂತ್ಯಕ್ರಿಯೆ (ಗುಡ್ಡೆಹೊಸೂರು) ಕುಶಾಲನಗರದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಮಡಿಕೇರಿಯಲ್ಲಿ ಹಾಡಹಗಲೇ ಕಳ್ಳತನ

ಟವಲ್‌ನಿಂದ ಮಹಿಳೆ ಮುಖ ಮುಚ್ಚಿ ಚಿನ್ನದ ಸರ, ಓಲೆ ಕಿತ್ತುಕೊಂಡು ಪರಾರಿ

ಮಡಿಕೇರಿ, ಅ.11– ಹಾಡಹಗಲೇ ಮನೆಗೆ ನುಗ್ಗಿದ ಕಳ್ಳನೊಬ್ಬ ಗೃಹಣಿಯ ಕುತ್ತಿಗೆಯಲ್ಲಿದ್ದ ಚಿನ್ನದ ಸರ ಮತ್ತು ಒಂದು ಕಿವಿಯೋಲೆಯನ್ನು ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮಡಿಕೇರಿ ಹೃದಯ ಭಾಗದಲ್ಲಿ ನಡೆದಿದೆ.

ನಗರದ ಚೆಸ್ಕಾಂ ಕಚೇರಿಗೆ ಹೋಗುವ ಕೋಟೆ ಹಿಂಭಾಗದ ರಸ್ತೆಯ ಕೊನೆಯಲ್ಲಿರುವ ಒಂಟಿ ಮನೆಯಲ್ಲಿ ಗೃಹಣಿ ಮಾತ್ರವೇ ಇದ್ದರು. ಮಂಗಳವಾರ ಮಧ್ಯಾಹ್ನ 1.30ರಿಂದ ಧಾರಾಕಾರ ಮಳೆ ಸುರಿಯುತ್ತಿದ್ದ ಸಂದರ್ಭವನ್ನು ಬಳಸಿಕೊಂಡ ಕಳ್ಳ ಮನೆಯ ಬಾಗಿಲು ತಳ್ಳಿ ಒಳನುಗ್ಗಿ ಟವಲ್‌ನಲ್ಲಿ ಮಹಿಳೆಯ ಮುಖಮುಚ್ಚಿ ಕುತ್ತಿಗೆಯಲ್ಲಿದ್ದ 60 ಗ್ರಾಂ ಚಿನ್ನದ ಚೈನ್ ಮತ್ತು ಒಂದು ಕಿವಿ ಓಲೆಯನ್ನು ಕಿತ್ತುಕೊಂಡು ಪರಾರಿಯಾಗಿದ್ದಾನೆ. ನಂತರ ಚೇತರಿಸಿಕೊಂಡ ಮನೆಯೊಡತಿ ತನ್ನ ಪತಿಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ಬಳಿಕ ಮಡಿಕೇರಿ ನಗರ ಠಾಣೆಯಲ್ಲಿ ದಿನೇಶ್ ರಾವ್ ಎಂಬುವರು ದೂರು ನೀಡಿದ್ದಾರೆ.

ಘಟನಾ ಸ್ಥಳಕ್ಕೆ ನಗರ ವೃತ್ತ ನಿರೀಕ್ಷಕ ಶಿವಶಂಕರ್, ಠಾಣಾಧಿಕಾರಿ ಶ್ರೀನಿವಾಸ್, ಕ್ರೈಂ ವಿಭಾಗದ ಠಾಣಾಧಿಕಾರಿ ರಾಧ, ಕ್ರೈಂ ಸಿಬ್ಬಂದಿಗಳಾದ ದಿನೇಶ್, ನಾಗರಾಜ್ ವಾಹನ ಚಾಲಕ ದೇವರಾಜು ಅವರುಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಒಟ್ಟು 3 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳುವಾಗಿದೆ ಎಂದು ದೂರುದಾರ ದಿನೇಶ್ ರಾವ್ ಅವರು ಮಾಹಿತಿ ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ನಗರ ಪೊಲೀಸರು ಕಳ್ಳನ ಪತ್ತೆಗೆ ಬಲೆ ಬೀಸಿದ್ದಾರೆ. ಹಾಡಹಗಲೇ ಘಟಿಸಿದ ಈ ಪ್ರಕರಣದಿಂದ ಮಡಿಕೇರಿ ನಗರ ಬೆಚ್ಚಿ ಬಿದ್ದಿದೆ.

ಅ.17, ತಲಕಾವೇರಿಯಲ್ಲಿ ತೀರ್ಥೋದ್ಭವ

ಎಲ್ಲರ ಸಹಕಾರ ಕೋರಿದ ಹೆಚ್ಚುವರಿ ಜಿಲ್ಲಾಧಿಕಾರಿ



ಮಡಿಕೇರಿ, ಅ.11– ನಾಡಿನ ಜೀವನದಿ 'ಕಾವೇರಿ ನದಿ' ಉಗಮ ಸ್ಥಾನ ತಲಕಾವೇರಿಯಲ್ಲಿ ಇದೇ ಅ.17 ರಂದು ರಾತ್ರಿ 7 ಗಂಟೆ 21 ನಿಮಿಷಕ್ಕೆ ಪವಿತ್ರ ತೀರ್ಥೋದ್ಭವ ಜರುಗಲಿದ್ದು, ಪವಿತ್ರ ತೀರ್ಥೋದ್ಭವ ಯಶಸ್ಸಿಗೆ ಪ್ರತಿಯೊಬ್ಬರೂ ಸಹಕರಿಸುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ನಂಜುಂಡೇಗೌಡ ಕೋರಿದ್ದಾರೆ.

ಭಾಗಮಂಡಲದ ಮುಡಿಶೆಡ್ ಕಟ್ಟಡದಲ್ಲಿ ಮಂಗಳವಾರ ನಡೆದ ಪವಿತ್ರ 'ಶ್ರೀ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವ' ಜಾತ್ರಾ ಮಹೋತ್ಸವ ಸಂಬಂಧ ವಿವಿಧ ಇಲಾಖೆಗಳು ಕೈಗೊಂಡಿರುವ ಅಗತ್ಯ ಸಿದ್ಧತೆಗಳು ಹಾಗೂ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳ ಸಲಹೆ, ಸೂಚನೆ, ಅಭಿಪ್ರಾಯ ಪಡೆದು ಅವರು ಮಾತನಾಡಿದರು.

ಜಿಲ್ಲೆ ಹಾಗೂ ಹೊರ ರಾಜ್ಯದಿಂದ ಆಗಮಿಸುವ ಭಕ್ತಾದಿಗಳಿಗೆ ಅಗತ್ಯ ಭದ್ರತೆ ಹಾಗೂ ಸೂಕ್ತ ವ್ಯವಸ್ಥೆ ಕಲ್ಪಿಸಲು ಕ್ರಮ ವಹಿಸಲಾಗುವುದು. ಭಕ್ತಾದಿಗಳ ಭಾವನೆಗಳನ್ನು ಅರ್ಥ ಮಾಡಿಕೊಂಡು ತೀರ್ಥೋದ್ಭವ ಸಂದರ್ಭದಲ್ಲಿ ಬೇಕಾದ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗುವುದು. ಗುಂಡಿ ಬಿದ್ದಿರುವ ರಸ್ತೆಗಳನ್ನು ಸರಿಪಡಿಸಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಲಾಗುವುದು. ಪೂಜಾ ಪದ್ಧತಿಯಲ್ಲಿ ಯಾವುದೇ ಗೊಂದಲವಿಲ್ಲದೆ ಈ ಹಿಂದೆ ಆಚರಿಸಿಕೊಂಡು ಬಂದ ರೀತಿಯಲ್ಲಿ ಈ ಬಾರಿಯೂ ನಡೆಸಿಕೊಂಡು ಹೋಗಲಾಗುತ್ತದೆ ಎಂದು ಅವರು ಹೇಳಿದರು.

ಉಪ ಪೊಲೀಸ್ ವರಿಷ್ಠಾಧಿಕಾರಿ ಗಜೇಂದ್ರ ಪ್ರಸಾದ್ ಮಾತನಾಡಿ, ಸಂಚಾರ ವ್ಯವಸ್ಥೆಗೆ ಯಾವುದೇ ರೀತಿ ಅಡಚಣೆಯಾಗದ ರೀತಿಯಲ್ಲಿ ಸೂಕ್ತಕ್ರಮ ವಹಿಸ ಲಾಗುವುದು. ವಾಹನ ನಿಲುಗಡೆ ಹಾಗೂ ಕುಂಡಿಕೆಯ ಸುತ್ತಮುತ್ತಲು ಮುಂಜಾಗ್ರತೆ ಕ್ರಮ ವಹಿಸಲಾಗುವುದು ಎಂದರು.

ಕಳೆದ ಎರಡು ವರ್ಷ ಭಕ್ತಾದಿಗಳ ಸಂಖ್ಯೆ ಕೊಂಚ ಕಡಿಮೆ ಇತ್ತು. ಆದರೆ ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬರುವ ನಿರೀಕ್ಷೆ ಇರುವುದರಿಂದ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯರಾದ ವೀಣಾ ಅಚ್ಚಯ್ಯ ಅವರು ಮಾತನಾಡಿ, ಸ್ಥಳೀಯ ಜನರು ತಮ್ಮ ಸಮಸ್ಯೆಗಳನ್ನು ಅಧಿಕಾರಿಗಳ ಮುಂದೆ ಹೇಳಿಕೊಂಡಿದ್ದಾರೆ. ಆ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಅವರ ಸಮಸ್ಯೆಗಳಿಗೆ ಸ್ಪಂದಿಸುವಂತಾಗಬೇಕು. ಪುರಾತನ ಕಾಲದಿಂದ ನಡೆದುಕೊಂಡು ಬರುತ್ತಿರುವ ಆಚಾರ–ವಿಚಾರ, ಸಂಪ್ರದಾಯಗಳನ್ನು ಮುಂದೆಯೂ ನಡೆಸಿಕೊಂಡು ಹೋಗಬೇಕು ಎಂದು ಅವರು ಹೇಳಿದರು.

ಎಂ.ಬಿ.ದೇವಯ್ಯ, ಮನು ಮುತ್ತಪ್ಪ, ಭಾಗಮಂಡಲ ಗ್ರಾಪಂ ಉಪಾಧ್ಯಕ್ಷ ಸತೀಶ್ ಕುಮಾರ್ ಮಾತನಾಡಿದರು. ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕಿ ಗೀತಾ ಮಾತನಾಡಿ, ಸಾರಿಗೆ ವ್ಯವಸ್ಥೆಯಲ್ಲಿ ಯಾವುದೇ ರೀತಿಯ ತೊಂದರೆ ಆಗದ ರೀತಿಯಲ್ಲಿ ಕ್ರಮ ವಹಿಸಲಾಗುವುದು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ. ಅಯ್ಯಪ್ಪ ಭಾಗಮಂಡಲ ಗ್ರಾಪಂ ಅಧ್ಯಕ್ಷರಾದ ಪೆಮಿತ, ತಹಶೀಲ್ದಾರ್ ಮಹೇಶ್, ತಾಪಂ ಇಓ ಶೇಖರ್, ದೇವಾಲಯದ ಇಓ ಕೃಷ್ಣಪ್ಪ, ತಕ್ಕ ಮುಖ್ಯಸ್ಥರು, ಅರ್ಚಕರು, ವಿವಿಧ ಇಲಾಖೆ ಅಧಿಕಾರಿಗಳು ಇತರರು ಇದ್ದರು.

ಕೊಡವ ಸಮಾಜಗಳ ಕಡೆಗಣನೆ ಆರೋಪ

ಮಡಿಕೇರಿ, ಅ.11– ತಲಕಾವೇರಿ ತೀರ್ಥೋದ್ಭವಕ್ಕೆ ಸಂಬಂಧಿಸಿದಂತೆ ಮಂಗಳವಾರ ಭಾಗಮಂಡಲದಲ್ಲಿ ಪೂರ್ವಭಾವಿ ಸಭೆ ನಡೆಸಲಾಗಿದ್ದು, ಯಾವುದೇ ಕೊಡವ ಸಮಾಜಗಳಿಗೆ ಮಾಹಿತಿಯನ್ನೇ ನೀಡದೇ ಕತ್ತಲೆಯಲ್ಲಿಡಲಾಗಿದೆ ಎಂದು ಅಖಿಲ ಕೊಡವ ಸಮಾಜದ ಯೂತ್ ವಿಂಗ್ ಅಧ್ಯಕ್ಷ ಚಿಮ್ಮಚ್ಚಿರ ಪ್ರವೀಣ್ ಉತ್ತಪ್ಪ ಆರೋಪಿಸಿದ್ದಾರೆ.

ಅಪರ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಭಾಗಮಂಡಲ ಗ್ರಾಮ ಪಂಚಾಯಿತಿ ಮತ್ತು ಪ್ರಮುಖರು ತಲಕಾವೇರಿ ಜಾತ್ರೆ ಸಭೆ ಆಯೋಜಿಸಿದ್ದರು. ಆದರೆ ಅಖಿಲ ಕೊಡವ ಸಮಾಜ, ಕೊಡವ ಸಮಾಜ ಫೆಡರೇಷನ್ ಸೇರಿದಂತೆ ಇನ್ನಿತರ ಬಹುತೇಕ ಕೊಡವ ಸಮಾಜಗಳಿಗೆ ಸಭೆಯ ಮಾಹಿತಿ ನೀಡಿಲ್ಲ. ಕೆಲವೇ ಕೊಡವ ಸಂಘಟನೆಗಳಿಗೆ ಮಾತ್ರವೇ ಮಾಹಿತಿ ನೀಡಿದ್ದಾರೆ. ಮಾತ್ರವಲ್ಲದೇ ಸಭೆಗೆ ಜಿಲ್ಲಾಧಿಕಾರಿಗಳು, ಶಾಸಕರು, ಸಂಸದರು ಕೂಡ ಹಾಜರಾಗಿಲ್ಲ ಎಂದು ವಿಷಾಧ ವ್ಯಕ್ತಪಡಿಸಿದ್ದಾರೆ.

ಜಿಲ್ಲೆಯಲ್ಲಿ ಧಾರಾಕಾರ ಮಳೆ

ಜಲಾವೃತಗೊಂಡ ಮಡಿಕೇರಿ ರಸ್ತೆಗಳು

ಮಡಿಕೇರಿ, ಅ.11– ಮಡಿಕೇರಿ ನಗರ ವ್ಯಾಪ್ತಿ ಸಿದ್ದಾಪುರ, ವಿರಾಜಪೇಟೆಯ ಕೆಲವು ಭಾಗ ಸೇರಿದಂತೆ ಜಿಲ್ಲೆಯ ಅನೇಕ ಕಡೆ ಧಾರಾಕಾರ ಮಳೆಯಾಗಿದೆ. ಸುಮಾರು 1 ಗಂಟೆ ಸುರಿದ ನಿರಂತರ ಮಳೆಗೆ ಮಡಿಕೇರಿ ನಗರದ ರಸ್ತೆಗಳು ಕೆರೆಯಂತಾಗಿದ್ದವು. ರಸ್ತೆಗಳು ಜಲಾವೃತಗೊಂಡು ವಾಹನಗಳು ಮತ್ತು ಪಾದಚಾರಿಗಳ ಸಂಚಾರಕ್ಕೆ ಅಡಚಣೆ ಉಂಟಾಯಿತು. ತೋಡಿಗೂ, ರಸ್ತೆಗೂ ವ್ಯತ್ಯಾಸವಿಲ್ಲದಂತೆ ನೀರು ಹರಿಯುತ್ತಿದ್ದುದು ಕಂಡು ಬಂತು.

ಸಮರ್ಪಕ ಚರಂಡಿ ವ್ಯವಸ್ಥೆ ಕಲ್ಪಿಸುವಲ್ಲಿ ನಗರಸಭೆ ವಿಫಲವಾಗಿರುವುದೇ ರಸ್ತೆ ಕೆರೆಯಂತಾಗಲು ಕಾರಣ ಎಂದು ಕೊಡಗು ರಕ್ಷಣಾ ವೇದಿಕೆ ಆರೋಪಿಸಿದೆ. ತೋಡು ಮತ್ತು ಚರಂಡಿಗಳ ನಿರ್ವಹಣೆ ಮಾಡದೆ ಇರುವುದರಿಂದ ಸಾರ್ವಜನಿಕರು ಕಷ್ಟ ಅನುಭವಿಸುವಂತಾಗಿದೆ ಎಂದು ಕೊರವೇ ಅಧ್ಯಕ್ಷ ಅಚ್ಚಾಂಡಿರ ಪವನ್ ಪೆಮ್ಮಯ್ಯ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕಾವೇರಿ ತೀರ್ಥೋದ್ಭವ: ಅ.14ರಂದು ಶ್ರಮದಾನ

ಮಡಿಕೇರಿ, ಅ.11– ಕಾವೇರಿ ತುಲಾ ಸಂಕ್ರಮಣದ ಪ್ರಯುಕ್ತ ಶ್ರೀಕ್ಷೇತ್ರದಲ್ಲಿ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಗ್ರೀನ್ ಸಿಟಿ ಫೋರಂ ವತಿಯಿಂದ ಅ.14ರಂದು ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಪ್ರತಿ ವರ್ಷದಂತೆ ಈ ಬಾರಿ ಕೂಡಾ ತಲಕಾವೇರಿಯಿಂದ ಭಾಗಮಂಡಲದವರೆಗೆ ಸ್ವಚ್ಛ ಮಾಡುವುದು ಹಾಗೂ ಪ್ಲಾಸ್ಟಿಕ್ ಮುಕ್ತ ತುಲಾ ಸಂಕ್ರಮಣವನ್ನು ನಡೆಸುವ ಬಗ್ಗೆ ಜನರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಶ್ರಮದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಫೋರಂ ಅಧ್ಯಕ್ಷ ಚೈಯ್ಯಂಡ ಸತ್ಯ ಗಣಪತಿ ತಿಳಿಸಿದ್ದಾರೆ. ಅಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ನಡೆಯುವ ಕಾರ್ಯದಲ್ಲಿ ಮಡಿಕೇರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು, ಕ್ಲೀನ್ ಕೂರ್ಗ್ ಇನಿಶಿಯೇಟಿವ್ ತಂಡದ ಸದಸ್ಯರು ಹಾಗೂ ಇತರ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ನಾಳೆ ಅರೆಭಾಷೆ ಪುಸ್ತಕ ಬಿಡುಗಡೆ

ಮಡಿಕೇರಿ, ಅ.11– ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವತಿಯಿಂದ ಅ.13 ರಂದು ಸಂಜೆ 4 ಗಂಟೆಗೆ ನಗರದ ಭಾರತೀಯ ವಿದ್ಯಾಭವನದಲ್ಲಿ ಅರೆಭಾಷೆ ವಿಶ್ವಕೋಶ ಮತ್ತು ಗ್ರಾಂಥಿಕ ಕನ್ನಡ ಮತ್ತು ಅರೆಭಾಷೆ ತೌಲನಿಕ ವ್ಯಾಕರಣ ಅರೆಭಾಷೆ ಕೈಪಿಡಿ, ನಾಟಕ, ಕತೆ, ಲಲಿತ ಪ್ರಬಂಧ, ಅರೆಭಾಷೆ ಸಾಧಕರ ಮಾಲೆ ಪುಸ್ತಕಗಳ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಲಕ್ಷ್ಮೀನಾರಾಯಣ ಕಜೆಗದ್ದೆ, ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರಾದ ಡಾ.ಹಾ.ತಿ.ಕೃಷ್ಣೇಗೌಡ, ಮೈಸೂರು ಶೇಷಾದ್ರಿಪುರಂ ಪದವಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ.ಲಾವಣ್ಯ ಸಿ.ಪಿ. ಕೊಟ್ಟಕೇರಿಯನ ಇತರರು ಪಾಲ್ಗೊಳ್ಳಲಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ, ಅ.11– ಮಡಿಕೇರಿ 66/11 ಕೆವಿ ವಿದ್ಯುತ್ ಉಪ–ಕೇಂದ್ರದಿಂದ ಹೊರಹೋಗುವ ಭಾಗಮಂಡಲ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಕೈಗೊಳ್ಳಬೇಕಿರುವುದರಿಂದ ಅ.12 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಅಪ್ಪಂಗಳ, ತಾಳತ್ತ್‌ಮನೆ, ಕಾರುಗುಂದ, ಚೇರಂಬಾಣೆ, ಭಾಗಮಂಡಲ ಹಾಗೂ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಸಾವಿನಲ್ಲೂ ಸಾರ್ಥಕತೆ ಮೆರೆದ ಶಿಕ್ಷಕಿ

ಅಂಗಾಂಗ ದಾನದ ಮೂಲಕ 8 ಜನರ ಬಾಳಿಗೆ ಬೆಳಕು

ಮಡಿಕೇರಿ, ಅ.11– ನಗರದಲ್ಲಿ ಕಿಂಡರ್ ಗಾರ್ಡನ್ ಶಾಲೆ ನಡೆಸುತ್ತಿದ್ದ ಶಿಕ್ಷಕಿ ಪಂದ್ಯಂಡ ಆಶಾ(53) ಅವರು ಸಾವಿನಲ್ಲೂ ಅಂಗಾಂಗ ದಾನ ಮಾಡುವ ಮೂಲಕ 8 ಜನರಿಗೆ ಜೀವ ದಾನ ಮಾಡಿ ಸಾರ್ಥಕತೆ ಮೆರೆದಿದ್ದಾರೆ.



ಮಡಿಕೇರಿ ನಗರದ ಸುದರ್ಶನ ಬಡಾವಣೆ ನಿವಾಸಿಯಾಗಿರುವ ಪಂದ್ಯಂಡ ಗಪ್ಪು ಗಣಪತಿ ಅವರ ಪತ್ನಿ ಆಶಾ(53) ಮಿದುಳು ನಿಷ್ಕ್ರಿಯಗೊಂಡು ನಿಧನ ಹೊಂದಿದ್ದು, ಇವರ ಅಂಗಾಂಗಗಳನ್ನು ಬೆಂಗಳೂರಿನ ನಾರಾಯಣ ಹೃದಯಾಲಯ ಆಸ್ಪತ್ರೆಗೆ ದಾನ ಮಾಡಲಾಗಿದೆ.

ನಗರದಲ್ಲಿ ಕಳೆದ 18 ವರ್ಷಗಳಿಂದ ಬೇಬಿ ಸಿಟ್ಟಿಂಗ್ ನಡೆಸುತ್ತಿದ್ದ ಆಶಾ ಅವರು ಸದಾಕಾಲ ಮಕ್ಕಳೊಂದಿಗೆ ಕಾಲ ಕಳೆಯುತ್ತಿದ್ದರು. ಶನಿವಾರ(ಅ.8) ಪಂದ್ಯಂಡ ಆಶಾ ಅವರು ಬೆಂಗಳೂರಿನಲ್ಲಿರುವ ತಮ್ಮ ಪುತ್ರಿಯ ಮನೆಗೆ ತೆರಳಿದ್ದರು. ಅ.9ರಂದು ಅವರ ಆರೋಗ್ಯ ಹದಗೆಟ್ಟ ಹಿನ್ನೆಲೆಯಲ್ಲಿ ತಕ್ಷಣವೇ ಅವರನ್ನು ನಾರಾಯಣ ಹೃದಯಾಲಯಕ್ಕೆ ದಾಖಲಿಸಲಾಗಿತ್ತು. ವೈದ್ಯರು ಪರಿಶೀಲನೆ ನಡೆಸಿದ ಸಂದರ್ಭ ಮಿದುಳಿನಲ್ಲಿ ರಕ್ತಸ್ರಾವ ತೊಂದರೆ ಕಂಡು ಬಂದಿತ್ತು. ತದನಂತರದ ಚಿಕಿತ್ಸೆ ಫಲಕಾರಿಯಾಗದೆ ಮಿದುಳು ನಿಷ್ಕ್ರಿಯವಾಗಿ ಮೃತಪಟ್ಟಿದ್ದರು. ಬಳಿಕ ಕುಟುಂಬಸ್ಥರ ನಿರ್ಧಾರದಂತೆ ಆಶಾ ಅವರ ಕಣ್ಣು, ಕಿಡ್ನಿ, ಹೃದಯ, ಲಿವರ್ ಸೇರಿದಂತೆ ಬಹು ಅಂಗಾಂಗಗಳನ್ನು ಆಸ್ಪತ್ರೆಗೆ ದಾನ ಮಾಡಲಾಯಿತು.

ಆ ಮೂಲಕ ಓರ್ವ ಶಿಕ್ಷಕಿಯಾಗಿ, ತಮ್ಮ ಸಾವಿನಲ್ಲೂ ಸಮಾಜಕ್ಕೆ ಮಾನವೀಯತೆ ಹಾಗೂ 8 ಜೀವಗಳಿಗೆ ಮರುಜನ್ಮ ಕಲ್ಪಿಸಿದ ಸಂದೇಶ ಸಾರುವ ಮೂಲಕ ಪಂದ್ಯಂಡ ಆಶಾ ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾರೆ.

ಅಂತ್ಯಕ್ರಿಯೆ: ಮಂಗಳವಾರ ಮಡಿಕೇರಿ ಕೊಡವ ಸಮಾಜದ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನಡೆಸಲಾಯಿತು. ಮೃತರು ಪತಿ, ಓರ್ವ ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಪಂದ್ಯಂಡ ಆಶಾ ಅವರ ನಿಧನಕ್ಕೆ ಸುದರ್ಶನ ಬಡಾವಣೆಯ ನಿವಾಸಿಗಳು ತೀವ್ರ ಸಂತಾಪ ಸೂಚಿಸಿದ್ದಾರೆ.

ಎಂಸಿಡಿಸಿಸಿಯಿಂದ ಜಿಲ್ಲೆಗೆ 300 ಕೋಟಿ ಸಾಲ

ಹರದನಹಳ್ಳಿಯಲ್ಲಿ ಪಿಎಸಿಸಿ ಮಳಿಗೆ, ಗೋದಾಮು ನಿರ್ಮಾಣಕ್ಕೆ ಜಿ.ಡಿ.ಹರೀಶ್‌ಗೌಡ ಶಂಕುಸ್ಥಾಪನೆ



ಚಾಮರಾಜನಗರ ತಾಲೂಕಿನ ಹರದನಹಳ್ಳಿ ಗ್ರಾಮದಲ್ಲಿ ನೂತನ ಪಿಎಸಿಸಿ ಮಳಿಗೆ, ಗೋದಾಮು ಕಟ್ಟಡ ನಿರ್ಮಾಣ ಕಾಮಗಾರಿಗೆ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್ ಶಂಕುಸ್ಥಾಪನೆ ನೆರವೇರಿಸಿದರು.

ಚಾಮರಾಜನಗರ, ಅ.11– ಜಿಲ್ಲೆಯಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಬೆಳವಣಿಗೆ ಹಿನ್ನೆಲೆಯಲ್ಲಿ ಎಂಸಿಡಿಸಿಸಿ ಬ್ಯಾಂಕ್‌ನಿಂದ ಜಿಲ್ಲೆಗೆ 300 ಕೋಟಿ ರೂ. ಸಾಲ ಮಂಜೂರು ಮಾಡಲಾಗಿದೆ ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಹೇಳಿದರು.

ತಾಲೂಕಿನ ಹರದನಹಳ್ಳಿಯಲ್ಲಿ ಮಂಗಳವಾರ ಎಂಸಿಡಿಸಿಸಿ ಬ್ಯಾಂಕ್, ನಬಾರ್ಡ್ ವಿಶೇಷ ಪುನರ್ವರ್ಧನ ಯೋಜನೆಯಡಿ ಪಿಎಸಿಎಸ್ ಮಲ್ಟಿಕೇರ್ ಸೆಂಟರ್ ಮಳಿಗೆ ಹಾಗೂ ಗೋದಾಮು ಕಟ್ಟಡ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿದ ಬಳಿಕ ವೇದಿಕೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಉತ್ತಮವಾಗಿ ನಡೆಯುತ್ತಿದ್ದು, ಕೃಷಿ ಸೇರಿದಂತೆ ವಿವಿಧ ಚಟುವಟಿಕೆಗಳಿಗೆ ಜಿಲ್ಲೆಗೆ 300 ಕೋಟಿ ರೂ. ಸಾಲ ಸೌಲಭ್ಯ ಒದಗಿಸಲಾಗಿದೆ. ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘ 45 ಲಕ್ಷ ರೂ. ಪಿಗ್ಮಿ ವಸೂಲಾತಿಯಲ್ಲೂ ಪ್ರಗತಿ ಸಾಧಿಸಿರುವುದು ಹೆಮ್ಮೆಯ ಸಂಗತಿ ಎಂದರು.

ಜಿಲ್ಲೆಯಲ್ಲಿ 275 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿದ್ದು, ಈವರೆಗೆ 150ಕ್ಕೂ ಹೆಚ್ಚು ಸಂಘಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ನೆರವು ನೀಡಲಾಗಿದೆ. ಗ್ರಾಮದ ಪಿಎಸಿಸಿ ಮಳಿಗೆ ಹಾಗೂ ಗೋದಾಮು ನಿರ್ಮಾಣಕ್ಕೆ ನಬಾರ್ಡ್‌ನಿಂದ 23 ಲಕ್ಷ, ಎಂಸಿಡಿಸಿಸಿಯಿಂದ 10 ಲಕ್ಷ, ಹೆಚ್ಚುವರಿಯಾಗಿ 15 ಲಕ್ಷ ಮಂಜೂರು ಮಾಡಲಾಗುವುದು ಎಂದು ಮಾಹಿತಿ ನೀಡಿದರಲ್ಲದೆ, ಸಂಘದಿಂದ ಶೇ.12ರ ಬಡ್ಡಿ ದರದಲ್ಲಿ ದೊರೆಯುವ ಸಾಲ ಸೌಲಭ್ಯವನ್ನು ಮಹಿಳಾ ಸಂಘಗಳು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಂಘದ ಅಧ್ಯಕ್ಷ ಆರ್.ವೆಂಕಟೇಶ್, ಮುಖ್ಯ ಕಾರ್ಯನಿರ್ವಾಹಕ ಸಿದ್ದರಾಜು ಮಾತನಾಡಿದರು. ಚಾಮುಲ್ ನಿರ್ದೇಶಕ, ಎಂಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಎಂ.ಪಿ. ಸುನಿಲ್, ನಿರ್ದೇಶಕ ಬಿ.ಜಿ.ನಾಗೇಂದ್ರ ಕುಮಾರ್, ಆದಿಶೇಷನ್ ಗೌಡ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿ.ಸಿ.ಜನಾರ್ಧನ್, ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕಿ ಜ್ಯೋತಿ, ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕ ಹೆಚ್.ಎನ್.ಸುಂದರ್‌ರಾಜ್, ಸಹಕಾರ ಸಂಘಗಳ ಸಹಾಯಕ ನಿಬಂಧಕ ಕಿರಣ್‌ಕುಮಾರ್, ಅಧೀಕ್ಷಕ ನಾಗೇಶ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಬಸವಣ್ಣ, ತಾಪಂ ಮಾಜಿ ಸದಸ್ಯ ಹೆಚ್.ಎಂ. ಮಹದೇವಶೆಟ್ಟಿ, ನಿವೃತ್ತ ಇಂಜಿನಿಯರ್ ರಂಗರಾಮ ನಾಯ್ಕ, ಗ್ರಾಪಂ ಅಧ್ಯಕ್ಷೆ ಯಶೋದಮ್ಮ, ಉಪಾಧ್ಯಕ್ಷೆ ಚಿಕ್ಕಮ್ಮ, ಪಿಎಸಿಸಿ ಉಪಾಧ್ಯಕ್ಷ ಬಂಗಾರಶೆಟ್ಟಿ, ಕಿರಿಯ ಮೇಲ್ವಿಚಾರಕ ಸಂದೀಪ್, ಜಿಪಂ ಮಾಜಿ ಸದಸ್ಯ ರಮೇಶ್, ಗ್ರಾಪಂ ಮಾಜಿ ಅಧ್ಯಕ್ಷ ಶಮಿತ್‌ಕುಮಾರ್, ಪಿ.ವೃಷಬೇಂದ್ರಪ್ಪ ಸೇರಿದಂತೆ ಆಡಳಿತ ಮಂಡಳಿ, ಸಿಬ್ಬಂದಿ ಗ್ರಾಮಸ್ಥರಿದ್ದರು.

ತಿಂಗಳ ಅಂತ್ಯದೊಳಗೆ ನರೇಗಾ ಪ್ರಗತಿ ಸಾಧಿಸಿ

ಜಿಪಂ ಸಿಇಓ ಕೆ.ಎಂ. ಗಾಯತ್ರಿ ಸೂಚನೆ

ಚಾಮರಾಜನಗರ, ಅ.11–ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನ ಇಲಾಖೆಗಳು ಪ್ರಸಕ್ತ ತಿಂಗಳ ಅಂತ್ಯದೊಳಗೆ ಹೆಚ್ಚಿನ ಪ್ರಗತಿ ಸಾಧಿಸುವಂತೆ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯತ್ರಿ ಸೂಚಿಸಿದರು.



ಯಳಂದೂರು ತಾಲೂಕು ಪಂಚಾಯಿತಿ ಸಭಾಂಗಣದಲ್ಲಿಂದು ತಾಲೂಕು ವ್ಯಾಪ್ತಿಯ ಪ್ರಗತಿ ಪರಿಶೀಲಿಸಿ ಅವರು ಮಾತನಾಡಿದರು. ಎರೆಹುಳು ಗೊಬ್ಬರ ಘಟಕ, ಬದು ನಿರ್ಮಾಣ ಹಾಗೂ ಇನ್ನಿತರೆ ಕಾಮಗಾರಿಗಳನ್ನು ತೆಗೆದುಕೊಂಡು ಮಾನವ ದಿನಗಳ ಸೃಜನೆಯಲ್ಲಿ ಹೆಚ್ಚು ಪ್ರಗತಿಯನ್ನು ಸಾಧಿಸಲು ಕ್ರಮ ವಹಿಸಬೇಕು. ಈಗಾಗಲೇ ಪೂರ್ಣಗೊಂಡಿರುವ ಕಾಮಗಾರಿಗಳನ್ನು ಜಿಯೋಟ್ಯಾಗ್ ಮಾಡಿ ಎಂಐಎಸ್‌ನಲ್ಲಿ ಅಪ್‌ಡೇಟ್ ಮಾಡಬೇಕೆಂದು ನಿರ್ದೇಶಿಸಿದರು.

ಕೆರೆ, ಕಾಲುವೆ, ದನದ ಕೊಟ್ಟಿಗೆ, ಸೋಕ್‌ಪಿಟ್ ಇತರೆ ಕಾಮಗಾರಿಗಳನ್ನು ನಿರ್ವಹಿಸುವ ಮೂಲಕ ಪ್ರಸ್ತುತ ತಿಂಗಳ ಅಂತ್ಯದೊಳಗೆ ನರೇಗಾ ಯೋಜನೆಯಡಿ ಹೆಚ್ಚಿನ ಪ್ರಗತಿ ಸಾಧಿಸಬೇಕು. ಗ್ರಾಮ ಪಂಚಾಯಿತಿಗಳು ವಿಳಂಬ ಮಾಡದೆ ನರೇಗಾ ಕೂಲಿ ಪಾವತಿಸಲು ಕ್ರಮ ವಹಿಸಬೇಕು. ಮಳೆಹಾನಿಗೊಳಗಾದ ರಸ್ತೆಗಳ ದುರಸ್ತಿಗೆ ಕ್ರಿಯಾ ಯೋಜನೆ ತಯಾರಿಸಬೇಕು ಎಂದು ಸಿಇಓ ಪಿಡಿಓಗಳಿಗೆ ತಾಕೀತು ಮಾಡಿದರು.

ಎನ್‌ಆರ್‌ಎಲ್‌ಎಂ ಶೆಡ್ ನಿರ್ಮಾಣ ಸಂಬಂಧ ಸ್ಥಳ ಗುರುತಿಸಿರುವ ಗ್ರಾಮ ಪಂಚಾಯಿತಿಗಳಲ್ಲಿ ವಾರದೊಳಗಾಗಿ ಕಾಮಗಾರಿಗಳನ್ನು ಕಡ್ಡಾಯವಾಗಿ ಪ್ರಾರಂಭಿಸಬೇಕು. ಸ್ಮಶಾನ ಅಭಿವೃದ್ಧಿಗೆ ಸಂಬಂಧಿಸಿದಂತೆ ಜಮೀನು ಲಭ್ಯವಿಲ್ಲದ ಗ್ರಾಮ ಪಂಚಾಯಿತಿಗಳಲ್ಲಿ ಸಂಬಂಧಪಟ್ಟ ತಹಸೀಲ್ದಾರರಿಗೆ ಜಮೀನು ಮಂಜೂರು ಮಾಡುವ ಕುರಿತು ಪಿಡಿಓಗಳು ಪ್ರಸ್ತಾವನೆ ಸಲ್ಲಿಸಬೇಕು. ಈಗಾಗಲೇ ಜಮೀನು ಮಂಜೂರಾಗಿರುವೆಡೆ ಸ್ಮಶಾನ ಅಭಿವೃದ್ಧಿಗೆ ಕ್ರಮ ವಹಿಸಿ ಎಂದು ತಿಳಿಸಿದರು.

ಜಿಪಂ ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ, ಸಹಾಯಕ ಯೋಜನಾಧಿಕಾರಿ ಪ್ರೇಮ್ ಕುಮಾರ್, ಯಳಂದೂರು ತಾಪಂ ಇಓ ಉಮೇಶ್, ಇತರರು ಸಭೆಯಲ್ಲಿದ್ದರು.

ನಿಯಂತ್ರಣ ತಪ್ಪಿ ನಾಲೆಗೆ ಉರುಳಿದ ಜೆಸಿಬಿ

ಚಾಲಕ ಸ್ಥಳದಲ್ಲೇ ಸಾವು



ಕೊಳ್ಳೇಗಾಲ, ಅ.11– ನಿಯಂತ್ರಣ ತಪ್ಪಿ ಜೆಸಿಬಿ ನಾಲೆಗೆ ಉರುಳಿದ ಪರಿಣಾಮ ಸ್ಥಳದಲ್ಲೇ ಚಾಲಕ ಮೃತಪಟ್ಟಿರುವ ಘಟನೆ ತಾಲೂಕಿನ ಉಗನೆ ಗ್ರಾಮದಲ್ಲಿ ಮಂಗಳವಾರ ನಡೆದಿದೆ.

ತಾಲೂಕಿನ ಮಧುವನಹಳ್ಳಿ ಗ್ರಾಮದ ಮಹದೇವಶೆಟ್ಟಿ ಅವರ ಪುತ್ರ ಸುನೀಲ್(23) ಮೃತಪಟ್ಟ ಯುವಕ. ಈತ ಕೆಲಸ ಮುಗಿಸಿ ಜೆಸಿಬಿಯಲ್ಲಿ ಬರುತಿದ್ದ. ಉಗನಿಯ ದೊಡ್ಡಚಾನಲ್ ರಸ್ತೆಯ ಮೇಲೆ ತಿರುವು ತೆಗೆದುಕೊಳ್ಳುವ ವೇಳೆ ನಿಯಂತ್ರಣ ತಪ್ಪಿದ ಜೆಸಿಬಿ ಚಾನಲ್‌ಗೆ ಉರುಳಿದೆ. ವಾಹನ ಸಮೇತ ನಾಲೆಗೆ ಬಿದ್ದ ಚಾಲಕ ಸುನೀಲ್ ಸ್ಥಳದಲ್ಲೇ ಅಸುನೀಗಿದ್ದಾನೆ. ವಿಷಯ ತಿಳಿದು ಪೊಲೀಸರು ಸ್ಥಳಕ್ಕಾಗಮಿಸಿ, ಅಗ್ನಿಶಾಮಕ ಸಿಬ್ಬಂದಿ ನೆರವಿನಿಂದ ಮೃತದೇಹ ಹಾಗೂ ಜೆಸಿಬಿಯನ್ನು ನಾಲೆಯಿಂದ ಹೊರ ತೆಗೆದರು. ಈ ವೇಳೆ ಮೃತನ ಬಂಧುಗಳ ಆಕ್ರಂದನ ಮುಗಿಲು ಮುಟ್ಟಿತ್ತು. ಬಳಿಕ ಮೃತದೇಹವನ್ನು ಮರಣೋತ್ತರ ಕೊಳ್ಳೇಗಾಲ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಯಿತು.

ಕೆರೆಗೆ ಹಾರಿ ಯುವಕ ಆತ್ಮಹತ್ಯೆ

ಗುಂಡ್ಲುಪೇಟೆ, ಅ.11–ಯುವಕ ನೋರ್ವ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸೋಮವಾರ ನಡೆದಿದೆ.



ತಾಲೂಕಿನ ಕಲ್ಲಹಳ್ಳಿ ಗ್ರಾಮದ ಕೆ.ಜಿ.ಸಚಿನ್(21) ಮೃತ ಯುವಕ. ಈತ ಪಟ್ಟಣದ ಖಾಸಗಿ ಫೈನಾನ್ಸ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ. ಭಾನುವಾರ ತನ್ನ ಸ್ನೇಹಿತರನ್ನು ನೋಡಿಕೊಂಡು, ಸಂಬಳ ತರುವುದಾಗಿ ಹೇಳಿ ಮನೆಯಿಂದ ಹೊರಟವನು ಸಂಜೆಯಾದರೂ ಮನೆಗೆ ಹಿಂದುರುಗಿರಲಿಲ್ಲ. ತಾನು ಕಲ್ಲುಕಟ್ಟೆ ಕೆರೆಗೆ ಮುಳುಗಿ ಸಾಯುವುದಾಗಿ ತನ್ನ ಕೆಲವು ಸ್ನೇಹಿತರಿಗೆ ಸಂಜೆ ಮೆಸೇಜ್ ಮಾಡಿ ಮೊಬೈಲ್ ಸ್ವಿಚ್‌ಆಫ್ ಮಾಡಿಕೊಂಡಿದ್ದಾನೆ ಎನ್ನಲಾಗಿದೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ.

ಸೋಮವಾರ ಬೆಳಗ್ಗೆ ಅಗ್ನಿಶಾಮಕ ಸಿಬ್ಬಂದಿ ನೆರವಿನಿಂದ ಮೃತದೇಹವನ್ನು ಕೆರೆಯಿಂದ ಹೊರ ತೆಗೆಯಲಾಯಿತು. ಮೃತನ ಸಹೋದರ ಶಿವಮೂರ್ತಿ ದೂರು ಮೇರೆಗೆ ಪಟ್ಟಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಪುಟ್ಟರಾಜಪ್ಪ ನಿಧನ



ಗುಂಡ್ಲುಪೇಟೆ, ಅ.11–ತಾಲೂಕಿನ ಚಿಕ್ಕತುಪ್ಪೂರು ಗ್ರಾಮದ ಮುಖಂಡ ತಮ್ಮಡಿ ಪುಟ್ಟರಾಜಪ್ಪ(82) ಮಂಗಳವಾರ ನಿಧನರಾದರು. ಮೃತರು ಪತ್ನಿ, ಪುತ್ರ–ಪುತ್ರಿ ಸೇರಿದಂತೆ ಅಪರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಸ್ವಗ್ರಾಮ ಚಿಕ್ಕತುಪ್ಪೂರಿನಲ್ಲಿ ನೆರವೇರಲಿದೆ.

ಸ್ವಾತಂತ್ರ್ಯ ಹೋರಾಟಗಾರ್ತಿ ಲಲಿತಾ ಟ್ಯಾಗೆಟ್ ಇನ್ನಿಲ್ಲ





ಚಾಮರಾಜನಗರ, ಅ.11– ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಚಾಮರಾಜನಗರದ ಗಂಗಮತಸ್ಥರ ಬೀದಿಯ ನಿವಾಸಿ ಲಲಿತಾ ಜಿ.ಟ್ಯಾಗೆಟ್ (91) ಸೋಮವಾರ ರಾತ್ರಿ ನಿಧನರಾದರು.

ಮೃತರು ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧ–ಬಳಗವನ್ನು ಅಗಲಿದ್ದಾರೆ. ನಗರದ ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿದ್ದ ಲಲಿತಾ ಅವರ ನಿಧನದ ಸುದ್ದಿ ತಿಳಿದು ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿದೇವಿ, ತಹಸೀಲ್ದಾರ್ ಬಸವರಾಜು, ನಗರಸಭೆ ಅಧ್ಯಕ್ಷೆ ಆಶಾ ನಟರಾಜು ಮೃತರ ನಿವಾಸಕ್ಕೆ ತೆರಳಿ ಅಂತಿಮ ನಮನ ಸಲ್ಲಿಸಿದರು. ಪೊಲೀಸ್ ಇಲಾಖೆಯ ಪರವಾಗಿ ಪೊಲೀಸ್ ಸಿಬ್ಬಂದಿ ತುಳಿ ಗೌರವ ಸೂಚಿಸಿದರು. ಮೃತರ ಅಂತ್ಯಕ್ರಿಯೆ ನಗರದ ಶಂಕರ ರುದ್ರಭೂಮಿಯಲ್ಲಿ ಮಂಗಳವಾರ ಮಧ್ಯಾಹ್ನ ಸರ್ಕಾರಿ ಗೌರವಗಳೊಂದಿಗೆ ನೆರವೇರಿತು.

ಲಲಿತಾ ಜಿ.ಟ್ಯಾಗೆಟ್ ತಮ್ಮ 14ನೇ ವಯಸ್ಸಿನಲ್ಲೇ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗಿಯಾಗಿದ್ದರು. 1947ರಲ್ಲಿ ಸ್ವಾತಂತ್ರ್ಯ ಘೋಷಣೆಗೂ ಮುನ್ನ ಮೈಸೂರಿನಲ್ಲಿ ನಡೆದ ಚಳವಳಿಯಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದ್ದರು. ಲಲಿತಾ ಟ್ಯಾಗೆಟ್ ಅವರು ಇದೇ ಅಕ್ಟೋಬರ್ 5ರಂದು 91ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿಕೊಂಡಿದ್ದರು.

ಅ.15ರಂದು ನಿಟ್ರೆಯಲ್ಲಿ ಡಿಸಿ ಗ್ರಾಮ ವಾಸ್ತವ್ಯ

ಚಾಮರಾಜನಗರ, ಅ.11– ಸಾರ್ವಜನಿಕರ ಅಹವಾಲು ಆಲಿಸಿ ಸರ್ಕಾರದ ಸವಲತ್ತು, ಯೋಜನೆಗಳ ಅನುಷ್ಠಾನ ಕುರಿತು 'ಜಿಲ್ಲಾಧಿಕಾರಿಗಳ ನಡೆ ಗ್ರಾಮಗಳ ಕಡೆ ಕಾರ್ಯಕ್ರಮ ಸಂಬಂಧ ಅ.15ರಂದು ಗುಂಡ್ಲುಪೇಟೆ ತಾಲೂಕಿನ ಬೇಗೂರು ಹೋಬಳಿಯ ನಿಟ್ರೆ ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ನಡೆಯಲಿದೆ. ಅಂದು ಬೆಳಗ್ಗೆ 10ಗಂಟೆಯಿಂದ ಜಿಲ್ಲಾಧಿಕಾರಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು. ಅಲ್ಲದೆ ಜಿಲ್ಲೆಯ ಆಯಾ ತಾಲೂಕಿನ ತಹಶೀಲ್ದಾರರು ಆಯಾ ತಾಲೂಕಿನ ಗ್ರಾಮವೊಂದರಲ್ಲಿ ವಾಸ್ತವ್ಯ ಹೂಡಲಿದ್ದಾರೆ.

ಬ್ರಹ್ಮಶ್ರೀ ನಾರಾಯಣಗುರುಗಳ 168ನೇ ಜಯಂತಿ ಆಚರಣೆ

ಗುಂಡ್ಲುಪೇಟೆ, ಅ.11–ಪಟ್ಟಣದ ವೀರಮದಕರಿ ರಸ್ತೆಯಲ್ಲಿರುವ ಶ್ರೀ ರೇಣುಕಾಂಬ ಆರ್ಯ ಈಡಿಗರ ಸಂಘದ ಕಚೇರಿಯಲ್ಲಿ ಬ್ರಹ್ಮಶ್ರೀ ನಾರಾಯಣಗುರುಗಳ 168ನೇ ಜಯಂತಿಯನ್ನು ಆಚರಿಸಲಾಯಿತು.



ಆರ್ಯ ಈಡಿಗ ಸಂಘದ ಅಧ್ಯಕ್ಷ ಟಿ.ಎಸ್.ಗೋಪಾಲಸ್ವಾಮಿ ನಾರಾಯಣ ಗುರುಗಳ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ನಾರಾಯಣಗುರುಗಳ ಆದರ್ಶ ಮತ್ತು ಶಿಸ್ತು ಪಾಲನೆಯನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು. ಗುರು ಹಿರಿಯರ ಮಾರ್ಗದರ್ಶನ ಎಲ್ಲರಿಗೂ ದಾರಿದೀಪ ಎಂದರು. ಈ ವೇಳೆ ಸಂಘದ ಪದಾಧಿಕಾರಿಗಳಾದ ಹೆಚ್.ಜಿ. ನಾರಾಯಣಸ್ವಾಮಿ, ಗೋಪಾಲಪುರ ರಾಜೇಗೌಡ, ಬೇಗೂರು ಶಿವಕುಮಾರ್, ಸೋಮಹಳ್ಳಿ ಮಂಜಣ್ಣ, ಬೆಟ್ಟದಮಾದಹಳ್ಳಿ ರಾಜೇಶ್, ಮಾದಾಪಟ್ಟಣ ನಂಜುಂಡೇಗೌಡ, ಸಂದೇಶಬಾರ್ ಕೃಷ್ಣ ಶಿವರಾಜು, ಸಿದ್ದರಾಜು, ಎಲ್‌ಐಸಿ ನರಸಿಂಹೇಗೌಡ್ರು ಮತ್ತಿತರಿದ್ದರು.

ಅಂತಾರಾಷ್ಟ್ರೀಯ ಹೆಣ್ಣುಮಕ್ಕಳ ದಿನ ಆಚರಣೆ



ಚಾಮರಾಜನಗರ, ಅ.11– ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದೊಂದಿಗೆ ನಗರದ ರಾಮಸಮುದ್ರದ ಅಂಗನವಾಡಿ ಕೇಂದ್ರದಲ್ಲಿಂದು ಅಂತಾರಾಷ್ಟ್ರೀಯ ಹೆಣ್ಣು ಮಕ್ಕಳ ದಿನ ಆಚರಿಸಲಾಯಿತು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಎಂ.ಶ್ರೀಧರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಕ್ಕಳು ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯ ವಿರುದ್ಧ ಕಾನೂನು ಕ್ರಮಕ್ಕೆ ಪ್ರಸ್ತುತ ಹಲವು ಇಲಾಖೆಗಳು ಶ್ರಮ ವಹಿಸಿ ಕೆಲಸ ಮಾಡುತ್ತಿವೆ. ಕಾನೂನು ಸೇವೆಗಳ ಪ್ರಾಧಿಕಾರದ ಮೂಲಕವೂ ಸಹ ಕಾನೂನಿನ ನೆರವು ಪಡೆದುಕೊಳ್ಳಬಹುದು ಎಂದರು.

ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಬೇಕು. ಹೆಣ್ಣು ಮಕ್ಕಳ ಪೋಷಣೆ ಹಾಗೂ ಕಾನೂನು ಹಕ್ಕುಗಳ ಬಗ್ಗೆ ಎಲ್ಲರಿಗೂ ತಿಳಿಸಿಕೊಡಬೇಕು. ತಾರತಮ್ಯರಹಿತ ಜೀವನ ಸಾಗಿಸಲು ಸೂಕ್ತ ವಾತಾವರಣ ಕಲ್ಪಿಸಬೇಕು. ಮಹಿಳಾ ಮತ್ತು ಮಕ್ಕಳ ಮೇಲಿನ ದೌರ್ಜನ್ಯ, ಬಾಲ್ಯ ವಿವಾಹದ ವಿರುದ್ಧ ಎಲ್ಲ ಹೋರಾಡಬೇಕು ಎಂದು ಎಂ.ಶ್ರೀಧರ್ ಸಲಹೆ ನೀಡಿದರು. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಅಭಿವೃದ್ಧಿ ನಿರೀಕ್ಷಕರಾದ ಶಿವಲೀಲಾ, ಬೆಟಗೇರಿ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿದ್ದರು.

ಅಂತ್ಯೋದಯ ದೃಷ್ಟಿಯಲ್ಲಿ ಕೆಲಸ ಮಾಡುತ್ತಿದ್ದೇವೆ, ತಂತ್ರಜ್ಞಾನ ಮತ್ತು ಪ್ರತಿಭೆ ಭಾರತದ ಎರಡು ಆಧಾರಸ್ತಂಭಗಳು



ಹೈದರಾಬಾದ್ (ತೆಲಂಗಾಣ): ನಾವು ಅಂತ್ಯೋದಯದ ದೃಷ್ಟಿಯಲ್ಲಿ ಕೆಲಸ ಮಾಡುತ್ತಿದ್ದೇವೆ ಅಂದರೆ ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ಸಬಲೀಕರಣಗೊಳಿಸುವುದು ನಮ್ಮ ಉದ್ದೇಶ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಇಂದು ದೇಶದ 450 ಮಿಲಿಯನ್ ಬ್ಯಾಂಕಿಂಗ್ ಬಗ್ಗೆ ಅರಿವೇ ಇರದ, ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸದ ಜನರನ್ನು, ಅಮೆರಿಕಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಬ್ಯಾಂಕಿಂಗ್ ನಿವ್ವಳ ಅಡಿಯಲ್ಲಿ ತರಲಾಗಿದೆ. 135 ಮಿಲಿಯನ್ ಜನರಿಗೆ, ಫ್ರಾನ್ಸ್‌ನ ಎರಡು ಪಟ್ಟು ಜನಸಂಖ್ಯೆಗೆ ವಿಮೆ ನೀಡಲಾಗಿದೆ ಎಂದು ಪ್ರಧಾನಿ ಮೋದಿ ತಮ್ಮ ಸರ್ಕಾರದ ಸಾಧನೆಯನ್ನು ವಿವರಿಸಿದರು.

110 ಮಿಲಿಯನ್ ಕುಟುಂಬಗಳಿಗೆ ನೈರ್ಮಲ್ಯ ಸೌಲಭ್ಯಗಳನ್ನು ತೆಗೆದುಕೊಳ್ಳಲಾಗಿದೆ ಮತ್ತು 60 ಮಿಲಿಯನ್ ಕುಟುಂಬಗಳಿಗೆ ಟ್ಯಾಪ್ ವಾಟರ್ ಸಂಪರ್ಕಗಳನ್ನು ತೆಗೆದುಕೊಳ್ಳಲಾಗಿದೆ, ಭಾರತದಲ್ಲಿ ಯಾವೊಬ್ಬ ಪ್ರಜೆಯೂ ಹಿಂದೆ ಉಳಿಯದಂತೆ ನೋಡಿಕೊಳ್ಳಲಾಗುತ್ತಿದೆ ಎಂದರು. ಅವರು ಇಂದು ವಿಶ್ವಸಂಸ್ಥೆಯ ವರ್ಲ್ಡ್ ಜಿಯೋಸ್ಪೇಷಿಯಲ್ ಇಂಟರ್‌ನ್ಯಾಷನಲ್ ಕಾಂಗ್ರೆಸ್ ಅನ್ನು ವರ್ಚುವಲ್ ಮೂಲಕ ಉದ್ದೇಶಿಸಿ ಮಾತನಾಡಿದರು. ಅಂತರರಾಷ್ಟ್ರೀಯ ಪ್ರತಿನಿಧಿಗಳನ್ನು ಸ್ವಾಗತಿಸಿದ ಪ್ರಧಾನಮಂತ್ರಿಯವರು, ನಾವು ಒಟ್ಟಾಗಿ ನಮ್ಮ ಭವಿಷ್ಯವನ್ನು ನಿರ್ಮಿಸುತ್ತಿರುವ ಈ ಐತಿಹಾಸಿಕ ಸಂದರ್ಭದಲ್ಲಿ ನಿಮಗೆ ಆತಿಥ್ಯ ನೀಡಲು ಭಾರತದ ಜನರು ಸಂತೋಷಪಡುತ್ತಾರೆ ಎಂದು ಹೇಳಿದರು. ಹೈದರಾಬಾದ್‌ನಲ್ಲಿ ಈ ಸಮಾವೇಶ ನಡೆಯುತ್ತಿದ್ದು, ನಗರವು ತನ್ನ ಸಂಸ್ಕೃತಿ ಮತ್ತು ಪಾಕಪದ್ಧತಿ, ಆತಿಥ್ಯ ಮತ್ತು ಹೈಟೆಕ್‌ಗೆ ಹೆಸರುವಾಸಿಯಾಗಿದೆ ಎಂದರು.

ತಂತ್ರಜ್ಞಾನ ಮತ್ತು ಪ್ರತಿಭೆ ಭಾರತದ ಅಭಿವೃದ್ಧಿ ಪಯಣಕ್ಕೆ ಪ್ರಮುಖವಾದ ಎರಡು ಆಧಾರಸ್ತಂಭಗಳಾಗಿವೆ. ತಂತ್ರಜ್ಞಾನವು ರೂಪಾಂತರವನ್ನು ತರುತ್ತದೆ, 800 ಮಿಲಿಯನ್ ಜನರಿಗೆ ಕಲ್ಯಾಣ ಪ್ರಯೋಜನಗಳನ್ನು ತಲುಪಿಸಿದ ಎಂಜಿ ಟ್ರಿನಿಟಿಯ ಉದಾಹರಣೆ ಮತ್ತು ಕೋವಿಡ್ ಸೋಂಕಿನ ವಿರುದ್ಧ ವಿಶ್ವದ ಅತಿದೊಡ್ಡ ವ್ಯಾಕ್ಸಿನೇಷನ್ ಡ್ರೈವ್‌ಗೆ ಶಕ್ತಿ ತುಂಬಿದ ಟೆಕ್ ವೇದಿಕೆಯನ್ನು ಉಲ್ಲೇಖಿಸಿ ಪ್ರಧಾನಿ ಹೇಳಿದರು. ಭಾರತದಲ್ಲಿ, ತಂತ್ರಜ್ಞಾನವು ಬಾಹ್ಯ ಏಜೆಂಟ್ ಅಲ್ಲ, ಆಂತರಿಕ ಏಜೆಂಟ್ ಎಂದರು.

ಒಂದನೇ ಪುಟದಿಂದ

ಸರ್ಕಾರ ನಿರ್ಧಾರ

ವಿಧಾನ ಪರಿಷತ್ತಿಗೆ ಆಯ್ಕೆಯಾಗಿರುವ ಸಿ.ಎನ್.ಮಂಜೇಗೌಡ, ಡಾ.ಡಿ.ತಿಮ್ಮಯ್ಯ ಹಾಗೂ ದಿನೇಶ್‌ಗೂಳಿಗೌಡರು ಈ ಪ್ರಸ್ತಾಪ ಕೈಬಿಡುವಂತೆ ಆಗ್ರಹಿಸಿದ್ದರು. ಇದೀಗ ಮುಖ್ಯಮಂತ್ರಿಗಳ ಸ್ಪಷ್ಟನೆಯಿಂದ ಗ್ರಾಪಂ ಸದಸ್ಯರ ಅಧಿಕಾರ ಕೈತಪ್ಪುವ ಆತಂಕ ದೂರ ಮಾಡಿದಂತಾಗಿದೆ. ಪಂಚಾಯಿತಿ ವ್ಯಾಪ್ತಿಯ ಕಟ್ಟಡ, ಹೋಟೆಲ್, ಅಂಗಡಿ ಆರಂಭಕ್ಕೆ ಪರವಾನಗಿ ನೀಡಲು ಗ್ರಾಮ ಪಂಚಾಯಿತಿ ಸದಸ್ಯರ ಸಭೆಯಲ್ಲಿ ನಿರ್ಧಾರ ಕೈಗೊಳ್ಳುತ್ತಿದ್ದ ವ್ಯವಸ್ಥೆ ಬದಲಿಸಿ, ಈ ಅಧಿಕಾರವನ್ನೂ ಪಿಡಿಓಗಳಿಗೆ ನೀಡುವುದು ಸಭೆಯ ನಡಾವಳಿಯ ಪ್ರಮುಖ ಅಂಶಗಳಲ್ಲಿ ಒಂದಾಗಿತ್ತು. ಸದಸ್ಯರ ಸಭೆ ಸಕಾಲಕ್ಕೆ ನಡೆಯದೇ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂಬ ಕಾರಣ ನೀಡಿ, ಪಿಡಿಓಗಳಿಗೆ ಅಧಿಕಾರ ನೀಡುವ ನಡಾವಳಿ ರೂಪಿಸಲಾಗಿತ್ತು. ಇದೀಗ ಯಥಾಸ್ಥಿತಿ ಕಾಯ್ದುಕೊಳ್ಳುವ ನಿರ್ಧಾರವನ್ನು ಸರ್ಕಾರ ಪ್ರಕಟಿಸಿದೆ. ಪಂಚಾಯಿತಿ ಹಣಕಾಸು ವ್ಯವಹಾರ ಸಂಬಂಧ ಚೆಕ್‌ಗಳಿಗೆ ಅಧ್ಯಕ್ಷರು ಹಾಗೂ ಪಿಡಿಓ ಸಹಿ ಹಾಕುವುದು ಕಡ್ಡಾಯವಾಗಿದ್ದ ನಿಯಮವನ್ನು ತಿದ್ದುಪಡಿ ಮೂಲಕ ಬದಲಿಸಿ, ಈ ಅಧಿಕಾರವನ್ನು ಪಿಡಿಓ ಮತ್ತು ದ್ವಿತೀಯ ದರ್ಜೆ ಸಹಾಯಕರು ಜಂಟಿಯಾಗಿ ನಿರ್ವಹಿಸಲು ನಡಾವಳಿ ಸಿದ್ಧಪಡಿಸಲಾಗಿತ್ತು. ಈ ಬಗ್ಗೆಯೂ ಗ್ರಾಪಂ ಸದಸ್ಯರಿಂದ ಇಡೀ ರಾಜ್ಯದಲ್ಲಿ ವ್ಯಾಪಕ ಟೀಕೆ ವ್ಯಕ್ತವಾಗಿತ್ತು. ಇದೀಗ ಗ್ರಾಪಂ ಜನಪ್ರತಿನಿಧಿಗಳ ಯಾವುದೇ ಅಧಿಕಾರ ಮೊಟಕುಗೊಳಿಸಲು ಸರ್ಕಾರ ಮುಂದಾಗುವುದಿಲ್ಲ ಎಂದಿರುವುದು, ಗ್ರಾಪಂ ಸದಸ್ಯರಲ್ಲಿ ತಮ್ಮ ಅಧಿಕಾರ ಚಲಾವಣೆಯ ಹಕ್ಕು ಸಂರಕ್ಷಣೆಯಾದ ಸಮಾಧಾನ ಉಂಟಾಗಿದೆ.

ಐವರ ವಿರುದ್ಧ ಕೇಸ್ ದಾಖಲು

ಹೋಬಳಿ ಮೈಸೂರು ಗ್ರಾಮದ ಸರ್ವೆ ನಂ.155/2ರಲ್ಲಿ 2.06 ಎಕರೆ ಭೂಮಿಗೆ (ಜೆಪಿ ನಗರ ವ್ಯಾಪ್ತಿಯಲ್ಲಿ ಬರುವ ಕೈಗಾರಿಕಾ ವಲಯದಲ್ಲಿನ ಭೂಮಿ) 1975ರ ಸೆಪ್ಟೆಂಬರ್ 2 ರಂದು ಅಂದಿನ ಜಿಲ್ಲಾಧಿಕಾರಿಗಳು ಅನ್ಯಕ್ರಾಂತ ಮಂಜೂರು ಮಾಡಿದ್ದು, ನಂತರ ಮೆ॥ ತಿರುಮಲೈ ರೋಲರ್ ಫ್ಲೋರ್ ಮಿಲ್ಸ್ ಪ್ರೈ.ಲಿ. ನಿರ್ದೇಶಕರಾದ ಎಂ.ಎನ್.ನರಸಿಂಹಣ್ಣ ಅವರು ಸದರಿ ಭೂಮಿಯನ್ನು ಕಂಪನಿಯ ಪ್ರತಿನಿಧಿಯಾಗಿ ಹಾಗೂ ಕಂಪನಿ ಹೆಸರಲ್ಲಿ 1982ರ ಮೇ 17ರಂದು ಖರೀದಿಸಿದ್ದರು ಎಂದು ತಿಳಿಸಿದ್ದಾರೆ.

ಆದರೆ ನೋಂದಣಿಯಾದ ಮೂಲ ಕ್ರಯಪತ್ರವನ್ನು ಕಂಪನಿಗೆ ಒಪ್ಪಿಸಿರಲಿಲ್ಲ. 1999ರ ಜೂನ್ 7ರಂದು ಎಂ.ಎನ್.ನರಸಿಂಹಣ್ಣ ನಿಧನರಾದರು. ಚೆನ್ನೈನ ರಿಜಿಸ್ಟ್ರಾರ್ ಆಫ್ ಕಂಪನೀಸ್‌ಗೆ ಈ ವಿಷಯ ಮುಟ್ಟಿಸಿದ್ದು, 1999ರ ಜೂನ್ 7ರಂದು ನರಸಿಂಹಣ್ಣ ಕಂಪನಿ ನಿರ್ದೇಶಕರಾಗಿರುವುದಿಲ್ಲವೆಂಬ ವಿಚಾರವನ್ನು ತಿಳಿಸಲಾಗಿತ್ತು ಎಂದು ಶ್ರೀಕಂಠಪ್ಪ ದೂರಿನಲ್ಲಿ ತಿಳಿಸಿದ್ದಾರೆ. ತದ ನಂತರ ಮೆ॥ ತಿರುಮಲೈ ರೋಲರ್ ಫ್ಲೋರ್ ಮಿಲ್ಸ್‌ನ ಅಂದಿನ ಅಧಿಕೃತ ನಿರ್ದೇಶಕರಾದ ಡಿ.ಕೃಷ್ಣಮೂರ್ತಿ ಅವರು 19,74,400 ರೂ. ಹಣ ಪಾವತಿಸಿ ಮುಡಾದಿಂದ ಏಕ ನಿವೇಶನ ಕೈಗಾರಿಕಾ ನಕ್ಷೆಗೆ ಅನುಮೋದನೆ ಪಡೆದಿರುವುದರೊಂದಿಗೆ ಕಂದಾಯ ಇಲಾಖೆಗೆ ಈ ಸ್ವತ್ತಿನ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. ಆದರೂ ಗ್ರಾಮ ಲೆಕ್ಕಿಗ ನಾಗೇಶ್, ರೆವಿನ್ಯೂ ಇನ್ಸ್‌ಪೆಕ್ಟರ್ ಮತ್ತು ತಹಸೀಲ್ದಾರ್ ಷಾಮೀಲಾಗಿ, ಮೆ॥ ತಿರುಮಲೈ ರೋಲರ್ ಫ್ಲೋರ್ ಮಿಲ್ಸ್ ಹೆಸರಿನಲ್ಲಿರುವ ಆಸ್ತಿಯನ್ನು ಲೇಟ್ ಎಂ.ಎನ್.ನರಸಿಂಹಣ್ಣ ಪತ್ನಿ ಜಯಲಕ್ಷ್ಮೀಬಾಯಿ ಮತ್ತು ಪುತ್ರಿ ಜಯಶ್ರೀ ಹೆಸರಿಗೆ 2022ರ ಆಗಸ್ಟ್ 11ರಂದು ಕಾನೂನುಬಾಹಿರವಾಗಿ ಪೌತಿ ಖಾತೆ ಮಾಡಿದ್ದಾರೆ ಎಂದು ಶ್ರೀಕಂಠಪ್ಪ ದೂರಿನಲ್ಲಿ ಉಲ್ಲೇಖಿಸಿದ್ದರು.

ಆನಂದನ್ ರಾಮಲಿಂಗಂ ತ್ಯಾಗರಾಜನ್, ಮಧುಶ್ರೀಕಂಠಪ್ಪ ಹಾಗೂ ಬಿ.ಶ್ರೀಕಂಠಪ್ಪ ಈ ಮೂವರು ಹಾಲಿ ಮೆ॥ ತಿರುಮಲೈ ರೋಲರ್ ಫ್ಲೋರ್ ಮಿಲ್ಸ್‌ನ ನಿರ್ದೇಶಕರಾಗಿದ್ದು, ನಮ್ಮ ಗಮನಕ್ಕೆ ಬಾರದೆ ಸದರಿ ಭೂಮಿ ತಮ್ಮ ವ್ಯಾಪ್ತಿಗೆ ಬಾರದಿದ್ದರೂ, ದುರುದ್ದೇಶದಿಂದ ಪೌತಿ ಖಾತೆ ಮಾಡಿರುವ ಕಂದಾಯ ಇಲಾಖೆ ಮೂವರು ಅಧಿಕಾರಿಗಳು ಹಾಗೂ ಅಕ್ರಮವಾಗಿ ಆಸ್ತಿ ಲಪಟಾಯಿಸಲೆತ್ನಿಸಿರುವ ಜಯಲಕ್ಷ್ಮೀಬಾಯಿ ಮತ್ತು ಜಯಶ್ರೀ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಬೇಕೆಂದು ಅವರು ದೂರಿನಲ್ಲಿ ತಿಳಿಸಿದ್ದರು.

'ಇ-ವಾಹನ'ಗಳ ಬಳಕೆ

ಇ-ವಾಹನಗಳನ್ನು ಆರಂಭದಲ್ಲಿ ಎಲೆಕ್ಟ್ರಾನಿಕ್ ತ್ಯಾಜ್ಯ ಸಂಗ್ರಹಕ್ಕಾಗಿ ಬಳಸಿಕೊಳ್ಳಲಾಗಿತ್ತು. ಇದೀಗ ಮೈಸೂರಿನ ಹೃದಯ ಭಾಗದಲ್ಲಿ ಸಂಗ್ರಹವಾಗುವ ನಾನಾ ತ್ಯಾಜ್ಯ ಸಾಗಿಸಲು ಬಳಸಲಾಗುತ್ತಿದೆ. ದೇವರಾಜ ಅರಸ್ ರಸ್ತೆ, ಕೆ.ಟಿ.ಸ್ಟ್ರೀಟ್ ಸೇರಿದಂತೆ ವಿವಿಧ ಬಡಾವಣೆಗಳಲ್ಲಿ ಸಂಗ್ರಹವಾಗುವ ಕಸ ಸಾಗಿಸಲಾಗುತ್ತಿದೆ. ಪೆಟ್ರೋಲ್, ಡೀಸೆಲ್ ಚಾಲಿತ ಆಟೋ ಟಿಪ್ಪರ್‌ನಂತೆ ಅಷ್ಟೇ ಸಾಮರ್ಥ್ಯದ ಕಸವನ್ನು ಸರಾಗವಾಗಿ ಸಾಗಿಸುತ್ತಿರುವುದರಿಂದ ಪಾಲಿಕೆ ಅಧಿಕಾರಿಗಳಲ್ಲಿ ಭರವಸೆ ಮೂಡಿದೆ. ಕೇವಲ 4 ಗಂಟೆ ಚಾರ್ಜ್ ಮಾಡಿದರೆ, 80 ಕಿ.ಮೀ. ಸಂಚರಿಸುತ್ತಿರುವುದರಿಂದ ಸಾಕಷ್ಟು ಉಳಿತಾಯ ಮಾಡಬಹುದಾಗಿದೆ. ಹಾಗಾಗಿ ಇ-ವಾಹನಗಳ ಬಳಕೆ ಹೆಚ್ಚಿಸಲು ಪಾಲಿಕೆ ನಿರ್ಧರಿಸಿದೆ.

ನಿರ್ವಹಣೆಯೂ ಸುಲಭ: ಇಂಧನ ಚಾಲಿತ ವಾಹನಗಳ ನಿರ್ವಹಣೆ ಅಧಿಕ ದುಬಾರಿ. ಇಂಧನದ ಸೋರಿಕೆಯೂ ಆಗುತ್ತಿರುವುದರಿಂದ ಪಾಲಿಕೆಗೆ ಹೊರೆಯಾಗಿ ಪರಿಣಮಿಸುತ್ತಿದೆ. ಆದರೆ ಇ-ವಾಹನಗಳು ಇದುವರೆಗೂ ದೊಡ್ಡ ಪ್ರಮಾಣದಲ್ಲಿ ದುರಸ್ತಿಗೆ ಬರದೇ ಇರುವುದರಿಂದ ನಿರ್ವಹಣೆ ಸುಲಭ ಎಂಬ ಲೆಕ್ಕಾಚಾರಕ್ಕೆ ಪಾಲಿಕೆ ಬಂದಿದೆ.

ಇ-ವಾಹನದ ಮೇಲೆ ಒಲವು: ಇಂಧನ ಬೆಲೆ ಹೆಚ್ಚಳ ಹಾಗೂ ಮುಂಬರುವ ದಿನಗಳಲ್ಲಿ ಬೇಡಿಕೆಗೆ ಅನುಗುಣವಾಗಿ ಇಂಧನ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಬಹುದೆಂಬ ಲೆಕ್ಕಾಚಾರ ಹಾಕಿ, ಇದಕ್ಕೆ ಪರ್ಯಾಯವಾಗಿ ವಿದ್ಯುತ್ ಚಾಲಿತ ವಾಹನಗಳ ಬಳಕೆಯತ್ತ ಒಲವು ವ್ಯಕ್ತವಾಗಿದೆ. ಒಂದೆಡೆ ಸಿಎನ್‌ಜಿ ಅನಿಲದಿಂದ ಸಂಚರಿಸುವ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿರುವ ಬೆನ್ನಲ್ಲೇ, ವಿದ್ಯುತ್ ಚಾಲಿತ ವಾಹನಗಳ ಬಳಕೆಯೂ ಹೆಚ್ಚಾಗುತ್ತಿದೆ. ಈಗಾಗಲೇ ವಿದ್ಯುತ್ ಚಾಲಿತ ದ್ವಿಚಕ್ರ ವಾಹನ, ತ್ರಿಚಕ್ರ ವಾಹನ ಹಾಗೂ ಲಘು ವಾಹನಗಳು ಮಾರುಕಟ್ಟೆಗೆ ಲಗ್ಗೆ ಹಾಕಿದ್ದು, ವಿವಿಧ ವಿನ್ಯಾಸದಿಂದ ಗ್ರಾಹಕರನ್ನು ತನ್ನತ್ತ ಸೆಳೆಯುವಲ್ಲಿ ವಿವಿಧ ಕಂಪನಿಗಳು ಪೈಪೋಟಿಗಿಳಿದಿವೆ. ಇದರಿಂದ ಮೈಸೂರು ಸೇರಿದಂತೆ ಜಿಲ್ಲೆಯಾದ್ಯಂತ ಇ-ವಾಹನಗಳ ಸಂಚಾರ ಹೆಚ್ಚಾಗಿದೆ.

ಚಾಮುಂಡೇಶ್ವರಿ ಅಮ್ಮನ ತೆಪ್ಪೋತ್ಸವ

ಮೂಲಕ ಸೆರೆ ಹಿಡಿಯುತ್ತಿದ್ದರೆ, ಮತ್ತೊಂದೆಡೆ ಪೊಲೀಸ್ ಬ್ಯಾಂಡ್‌ನಿಂದ ಹೊರಹೊಮ್ಮಿದ ಸಂಗೀತದ ಕಂಪು ನೆರೆದಿದ್ದ ಭಕ್ತರಿಗೆ ಮುದ ನೀಡಿತು. ದೇವಿಕೆರೆಯನ್ನು 3 ಸುತ್ತು ಪ್ರದಕ್ಷಿಣೆ ಹಾಕಿದ ನಂತರ ಅಮ್ಮನವರ ಉತ್ಸವ ಮೂರ್ತಿಯನ್ನು ತೆಪ್ಪದಿಂದ ತಂದು 7.40ರ ವೇಳೆಗೆ ಚಿನ್ನದ ಪಲ್ಲಕ್ಕಿಯಲ್ಲಿರಿಸಿ, ಪೂಜೆ ನೆರವೇರಿಸಲಾಯಿತು. ಅಲ್ಲಿಂದ ಅಮ್ಮನವರ ಚಿನ್ನದ ಪಲ್ಲಕ್ಕಿ ಉತ್ಸವ ವಿವಿಧ ಮಂತ್ರ ಘೋಷಗಳೊಂದಿಗೆ ದೇವಿಕೆರೆ ಅಂಗಳದಿಂದ ಮೆರವಣಿಗೆ ಮೂಲಕ ರಾತ್ರಿ 8.40ಕ್ಕೆ ಸ್ವಸ್ಥಾನ ತಲುಪಿತು. ನಂತರ ದೇವಾಲಯದೊಳಗೆ ಧ್ವಜಾ ಅರೋಹಣ ನಡೆಸಿ, ಮೂಗ ಬಲಿ ಹಾಗೂ ಮೂಲ ದೇವಿ ವಿಗ್ರಹಕ್ಕೆ ಪಂಚಾಮೃತ ಅಭಿಷೇಕ ನೆರವೇರಿಸಲಾಯಿತು.

ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಭಾಗಿ: ಚಾಮುಂಡೇಶ್ವರಿ ಅಮ್ಮನವರ ತೆಪ್ಪೋತ್ಸವದಲ್ಲಿ ಭಾಗವಹಿಸಿದ್ದ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಚಾಮುಂಡಿ ತಾಯಿಯ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಮೊಬೈಲ್‌ನಲ್ಲಿ ತೆಪ್ಪೋತ್ಸವದ ಫೋಟೊ ತೆಗೆದುಕೊಂಡು ಖುಷಿಪಟ್ಟರು. ಚಾಮುಂಡೇಶ್ವರಿ ದೇವಸ್ಥಾನದ ಮುಖ್ಯ ಅರ್ಚಕ ಡಾ.ಎನ್.ಶಶಿಶೇಖರ ದೀಕ್ಷಿತ್, ಕಾರ್ಯನಿರ್ವಾಹಣಾಧಿಕಾರಿ ಗೋವಿಂದರಾಜು ಮತ್ತಿತ್ತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಇಂದಿನಿಂದ ಪ್ರಧಾನಮಂತ್ರಿಗಳ ವಿಷನ್-2047ರ ಕುರಿತ ವಸ್ತುಪ್ರದರ್ಶನ



ಕೇಂದ್ರ ಸರ್ಕಾರದ 8 ವರ್ಷಗಳ ಸಾಧನೆ ಅನಾವರಣ; ಛಾಯಾಚಿತ್ರ ಪ್ರದರ್ಶನ



ಮೈಸೂರು, ಅ. 11 (ಆರ್‌ಕೆ)- ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಹಾರಾಜ ಸರ್ಕಾರಿ ಪದವಿಪೂರ್ವ ಕಾಲೇಜು ಮೈದಾನದಲ್ಲಿ ನಾಳೆ (ಅ.12) ಯಿಂದ ಅ. 18 ರವರೆಗೆ ಕೇಂದ್ರ ಸರ್ಕಾರದ 8 ವರ್ಷಗಳ ಸಾಧನೆ, ಪ್ರಧಾನ ಮಂತ್ರಿಗಳ ವಿಷನ್-2047 ವಸ್ತುಪ್ರದರ್ಶನ ಹಾಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಛಾಂಯಾಚಿತ್ರ ಪ್ರದರ್ಶನ, ವಿಚಾರ ಸಂಕಿರಣವನ್ನು ಆಯೋಜಿಸಲಾಗಿದೆ.

ಕೇಂದ್ರ ಸಂವಹನ ಇಲಾಖೆ, ವಾರ್ತಾ ಮತ್ತು ಪ್ರಸಾರ ಸಚಿವಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಮೈಸೂರು ಮಹಾನಗರ ಪಾಲಿಕೆ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿರುವ 7 ದಿನಗಳ ಈ ವಸ್ತುಪ್ರದರ್ಶನವನ್ನು ಬುಧವಾರ ಬೆಳಗ್ಗೆ 10.30 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಉದ್ಘಾಟಿಸುವರು. ಶಾಸಕ ಎಲ್. ನಾಗೇಂದ್ರ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್, ಶಾಸಕರು, ವಿಧಾನ ಪರಿಷತ್ ಸದಸ್ಯರು, ವಿವಿಧ ನಿಗಮ ಮಂಡಳಿ ಅಧ್ಯಕ್ಷರು ಹಾಗೂ ಅಧಿಕಾರಿಗಳು ಭಾಗವಹಿಸುವರು ಎಂದು ಕೇಂದ್ರ ಸಂವಹನ ಇಲಾಖೆ ಉಪನಿರ್ದೇಶಕಿ ಡಾ. ಟಿ.ಸಿ. ಪೂರ್ಣಿಮಾ ತಿಳಿಸಿದ್ದಾರೆ.

ಸ್ವಾತಂತ್ರ್ಯ ಹೋರಾಟ, ಕೇಂದ್ರ ಸರ್ಕಾರದ 8 ವರ್ಷಗಳ ಸಾಧನೆ, ಪ್ರಧಾನ ಮಂತ್ರಿಯವರ ದೂರದರ್ಶಿತ್ವ-2047 ವಿಷಯಗಳನ್ನೊಳಗೊಂಡ ಛಾಯಾಚಿತ್ರ ಪ್ರದರ್ಶನ, ಸರ್ವರಿಗೂ ಆರೋಗ್ಯ ಒದಗಿಸುವ ಆಯುಷ್ಮಾನ್ ಭಾರತ, ಸಾಂಕ್ರಾಮಿಕ ರೋಗಗಳ ನಿರ್ವಹಣೆ, ರೈತ ಸಮೃದ್ಧಿ ಯೋಜನೆಗಳು, ಆದಿವಾಸಿಗಳ ಸರ್ವತೋಮುಖ ಅಭಿವೃದ್ಧಿ, ಹರ್‌ಘರ್ ಜಲ್, ರಾಷ್ಟ್ರೀಯ ಶಿಕ್ಷಣ ನೀತಿ-2020, ದಿವ್ಯಾಂಗರ ಸಬಲೀಕರಣ ಕುರಿತ ಮಾಹಿತಿಗಳು ಛಾಯಾಚಿತ್ರ ಪ್ರದರ್ಶನದಲ್ಲಿ ಲಭ್ಯವಾಗಲಿದೆ.

ಮೈಸೂರಿನ ವಾರ್ತಾ ಭವನದಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ವಿಷಯ ತಿಳಿಸಿದ ಡಾ. ಟಿ.ಸಿ. ಪೂರ್ಣಿಮಾ ಅವರು, ಭಾರತ ಸ್ವಾತಂತ್ರ್ಯ ಶತಮಾನೋತ್ಸವದ ವೇಳೆಗೆ ದೇಶದ ಪ್ರಗತಿಯನ್ನು ಮನಗಂಡಿರುವ ಪ್ರಧಾನ ಮಂತ್ರಿಯವರ ಪಂಚ ಸಂಕಲ್ಪದ ಪರಿಚಯ ಮಾಡಿಕೊಡಲಿರುವ ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯ ಹೋರಾಟದ ವೀರಗಾಥೆ ಮತ್ತು ಹೆಜ್ಜೆ ಗುರುತುಗಳನ್ನು ದಾಖಲಿಸುವ ಪ್ರದರ್ಶನವಿರುತ್ತದೆ ಎಂದು ತಿಳಿಸಿದರು.

ಪ್ರತೀ ದಿನ ವಿಚಾರ ಸಂಕಿರಣ, ಆಯುಷ್‌ನಿಂದ ಸಂವಹನ ದೋಷವುಳ್ಳವರಿಗೆ ಚಿಕಿತ್ಸೆ ಕುರಿತು ಉಪನ್ಯಾಸ, ಆರೋಗ್ಯ ಇಲಾಖೆ, ರುಡ್‌ಸೆಟ್, ಲೀಡ್ ಬ್ಯಾಂಕ್‌ನಿಂದ ಅಗತ್ಯ ಮಾಹಿತಿ, ಆರೋಗ್ಯ ತಪಾಸಣೆ, ಉಚಿತ ಕೋವಿಡ್ ಲಸಿಕೆ, ರಕ್ತ ಸಂಗ್ರಹ, ಕೃತಕ ಅಂಗಾಂಗ ಉಪಕರಣ ವಿತರಣೆಯಷ್ಟೇ ಅಲ್ಲದೆ ಸರ್ಕಾರದ ಯೋಜನೆಗಳನ್ನು ಫಲಾನುಭವಿಗಳಿಗೆ ಪೂರೈಸುವುದೂ ಸೇರಿದಂತೆ 7 ದಿನಗಳ ಕಾಲ ಭರಪೂರ ಮಾಹಿತಿ ನೀಡಲಾಗುವುದು ಎಂದು ಡಾ. ಟಿ.ಸಿ. ಪೂರ್ಣಿಮಾ ಇದೇ ಸಂದರ್ಭ ನುಡಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ. ಹರೀಶ್, ಮಾಹಿತಿ ಸಹಾಯಕ ರಮೇಶ್, ಮಂಗಳೂರಿನ ಸಹಾಯಕ ವಾರ್ತಾಧಿಕಾರಿ ತುಕಾರಾಂ ಹಾಗೂ ಚಿತ್ರದುರ್ಗ ಜಿಲ್ಲೆಯ ರಾಮಕೃಷ್ಣಪ್ಪ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಅ.18ರಂದು ಬೆಂಗಳೂರಲ್ಲಿ ಬಗರ್‌ಹುಕುಂ ಸಾಗುವಳಿದಾರರ ಬೃಹತ್ ಪ್ರತಿಭಟನಾ ಸಭೆ

● ಸಾಗುವಳಿ ಭೂಮಿಗೆ ಹಕ್ಕುಪತ್ರ ನೀಡಲು ಒತ್ತಾಯ ● ಖಾಯಂ ಹಕ್ಕು ಪತ್ರಕ್ಕೆ ಬದಲು ಶುಲ್ಕ ಪಡೆದು ಗುತ್ತಿಗೆ ನೀಡುವ ಸರ್ಕಾರದ ಪ್ರಸ್ತಾಪಕ್ಕೆ ಖಂಡನೆ



ಮೈಸೂರು,ಅ.11(ಪಿಎಂ)- ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ (ಎಐಕೆಕೆಎಂಎಸ್) ವತಿಯಿಂದ ಅ.18ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬಗರ್ ಹುಕುಂ ಸಾಗುವಳಿದಾರರ ಬೃಹತ್ ಪ್ರತಿಭಟನಾ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘಟನೆಯ ರಾಜ್ಯ ಕಾರ್ಯದರ್ಶಿ ಎಂ.ಶಶಿಧರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಸುಮಾರು 24 ಲಕ್ಷಕ್ಕೂ ಅಧಿಕ ಬಗರ್ ಹುಕುಂ ಸಾಗುವಳಿದಾರರು ಇದ್ದು, ಇವರು ಕೃಷಿಯನ್ನೇ ಜೀವನಾಧಾರವೆಂದು ನಂಬಿ ಹಲವು ವರ್ಷಗಳಿಂದ ರಾಜ್ಯದ ಉದ್ದಗಲಕ್ಕೂ ಸಾಗುವಳಿ ಮಾಡುತ್ತಿದ್ದಾರೆ. ಇವರ ಸಾಗುವಳಿ ಭೂಮಿಗೆ ಶೀಘ್ರವೇ ಹಕ್ಕುಪತ್ರ ನೀಡಬೇಕೆಂದು ಒತ್ತಾಯಿಸಿ ಈ ಪ್ರತಿಭಟನಾ ಸಭೆ ಹಮ್ಮಿಕೊಳ್ಳಲಾಗಿದೆ ಎಂದರು.

ಬಗರ್‌ಹುಕುಂ ಸಾಗುವಳಿದಾರರು ಉಪಯೋಗವಿಲ್ಲದೇ ಬಿದ್ದಿದ್ದ ಅರಣ್ಯದಂಚಿನ ಭೂಮಿ ಸೇರಿದಂತೆ ಸರ್ಕಾರಿ ಭೂಮಿಯನ್ನು ಹಗಲು ರಾತ್ರಿ ಬೆವರು ಸುರಿಸಿ, ಹಸನು ಮಾಡಿ ಕೃಷಿ ಯೋಗ್ಯವಾಗಿಸಿದ್ದಾರೆ. ಇಂತಹವರ ಹಕ್ಕನ್ನು ಅಧಿಕೃತಗೊಳಿಸುವ ಕಾಳಜಿಯನ್ನು ಅಧಿಕಾರ ನಡೆಸಿದ ಯಾವುದೇ ಸರ್ಕಾರ ತೋರಿಲ್ಲ. ಕೇವಲ ಭೂ ಮಂಜೂರಾತಿ ಸಮಿತಿಯನ್ನು ಕೆಲವು ಜಿಲ್ಲೆಗಳಲ್ಲಿ ರಚಿಸಿ ಹಂಗಾಮಿ ಸಾಗುವಳಿ ಚೀಟಿಯಷ್ಟೇ ನೀಡಲಾಗಿದೆ ಎಂದು ತಿಳಿಸಿದರು.

ಸಾಗುವಳಿ ಮಾಡುತ್ತಿರುವ 2ರಿಂದ 3 ಎಕರೆ ಭೂಮಿ ಹೊರತಾಗಿ ಇವರಲ್ಲಿ ಬಹುತೇಕರಿಗೆ ಬೇರೆ ಯಾವುದೇ ಆದಾಯ ಮೂಲಗಳಿಲ್ಲ. ಹಕ್ಕುಪತ್ರ ನೀಡುವ ಭರವಸೆ ನೀಡುತ್ತಾ ಬಂದಿರುವ ಸರ್ಕಾರ ಇದೀಗ ಈ ರೈತರ ಬುಡಕ್ಕೆ ಕೊಳ್ಳಿ ಇಡಲು ಮುಂದಾಗಿದೆ ಎಂಬುದನ್ನು ಕಂದಾಯ ಸಚಿವರ ಹೇಳಿಕೆ ಪುಷ್ಟೀಕರಿಸಿದೆ. 'ಬಗರ್ ಹುಕುಂ ಸಾಗುವಳಿದಾರರಿಗೆ ಖಾಯಂ ಹಕ್ಕುಪತ್ರ ನೀಡದಿರಲು ಸರ್ಕಾರದ ಮಟ್ಟದಲ್ಲಿ ತೀರ್ಮಾನವಾಗಿದೆ. ಬದಲಿಗೆ ಸಾಗುವಳಿ ಭೂಮಿಗೆ ಶುಲ್ಕ ಪಡೆದು ನಿಶ್ಚಿತ ಅವಧಿಗೆ ಗುತ್ತಿಗೆ ಆಧಾರದಲ್ಲಿ ನೀಡಲಾಗುವುದು' ಎಂದು ಕಂದಾಯ ಸಚಿವರು ಹೇಳಿಕೆ ನೀಡಿದ್ದು, ಇದು ಖಂಡನೀಯ. ಸರ್ಕಾರದ ಈ ನಿರ್ಧಾರ ಸಂಪೂರ್ಣ ರೈತ ವಿರೋಧಿ ಎಂದು ಆರೋಪಿಸಿದರು.

ಗುತ್ತಿಗೆ ಆಧಾರದಲ್ಲಿ ನೀಡುವ ನಿರ್ಧಾರವು ಬಡವರಿಂದ ಭೂಮಿ ಕಸಿದು, ಕಾರ್ಪೊರೇಟ್ ಬಂಡವಾಳಶಾಹಿಗಳಿಗೆ ನೀಡುವುದಾಗಿದೆ. ಆ ಮೂಲಕ ಕೃಷಿ ಕ್ಷೇತ್ರದಲ್ಲಿ ಬಂಡವಾಳಶಾಹಿಗಳು ಅಪಾರ ಲಾಭ ಗಳಿಸಿಕೊಳ್ಳಲು ನಡೆಸುತ್ತಿರುವ ಸಂಚು ಇದಾಗಿದೆ. ಸರ್ಕಾರ ಈ ನಿರ್ಧಾರ ಕೈಬಿಡಬೇಕು. ಈ ಹಿಂದೆ ಹಂಗಾಮಿ ಸಾಗುವಳಿ ಚೀಟಿ ವಿತರಿಸಿದ್ದರೂ ದುರಸ್ತ್ (ಪೋಡ್) ಆಗಿಲ್ಲ. ಈ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು ಎಂದು ಒತ್ತಾಯಿಸಿದರು. ಸಂಘಟನೆಯ ರಾಜ್ಯ ಉಪಾಧ್ಯಕ್ಷ ಶಿವಪ್ರಕಾಶ್, ಜಿಲ್ಲಾ ಸಂಘಟನಾ ಸಂಚಾಲಕ ಹೆಚ್.ಎಂ.ಬಸವರಾಜು, ರೈತರಾದ ಹಾರೋಹಳ್ಳಿ ಪಾಪೇಗೌಡ, ಸೋಮಶೇಖರ್ ಗೋಷ್ಠಿಯಲ್ಲಿದ್ದರು.

'ಸಂವಹನ ಅಸ್ವಸ್ಥತೆಗಳ ಮಕ್ಕಳ ಸಾಮರ್ಥ್ಯ ವೃದ್ಧಿ, ಸಬಲೀಕರಣ' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದ ಉದ್ಘಾಟನೆ

ವಿಶೇಷ ಮಕ್ಕಳನ್ನು ಸಮಾಜದ ಮುಖ್ಯವಾಹಿನಿಗೆ ತರಲು ಮೇಯರ್ ಕರೆ

110ಕ್ಕೂ ಅಧಿಕ ವಿಶೇಷಚೇತನ ಮಕ್ಕಳ ಶಿಕ್ಷಕರು ಭಾಗಿ



ಮೈಸೂರು, ಅ.11(ಆರ್‌ಕೆಬಿ)- ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ-2020) ಅಡಿಯಲ್ಲಿ 'ಸಂವಹನ ಅಸ್ವಸ್ಥತೆ ಹೊಂದಿರುವ ಮಕ್ಕಳ ಸಾಮರ್ಥ್ಯ ವೃದ್ಧಿ ಮತ್ತು ವಿಶೇಷ ಶಿಕ್ಷರ ಸಬಲೀಕರಣ' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಮೇಯರ್ ಶಿವಕುಮಾರ್, ಮಂಗಳವಾರ ಮೈಸೂರಿನ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ಸೆಮಿನಾರ್ ಹಾಲ್‌ನಲ್ಲಿ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಶಿಕ್ಷಣ ನೀತಿಯಡಿ (ಎನ್‌ಇಪಿ) ವಿಶೇಷ ಶಿಕ್ಷಕರ ವಿಚಾರ ಸಂಕಿರಣವು ಆಯಿಷ್ ವತಿಯಿಂದ ಆಯೋಜಿಸಿರುವುದು ಉತ್ತಮ ಕಾರ್ಯಕ್ರಮವಾಗಿದೆ. ಭಾಗವಹಿಸಿರುವ ವಿಶೇಷ ಮಕ್ಕಳ ಶಿಕ್ಷಕರು ಸೆಮಿನಾರ್ ಮತ್ತು ತರಬೇತಿ ಕಾರ್ಯಕ್ರಮವನ್ನು ಸದುಪಯೋಗಪಡಿಸಿಕೊಳ್ಳುವಂತೆ ತಿಳಿಸಿದರು.

ವಿಶೇಷ ಮಕ್ಕಳನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕು ಎಂದ ಅವರು, ಇಂತಹ ಸಮಯೋಚಿತ ಕಾರ್ಯಕ್ರಮ ಆಯೋಜಿಸಿರುವ ಆಯಿಷ್ ಸಂಸ್ಥೆಯನ್ನು ಅಭಿನಂದಿಸಿದರು. ಅಲ್ಲದೆ ಆಯಿಷ್‌ಗೆ ನಗರಪಾಲಿಕೆಯಿಂದ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಾಗಿ ಭರವಸೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಆಯಿಷ್ ನಿರ್ದೇಶಕಿ ಡಾ.ಎಂ. ಪುಷ್ಪಾವತಿ ಮಾತನಾಡಿ, ಐದು ರಾಜ್ಯಗಳ 110 ವಿಶೇಷ ಶಿಕ್ಷಕರು ತರಬೇತಿ ಪಡೆಯುತ್ತಿದ್ದು, ತಮ್ಮ ರಾಜ್ಯಗಳಲ್ಲೂ ಇದನ್ನು ಜಾರಿಗೊಳಿಸುವಂತೆ ಕರೆ ನೀಡಿದರು. ಇದಕ್ಕೂ ಮುನ್ನ ವಿಶೇಷ ಶಿಕ್ಷಣ ವಿಭಾಗದ ಸಹಪ್ರಾಧ್ಯಾಪಕ ಮತ್ತು ವಿಭಾಗದ ಮುಖ್ಯಸ್ಥ ಡಾ.ಅಲೋಕ್ ಕುಮಾರ್ ಉಪಾಧ್ಯಾಯ ಸ್ವಾಗತಿಸಿದರು. ವಿಶೇಷ ಶಿಕ್ಷಣ ವಿಭಾಗದ ಸಹ ಪ್ರಾಧ್ಯಾಪಕಿ ಡಾ.ಪ್ರೀತಿ ವೆಂಕಟೇಶ್ ವಿಚಾರ ಸಂಕಿರಣದ ಉದ್ದೇಶಗಳ ಕುರಿತು ಮಾತನಾಡಿದರು. ವಿಶೇಷ ಶಿಕ್ಷಣ ವಿಭಾಗದ ಉಪನ್ಯಾಸಕಿ ಡಿ.ದಿವ್ಯಾ, ಕುಸುಮಾ ಇನ್ನಿತರರು ಉಪಸ್ಥಿತರಿದ್ದರು.

ಮಳೆ ಪರಿಸ್ಥಿತಿ ಆಧರಿಸಿ ರಸ್ತೆ ಕಾಮಗಾರಿ

ಪಾಲಿಕೆ ವಲಯ ಕಚೇರಿ-3ರ ಕಟ್ಟಡ ಕಾಮಗಾರಿ ವೀಕ್ಷಿಸಿದ ಮೇಯರ್



ಮೈಸೂರು, ಅ.11(ಆರ್‌ಕೆ)-ಮಳೆ ಪರಿಸ್ಥಿತಿ ನೋಡಿಕೊಂಡು ಮೈಸೂರು ನಗರದಲ್ಲಿ ರಸ್ತೆ ಕಾಮಗಾರಿಗಳನ್ನು ಪುನರಾರಂಭಿಸುವುದಾಗಿ ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಇಂದು ಬೆಳಗ್ಗೆ ಕಾಮಗಾರಿ ಪೂರ್ಣಗೊಂಡಿರುವ ಹಾಗೂ ಟೆಂಡರ್ ಆಗಿದ್ದರೂ ಬಾಕಿ ಉಳಿದಿರುವ ರಸ್ತೆಗಳ ಪರಿಶೀಲನೆ ನಡೆಸಿದ ಅವರು, ಶಾರದಾದೇವಿನಗರದಲ್ಲಿ ನಿರ್ಮಿಸುತ್ತಿರುವ ಪಾಲಿಕೆ ವಲಯ ಕಚೇರಿ-3ರ ಕಟ್ಟಡ ಕಾಮಗಾರಿ ವೀಕ್ಷಿಸಿದರು.

ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಶಿವಕುಮಾರ್, ಇನ್ನೂ ಮೂರ್ನಾಲ್ಕು ದಿನ ಮಳೆ ಬೀಳುವ ಸಂಭವವಿದೆ ಎಂದು ಹವಾಮಾನ ವರದಿ ಇರುವುದರಿಂದ ಮಳೆ ಪರಿಸ್ಥಿತಿ ನೋಡಿಕೊಂಡು ಬಾಕಿ ಉಳಿದಿರುವ ರಸ್ತೆಗಳಿಗೆ ಡಾಂಬರ್ ಹಾಕುವ ಕೆಲಸ ಆರಂಭಿಸುತ್ತೇವೆ ಎಂದರು.

ಪೂರ್ಣಗೊಂಡಿರುವ ಹಾಗೂ ಕಾಮಗಾರಿ ಬಾಕಿ ಉಳಿದಿರುವ ರಸ್ತೆಯಾವುದು ಎಂಬುದು ಬಗ್ಗೆ ಪರಿಶೀಲಿಸಿದ್ದೇವೆ. ಮತ್ತೆ ಮಳೆ ಆರಂಭವಾಗಿದೆ ಇದು ನಿಂತ ಮೇಲೆ ಕೆಲಸ ಆರಂಭಿಸುತ್ತೇವೆ ಅದೇ ರೀತಿ ಶಾರದಾದೇವಿನಗರದಲ್ಲಿ ಪಾಲಿಕೆ ವಲಯ ಕಚೇರಿ -3ರ ಸ್ವಂತ ಕಟ್ಟಡ ನಿರ್ಮಿಸಲಾಗುತ್ತಿದೆ. ಅದೇ ರೀತಿ ಉದಯಗಿರಿಯ ಪಾಲಿಕೆ ಕಚೇರಿ -8ಕ್ಕೂ ಜಾಗ ಗುರುತಿಸಲು ಇಂದು ಸ್ಥಳ ಪರಿಶೀಲಿಸಿದ್ದೇವೆ ಎಂದು ತಿಳಿಸಿದರು.

ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಮಧುಸೂದನ್, ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ, ಇಂಜಿನಿಯರ್‌ಗಳಾದ ರಂಜಿತ, ರಜತ ಹಾಗೂ ಇತರರು ಪರಿಶೀಲನೆ ವೇಳೆ ಉಪಸ್ಥಿತರಿದ್ದರು.

ಅ.14ಕ್ಕೆ ಮಲ್ಟಿಪ್ಲೆಕ್ಸ್‌ನಲ್ಲಿ 'ಶುಭಮಂಗಳ' ತೆರೆಗೆ



ಮೈಸೂರು,ಅ.11(ಪಿಎಂ)- ಮದುವೆಯ ಸುತ್ತ ನಡೆಯುವಂತಹ ಘಟನಾವಳಿಗಳನ್ನು ಒಳಗೊಂಡ ಮನರಂಜನೆಯ ಕನ್ನಡ ಸಿನಿಮಾ 'ಶುಭಮಂಗಳ' ಅ.14ಕ್ಕೆ ರಾಜ್ಯಾದ್ಯಂತ ತೆರೆ ಕಾಣಲಿದೆ ಎಂದು ಚಿತ್ರದ ನಿರ್ದೇಶಕ ಸಂತೋಷ್ ಗೋಪಾಲ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೊಂದು ಸಂಪೂರ್ಣ ಮನರಂಜನೆಯ, ಕುಟುಂಬ ಸಮೇತ ನೋಡುವ ಸಿನಿಮಾ. ಮಲ್ಟಿಪ್ಲೆಕ್ಸ್ ಥಿಯೇಟರ್‌ನಲ್ಲಿ ಸಿನಿಮಾ ಬಿಡುಗಡೆ ಆಗುತ್ತಿದ್ದು, ಬೆಂಗಳೂರಿನ 25 ಹಾಗೂ ರಾಜ್ಯದ 25 ಸ್ಕ್ರೀನ್‌ಗಳಲ್ಲಿ ತೆರೆ ಕಾಣಲಿದೆ ಎಂದರು. ಚಿತ್ರದ ನಾಯಕ ನಟ ರಾಕೇಶ್ ಮೈಯಾ, ನಾಯಕ ನಟಿಯರಾದ ಮೇಘನಾ ಗಾಂವ್ಕರ್, ಹಿತಾ, ದೀಪ್ತಿ ನಾಗೇಂದ್ರ ಗೋಷ್ಠಿಯಲ್ಲಿದ್ದರು.

ಗುರುವಂದನಾ ಕಾರ್ಯಕ್ರಮದಲ್ಲಿ ರಾಜ್ಯದ 25ಕ್ಕೂ ಅಧಿಕ ಶಿಕ್ಷಕರಿಗೆ ಸನ್ಮಾನ

ಶಿಕ್ಷಕರ ಗೌರವಿಸಿದರೆ ನಮ್ಮನ್ನು ನಾವೇ ಗೌರವಿಸಿಕೊಂಡಂತೆ

ಬಿವಿಐ ರಾಷ್ಟ್ರೀಯ ಅಧ್ಯಕ್ಷ ಸತೀಶ್ ಜಾಧವ್ ಅಭಿಮತ



ಮೈಸೂರಿನ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಬಿವಿಐ ರಾಯಲ್ ಕ್ಲಬ್ ವತಿಯಿಂದ ಏರ್ಪಡಿಸಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಬಿವಿಐ ರಾಷ್ಟ್ರೀಯ ಅಧ್ಯಕ್ಷ ಸತೀಶ್ ಜಾಧವ್ 25ಕ್ಕೂ ಅಧಿಕ ಶಿಕ್ಷಕರನ್ನು ಸನ್ಮಾನಿಸಿದರು. ಚಿತ್ರದಲ್ಲಿ ಎಬಿಬಿಕೆ ಮಹಾಸಭಾ ರಾಜ್ಯಾಧ್ಯಕ್ಷ ಶ್ರೀನಿವಾಸರಾವ್ ಪಿಸ್ಸೆ, ಮುಖಂಡರಾದ ಗಜೇಂದ್ರನಾಥ ಮಾಳೋದೆ, ಶಿವಾಜಿರಾವ್ ರಂಪೂರೆ, ದಯಾಶಂಕರ ಲಾಲೆ, ನಾಗರಾಜ ಪತಂಗೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು, ಅ.11(ಆರ್‌ಕೆಬಿ)- ದೇಶ ಕಟ್ಟುವ ಕೆಲಸದಲ್ಲಿ ನಿರತರಾಗಿರುವ ಶಿಕ್ಷಕರು ಭಾವಸಾರ ಸಮುದಾಯದಲ್ಲೂ ಸಾಕಷ್ಟು ಮಂದಿ ಇದ್ದು, ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಅಂಥ ಶಿಕ್ಷರನ್ನು ಗೌರವಿಸುವ ಮೂಲಕ ಭಾವಸಾರ ವಿಷನ್ ಇಂಡಿಯಾ ಮೈಸೂರು ರಾಯಲ್ ಕ್ಲಬ್ ಶ್ಲಾಘನೀಯ ಕಾರ್ಯ ಮಾಡಿದೆ ಎಂದು ಭಾವಸಾರ್ ವಿಷನ್ ಇಂಡಿಯಾ ರಾಷ್ಟ್ರೀಯ ಅಧ್ಯಕ್ಷ ಸತೀಶ್ ಜಾಧವ್ ತಿಳಿಸಿದರು.

ಮೈಸೂರಿನ ವಿಜಯನಗರ ಒಂದನೇ ಹಂತದಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಭಾವಸಾರ್ ವಿಷನ್ ಇಂಡಿಯಾ ರಾಯಲ್ ಕ್ಲಬ್ ಮೈಸೂರು ಆಯೋಜಿಸಿದ್ದ ರಾಜ್ಯ ಮಟ್ಟದ ಗುರುವಂದನಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ರಾಜ್ಯದ ವಿವಿಧೆಡೆಯಿಂದ ಬಂದಿದ್ದ 25ಕ್ಕೂ ಅಧಿಕ ಶಿಕ್ಷಕರನ್ನು ಸನ್ಮಾನಿಸಿ, ಅವರು ಮಾತನಾಡಿದರು.

ಕರ್ನಾಟಕವಷ್ಟೇ ಅಲ್ಲದೆ ತಮಿಳುನಾಡು, ಗುಜರಾತ್, ಮಧ್ಯಪ್ರದೇಶ, ಸೇರಿದಂತೆ ಭಾವಸಾರ ಸಮುದಾಯ ದೇಶಾದ್ಯಂತ ಹರಡಿದೆ. ಬೇರೆ ಬೇರೆ ಸಂಘಟನೆಗಳ ಮೂಲಕ ತಮ್ಮ ಸಮುದಾಯಕ್ಕಷ್ಟೇ ಸೀಮಿತವಾಗದೆ, ಇತರೆ ಎಲ್ಲಾ ಸಮುದಾಯದ ಜನರ ಸೇವೆಯಲ್ಲಿ ನಿರತರಾಗಿ ಎಲ್ಲರ ಪ್ರೀತಿ ಪಡೆದುಕೊಂಡಿದೆ ಎಂದರು.

ಬಿವಿಐ ಮೈಸೂರು ರಾಯಲ್ ಕ್ಲಬ್, ಮಕ್ಕಳ ಶೈಕ್ಷಣಿಕ ಅಭಿವೃದ್ಧಿ ಮೂಲಕ ದೇಶ ಕಟ್ಟುವ ಕೆಲಸದಲ್ಲಿ ನಿರತರಾಗಿರುವ ಪ್ರಮುಖ ಶಿಕ್ಷಕರನ್ನು ಆಯ್ಕೆ ಮಾಡಿ, ಅಂಥವರನ್ನು ಸನ್ಮಾನಿಸುವ ಮೂಲಕ ಶಿಕ್ಷಕರ ದಿನಾಚರಣೆಯನ್ನು ಅರ್ಥಪೂರ್ಣವಾಗಿಸಿದೆ. ಈ ಸಂಸ್ಥೆಗಳು ವಧು-ವರ ಸಮ್ಮೇಳನ, ರಕ್ತದಾನ ಶಿಬಿರ, ವೈದ್ಯಕೀಯ ಶಿಬಿರ ಸೇರಿದಂತೆ ನಾನಾ ಶಿಬಿರಗಳನ್ನು ನಡೆಸುತ್ತಾ ಬಂದಿವೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ನಿವೃತ್ತ ಶಿಕ್ಷಕ ಭದ್ರಾವತಿ ಶಂಕರ್, ಶಿಕ್ಷಕರು ಮಕ್ಕಳ ಶೈಕ್ಷಣಿಕ ಪ್ರಗತಿ ಕಾಣುವುದರಲ್ಲೇ ಸಾರ್ಥಕತೆ ಕಾಣುತ್ತಾರೆ. ವೃತ್ತಿ ಗೌರವ ಕಾಪಾಡುವುದು ಶಿಕ್ಷರ ಹೊಣೆ. ಅದನ್ನು ಸಮರ್ಥವಾಗಿ ನಿಭಾಯಿಸಿದ ಶಿಕ್ಷರನ್ನು ಗೌರವಿಸುವ ಮೂಲಕ ಮೈಸೂರು ರಾಯಲ್ ಕ್ಲಬ್ ಉತ್ತಮ ಕಾರ್ಯ ಮಾಡಿದೆ ಎಂದು ಶ್ಲಾಘಿಸಿದರು.

ಚಾಮರಾಜ ಕ್ಷೇತ್ರದ ಶಾಸಕ ಎಲ್. ನಾಗೇಂದ್ರ, ಕಾಂಗ್ರೆಸ್ ಮುಖಂಡ ಕೆ.ಹರೀಶ್ ಗೌಡ, ಅಖಿಲ ಭಾರತ ಭಾವಸಾರ ಕ್ಷತ್ರಿಯ ಮಹಾಸಭಾದ ರಾಜ್ಯಾಧ್ಯಕ್ಷ ಶ್ರೀನಿವಾಸ ರಾವ್ ಪಿಸ್ಸೆ, ಬಿವಿಐ ಏರಿಯಾ 3ರ ರಾಜ್ಯಪಾಲ ಮಂಜುನಾಥ್ ಭಾಂಗ್ರೆ, ಭಾವಸಾರ ಕ್ಷತ್ರಿಯ ಸಮಾಜದ ಮೈಸೂರು ಅಧ್ಯಕ್ಷ ಶಿವಾಜಿರಾವ್ ರಂಪೂರೆ, ಶಿವಮೊಗ್ಗ ಅಧ್ಯಕ್ಷ ಗಜೇಂದ್ರನಾಥ ಮಾಳೋದೆ, ಮೈಸೂರು ಭಾವಸಾರ ಕ್ಷತ್ರಿಯ ಸೊಸೈಟಿ ಅಧ್ಯಕ್ಷ ದಯಾಶಂಕರ ಲಾಲೆ, ಸಮಾಜದ ನಿರ್ದೇಶಕ ನಾಗರಾಜ ಪತಂಗೆ, ನಗರಪಾಲಿಕೆ ಸದಸ್ಯ ರಮೇಶ್ ರಮಣಿ, ಕರ್ನಾಟಕ ಕ್ಷತ್ರಿಯ ಒಕ್ಕೂಟದ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಸುಮಾಮೂರ್ತಿ, ಬಿವಿಐ ರಾಯಲ್ ಕ್ಲಬ್ ಮೈಸೂರು ಅಧ್ಯಕ್ಷ ರವೀಂದ್ರ ಉತ್ತರ್‌ಕರ್, ಕಾರ್ಯದರ್ಶಿ ಸಂತೋಷ್ ಪತಂಗೆ, ನಿಯೋಜಿತ ಅಧ್ಯಕ್ಷ ಎನ್.ಗಣೇಶ್ ಲಾಳಿಗೆ ಇನ್ನಿತರರು ಉಪಸ್ಥಿತರಿದ್ದರು.

ನಾನೂ ಡಬಲ್ ಡಿಗ್ರಿ ಗ್ರ್ಯಾಜುಯೇಟ್; ಆರೋಪಿಸುವಾಗ ಎಚ್ಚರವಿರಲಿ

● ಶಾಸಕ ಅಶ್ವಿನ್ ಕುಮಾರ್ ಗರಂ ● ಉಕ್ಕಲಗೆರೆಯಲ್ಲಿ ಕನಕ ಭವನ ನಿರ್ಮಾಣಕ್ಕೆ ಭೂಮಿ ಪೂಜೆ



ಅವರು ಕನಕ ಭವನ ಕಟ್ಟಲಿ, ನಾವು ಸಂಗೊಳ್ಳಿ ರಾಯಣ್ಣ ಭವನ ನಿರ್ಮಿಸುತ್ತೇವೆ

ಕನಕ ಭವನ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಶಾಸಕರ ಪರ ಮಾತನಾಡಿದ ಉಕ್ಕಲಗೆರೆ ಗ್ರಾಪಂ ಸದಸ್ಯ ಅಡುಗೆ ಕುಮಾರ್, ಕಳೆದ ವಾರ ಗ್ರಾಪಂ ಅಧ್ಯಕ್ಷೆ ಶಿವಮ್ಮ ನೇತೃತ್ವದಲ್ಲಿ ಕೆಲವರು ಕನಕ ಭವನಕ್ಕೆ ಭೂಮಿ ಪೂಜೆ ನೆರವೇರಿಸಿದ್ದಾರೆ. ಗ್ರಾಪಂ ಅನುದಾನವಿದ್ದಲ್ಲಿ ಅವರು ಕನಕ ಭವನ ಕಟ್ಟಲಿ. ಶಾಸಕರ ಅನುದಾನದಲ್ಲಿ ನಾವು ಸಂಗೊಳ್ಳಿ ರಾಯಣ್ಣ ಭವನ ನಿರ್ಮಿಸುತ್ತೇವೆ ಎಂದು ಟಾಂಗ್ ನೀಡಿದರು. ಸರ್ಕಾರದ ಅನುದಾನದಲ್ಲಿ ಭೂಮಿ ಪೂಜೆ ಮಾಡಬೇಕಾದರೆ ಶಿಷ್ಟಾಚಾರ ಪಾಲಿಸುವುದು ನಿಯಮ. ಆದರೆ ಗ್ರಾಪಂ ಅಧ್ಯಕ್ಷರು ಯಾರದ್ದೋ ಮಾತು ಕೇಳಿ ಭೂಮಿ ಪೂಜೆ ನಿರ್ಧಾರ ತೆಗೆದುಕೊಂಡದ್ದು ಸರಿಯಲ್ಲ. ಕ್ಷೇತ್ರದ ಶಾಸಕರ ಅಭಿವೃದ್ಧಿ ಕಾರ್ಯ ಸಹಿಸದೆ ಅವರ ವಿರುದ್ಧ ಸಲ್ಲದ ಆರೋಪ ಮಾಡುತ್ತಿರುವುದು ಸರಿಯಲ್ಲ ಎಂದು ಕಿಡಿಕಾರಿದರು.

ಕಾಂಗ್ರೆಸ್ ಮುಖಂಡರೊಬ್ಬರು ಗ್ರಾಮದ ಅಭಿವೃದ್ಧಿಗಾಗಿ ಮಾಜಿ ಶಾಸಕರು 7.25 ಕೋಟಿ ರೂ. ಕೊಟ್ಟಿದ್ದಾರೆ ಎಂದಿದ್ದಾರೆ. ಆದರೆ 2017-18ನೇ ಸಾಲಿನಲ್ಲಿ ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಹಾಗೂ ಹೆಚ್.ಡಿ.ರೇವಣ್ಣ ಲೋಕೋಪಯೋಗಿ ಸಚಿವರಾಗಿದ್ದಾಗ ಅನುದಾನ ಬಿಡುಗಡೆಯಾಗಿತ್ತು. ಕಾಂಗ್ರೆಸ್‌ನವರು ಕ್ಷೇತ್ರದ ಜನತೆಗೆ ತಪ್ಪು ಮಾಹಿತಿ ಕೊಡಬಾರದು. ಬಿಡುಗಡೆಯಾಗಿದ್ದ ಹಣವನ್ನು ಹಾಲಿ ಶಾಸಕರು ಬೇರೆಡೆಗೆ ವರ್ಗಾಯಿಸಬಹುದಿತ್ತು. ಆದರೆ ಶಾಸಕರು ಹಾಗೆ ಮಾಡದೇ ಗ್ರಾಮದ ಅಭಿವೃದ್ಧಿಗಾಗಿ ಹಣ ನೀಡಿದ್ದಾರೆ ಎಂದು ಎಪಿಎಂಸಿ ಮಾಜಿ ನಿರ್ದೇಶಕ ಬಸವಣ್ಣ ಆರೋಪ ಖಂಡಿಸಿದರು.

ತಿ.ನರಸೀಪುರ, ಅ.11- ನಾನೇನು ಹೆಬ್ಬೆಟ್ಟಲ್ಲ, ಡಬಲ್ ಡಿಗ್ರಿ ಗ್ರ್ಯಾಜುಯೇಟ್. ನನ್ನ ಬಗ್ಗೆ ಆರೋಪ ಮಾಡುವಾಗ ಎಚ್ಚರವಿರಲಿ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ಗರಂ ಆದ ಘಟನೆ ತಾಲೂಕಿನ ಉಕ್ಕಲಗೆರೆಯಲ್ಲಿ ನಡೆಯಿತು.

ಇಲ್ಲಿನ ಗ್ರಾಪಂ ವ್ಯಾಪ್ತಿಯಲ್ಲಿ ಕನಕ ಭವನ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಿದ್ದು ಸ್ಥಳೀಯ ಶಾಸಕರಲ್ಲ. ಗ್ರಾಮದ ಅಭಿವೃದ್ಧಿಯಲ್ಲಿ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರ ಕೊಡುಗೆ ಅಪಾರ. ಹಾಲಿ ಶಾಸಕರ ಸಾಧನೆ ಶೂನ್ಯ ಎಂದು ಎಪಿಎಂಸಿ ಮಾಜಿ ನಿರ್ದೇಶಕ ಉಕ್ಕಲಗೆರೆ ಬಸವಣ್ಣ ಆರೋಪಿಸಿ ಗ್ರಾಪಂ ಅಧ್ಯಕ್ಷರೊಂದಿಗೆ ಕಳೆದ ವಾರ ಕನಕ ಭವನಕ್ಕೆ ಭೂಮಿ ಪೂಜೆ ನೆರವೇರಿಸಿದ್ದರು.

ಮಂಗಳವಾರ ಶಾಸಕ ಅಶ್ವಿನ್ ಕುಮಾರ್ ಅವರು 33 ಲಕ್ಷ ರೂ. ವೆಚ್ಚದ ಕನಕ ಭವನ ನಿರ್ಮಾಣ ಕಾಮಗಾರಿಗೆ ಅಧಿಕೃತವಾಗಿ ಗುದ್ದಲಿ ಪೂಜೆ ನೆರವೇರಿಸಿ, ಉಕ್ಕಲಗೆರೆ ಬಸವಣ್ಣನವರ ಆರೋಪಕ್ಕೆ ತಿರುಗೇಟು ನೀಡಿದರು.

ನನಗೆ ದ್ವೇಷದ ರಾಜಕಾರಣ ಬರುವುದಿಲ್ಲ. ಕ್ಷೇತ್ರದ ಅಭಿವೃದ್ಧಿ ಹಾಗೂ ಜನತೆ ಕಲ್ಯಾಣದ ಆಶಯ ಹೊಂದಿದ್ದೇನೆ. ನನ್ನ ಅಧಿಕಾರಾವಧಿಯಲ್ಲಿ ಒಳ್ಳೆಯ ಕೆಲಸ ಮಾಡುತ್ತೇನೆಯೇ ಹೊರತು ಕೆಟ್ಟದ್ದನ್ನು ಮಾಡಲಾರೆ, ಜನರ ಪ್ರೀತಿ, ವಿಶ್ವಾಸ ಮುಖ್ಯ ಎಂದರು.

ಆರೋಪಿಸುವವರು ವಾಸ್ತವಾಂಶ ಅರಿತು ಮಾತನಾಡಲಿ. ನಾನೇನು ಅನಕ್ಷರಸ್ಥನಲ್ಲ ಎಂದರಲ್ಲದೆ, ಕನಕ ಭವನ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಿಸಿದ್ದು ಯಾರು? ಅನುದಾನ ಎಲ್ಲಿತ್ತು? ಯಾವ ಸಾಲಿನಲ್ಲಿ ಬಂತು? ಯಾಕೆ ಸ್ಥಗಿತವಾಗಿತ್ತು? ಅನುದಾನ ಬಿಡುಗಡೆ ಮಾಡಿಸಲು ನಾವೇನು ಮಾಡಿದ್ದೇವೆ ಎಂದು ಪ್ರಶ್ನಿಸುವ ಮೂಲಕ ಅನುದಾನ ಬಿಡುಗಡೆ ಬಗ್ಗೆ ವಿವರಿಸಿದರು.

ಕನಕ ಭವನಕ್ಕೆ ಹಿಂದುಳಿದ ವರ್ಗದಿಂದ 10 ಲಕ್ಷ, ಗ್ರಾಮ ವಿಕಾಸ ಯೋಜನೆಯಡಿ 23 ಲಕ್ಷ ರೂ. ಬಿಡುಗಡೆಯಾಗಿದೆ. ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಗೆ ಒತ್ತು ನೀಡುವಂತೆ ಸೂಚಿಸಿದರು.

ಈ ವೇಳೆ ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್. ಸಿದ್ಧಾರ್ಥ, ಸದಸ್ಯ ಜೈಪಾಲ್ ಭರಣಿ, ಎಪಿಎಂಸಿ ಮಾಜಿ ಸದಸ್ಯ ಮಲ್ಲಿಕಾರ್ಜುನಸ್ವಾಮಿ, ಗ್ರಾಪಂ ಮಾಜಿ ಸದಸ್ಯ ಶಿವಕುಮಾರ್, ಸದಸ್ಯೆ ಪುಟ್ಟಮ್ಮ, ಎಸ್‌ಡಿಎಂಸಿ ಅಧ್ಯಕ್ಷ ರಾಜು, ಗೌಡಿಕೆ ನಟರಾಜ್, ಎಸ್.ಪಿ.ಕುಮಾರ್, ಹೋಟೆಲ್ ರಾಜಶೇಖರ್, ಶಿವಶಂಕರಪ್ಪ, ಕೆ.ಶಿವಣ್ಣ, ಅಂಗಡಿ ಕುಮಾರ್, ಹೋಟೆಲ್ ಮಲ್ಲಿಕಾರ್ಜುನಪ್ಪ ನಂದಿ, ಬೆನಕಪ್ಪ ರುದ್ರಸ್ವಾಮಿ, ವಕೀಲ ಸುರೇಶ್, ವಿನೋದ್, ಸಾಧು ಬಸವರಾಜ್, ಗೌಡಿಕೆ ಶ್ರೀನಿವಾಸ್, ಇಟ್ಟಿಗೆ ಶಿವಸ್ವಾಮಿ, ಕೊಪ್ಪಲು ಸ್ವಾಮಿ, ಪಿ.ರಾಜು, ಕೆಂಪಣ್ಣ ಮಹದೇವಸ್ವಾಮಿ, ಸಿದ್ಧರಾಮ, ಮಹದೇವಶೆಟ್ಟಿ, ಭೀಮ, ಶೇಖರ್, ಗಣೇಶ್, ಅರ್ಚಕನಾಗರಾಜಪ್ಪ ಪುರಶಿವಮೂರ್ತಿ, ನಾಗರಾಜು, ಸಿದ್ದಣ್ಣ, ಸಿದ್ದಲಿಂಗಸ್ವಾಮಿ, ಮರಪ್ಪ, ಮಲ್ಲೇಶ್, ಮಹದೇವಸ್ವಾಮಿ, ಮಹೇಶ್, ನಾಗರಾಜು, ರಘು, ಶಿವಣ್ಣ ತಮ್ಮಯ್ಯ, ಬಸವರಾಜಶೆಟ್ಟಿ, ರಾಜಶೆಟ್ಟಿ ಇನ್ನಿತರರಿದ್ದರು.

ಕಾವೇರಿ ಮಾತಾ ಟ್ರಸ್ಟ್‌ನಲ್ಲಿ ಕಳ್ಳತನ: ನಾಲ್ವರ ಬಂಧನ

ಬೆಟ್ಟದಪುರ, ಅ.11- ಪಿರಿಯಾಪಟ್ಟಣ ತಾಲೂಕಿನ ಕಣಗಾಲು ಗ್ರಾಮದ ಕಾವೇರಿ ಮಾತಾ ಟ್ರಸ್ಟ್‌ನಲ್ಲಿ 80 ಸಾವಿರ ರೂ. ಮೌಲ್ಯದ ವಸ್ತುಗಳನ್ನು ಕಳ್ಳತನ ಮಾಡಿದ್ದ ನಾಲ್ವರು ಆರೋಪಿಗಳನ್ನು ಬೆಟ್ಟದಪುರ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.



ಪ್ರದೀಪ್, ಸ್ವಾಮಿ, ಚಂದ್ರ, ಪ್ರವೀಣ್ ಬಂಧಿತ ಆರೋಪಿಗಳು. ಕಣಗಾಲು ಗ್ರಾಮದಲ್ಲಿ ಕೂಲಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದ ಆರೋಪಿಗಳು ಸೆ.26ರಂದು ಟ್ರಸ್ಟ್‌ನಲ್ಲಿದ್ದ ವೇಯಿಂಗ್ ಮೆಷಿನ್, ಪ್ರೆಸ್ಸಿಂಗ್ ಮೆಷಿನ್, ಗ್ಯಾಸ್ ಸಿಲಿಂಡರ್, ಡ್ರಮ್, ಪೈಪ್ ಹಾಗೂ ತೂಕದ ಮೆಷಿನ್ ಅನ್ನು ಕಳ್ಳತನ ಮಾಡಿದ್ದರು. ಈ ಕುರಿತು ಟ್ರಸ್ಟ್ ಅಧ್ಯಕ್ಷೆ ಪದ್ಮಮ್ಮ ಬೆಟ್ಟದಪುರ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಬೆಟ್ಟದಪುರ ಎಸ್‌ಐ ಪ್ರಕಾಶ್ ಎಂ. ಎತ್ತಿನಮನಿ ನೇತೃತ್ವದ ತಂಡ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ. ಕಾರ್ಯಾಚರಣೆಯಲ್ಲಿ ಎಎಸ್‌ಐ ಸೋಮಶೇಖರ, ಸಿಬ್ಬಂದಿ ದಿಲೀಪ್, ಮಹೇಶ್ ಇದ್ದರು.

ಕೆ.ಆರ್.ನಗರದಲ್ಲಿ ಅಂತರರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ



ಕೆ.ಆರ್.ನಗರ, ಅ.11- ಬಾಲ್ಯ ವಿವಾಹಕ್ಕೆ ಮಣಿಯದೇ ಹೆಣ್ಣು ಮಕ್ಕಳು ಕಡ್ಡಾಯವಾಗಿ ಶಿಕ್ಷಣ ಪಡೆಯಬೇಕು ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಆರ್.ಪವಿತ್ರ ಸಲಹೆ ನೀಡಿದರು.

ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ನಡೆದ ಮಾನಸಿಕ ಆರೋಗ್ಯ ದಿನ ಮತ್ತು ಅಂತರರಾಷ್ಟ್ರೀಯ ಹೆಣ್ಣು ಮಕ್ಕಳ ದಿನ ಹಾಗೂ ಕಾನೂನು ಅರಿವು-ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬಾಲ್ಯದಲ್ಲಿ ಸಮಯ ವ್ಯರ್ಥ ಮಾಡದೇ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು ಎಂದ ಅವರು, ಪೋಷಕರ ಒತ್ತಾಯಕ್ಕೆ ಮಣಿದು ಬಾಲ್ಯವಿವಾಹವಾಗದೇ ಕಡ್ಡಾಯವಾಗಿ ಶಿಕ್ಷಣ ಪಡೆಯಬೇಕು ಎಂದರು.

ಯಾರಾದರೂ ನಿಮಗೆ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಲು ಒತ್ತಡ ಹಾಕಿದರೆ ಅಂತಹವರ ಬಗ್ಗೆ ಮಾಹಿತಿ ನೀಡಿ. ಯಾವುದೇ ಕಾರಣಕ್ಕೂ ನಿಮ್ಮ ಹೆಸರನ್ನು ಬಹಿರಂಗ ಪಡಿಸುವುದಿಲ್ಲ. ನಿಮ್ಮ ನೆರವಿಗೆ ಕಾನೂನು, ಆರೋಗ್ಯ, ಶಿಕ್ಷಣ ಇಲಾಖೆ ಸೇರಿದಂತೆ ಹಲವು ಇಲಾಖೆಗಳಿವೆ ಎಂದರು.

ಮಾನಸಿಕ ತಜ್ಞ ಡಾ.ಕಿಶೋರ್, ವಕೀಲರ ಸಂಘದ ಮಾಜಿ ಅಧ್ಯಕ್ಷ ತಿಮ್ಮೇಗೌಡ ಉಪಪ್ರಾಂಶುಪಾಲ ಮೋಹನ್, ವಕೀಲ ಕೆ.ವಿ.ಮಹೇಶ್ ಮಾತನಾಡಿದರು. ಈ ವೇಳೆ ಬಿಇಓ ಗಾಯತ್ರಿ ಬಿಆರ್‌ಸಿ ವೆಂಕಟೇಶ್, ಆರೋಗ್ಯ ಪರಿವೀಕ್ಷಕ ರಮೇಶ್, ರೇಖಾ, ಶಿಕ್ಷಕರಾದ ಹೆಚ್.ಟಿ.ಮಂಜುನಾಥ್, ಸುಬ್ಬಶೆಟ್ಟಿ, ಚಂದ್ರಕಾಂತ್, ಸೋಮಶೇಖರ್, ನಿರ್ಮಲ, ಶಂಕರೇಗೌಡ, ನೀಲಮ್ಮ, ಚಲುವರಾಯಿ, ವಿದ್ಯಾವತಿ, ಭಾರತಿ, ಸುಧೀರ್, ವೇದಾವತಿ, ಹೇಮಂತ್, ಸೌಭಾಗ್ಯ ಸೇರಿದಂತೆ ವಿದ್ಯಾರ್ಥಿನಿಯರು ಹಾಜರಿದ್ದರು.

ಗ್ರಾಪಂ ಅಧ್ಯಕ್ಷರ ಅಧಿಕಾರ ಕಸಿಯುವ ಧೋರಣೆ ಖಂಡಿಸಿ

ಅ.15 ರಂದು ನಂ.ಗೂಡಲ್ಲಿ ಮೌನ ಪ್ರತಿಭಟನಾ ರ್ಯಾಲಿ



ನಂಜನಗೂಡು, ಅ. 11- ಸರ್ಕಾರ ಗ್ರಾಮ ಪಂಚಾಯ್ತಿ ನೌಕರರ ಸೇವಾ ನಿಯಮಗಳಿಗೆ ತಿದ್ದುಪಡಿ ಮಾಡುವ ಅಧ್ಯಕ್ಷರ ಅಧಿಕಾರವನ್ನು ಕಿತ್ತುಕೊಳ್ಳುವ ಮೂಲಕ ಗ್ರಾಮ ಸ್ವರಾಜ್ ಆಶಯಗಳಿಗೆ ಕೊಡಲಿ ಪೆಟ್ಟು ನೀಡಲು ಹೊರಟಿರುವ ಧೋರಣೆಯನ್ನು ಖಂಡಿಸಿ ಅ.15 ರಂದು ನಗರದ ಹಲ್ಲಹಳ್ಳಿ ವೃತ್ತದಿಂದ ತಹಸೀಲ್ದಾರ್ ಕಚೇರಿವರೆಗೆ ಮೌನ ಪ್ರತಿಭಟನಾ ರ್ಯಾಲಿ ನಡೆಸಲಾಗುವುದು ಎಂದು ತಾಲೂಕು ಗ್ರಾಪಂ ಸದಸ್ಯರ ಒಕ್ಕೂಟದ ಅಧ್ಯಕ್ಷ ಗಿರೀಶ್ ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣಗಳಿಗೆ ಹಾಗೂ ಗ್ರಾಮ ಪಂಚಾಯ್ತಿ ನೌಕರರ ಸೇವಾ ನಿಯಮಗಳಿಗೆ ತಿದ್ದುಪಡಿ ಮಾಡಿ ಹಣಕಾಸಿನ ವ್ಯವಹಾರವನ್ನು ಪಿಡಿಓ, ಕಾರ್ಯದರ್ಶಿಗಳು ಜಂಟಿಯಾಗಿ ನಿರ್ವಹಿಸಲು ತೀರ್ಮಾನಿಸಿದೆ. ಜೊತೆಗೆ ತೆರಿಗೆ ನಿರ್ಧರಿಸುವುದು, ಇ-ಸ್ವತ್ತು, ಕಟ್ಟಡ ಲೈಸೆನ್ಸ್, ಕಾರ್ಖಾನೆ ಪರವಾನಗಿ ನಿರ್ವಹಣೆಯನ್ನು ಪೂರ್ಣವಾಗಿ ಪಿಡಿಓಗೆ ಅಧಿಕಾರ ನೀಡಲು ಮುಂದಾಗಿದೆ. ಇದು ಪ್ರಜಾಪ್ರಭುತ್ವದ ವಿರೋಧಿ ಆಡಳಿತಕ್ಕೆ ಅವಕಾಶ ನೀಡಿದಂತಾಗುತ್ತದೆ. ಈ ನಿರ್ಣಯವನ್ನು ಗ್ರಾಮ ಪಂಚಾಯ್ತಿ ಸದಸ್ಯ ಒಕ್ಕೂಟವು ತೀವ್ರವಾಗಿ ಖಂಡಿಸುತ್ತದೆ ಎಂದ ಅವರು, ಪಂಚಾಯ್ತಿ ಆಡಳಿತವು ಜನರಿಂದ ಆಯ್ಕೆಯಾದ ಅಧ್ಯಕ್ಷರು ಹಾಗೂ ಸದಸ್ಯರಿಂದ ನೆರವೇರುವಂತೆ ಹಾಗೂ ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ಆಡಳಿತ ಅಧಿಕಾರಿಗಳ ಹಸ್ತಕ್ಷೇಪವನ್ನು ನಿಯಂತ್ರಿಸಬೇಕು ಎಂದು ಒಕ್ಕೂಟವು ಸರ್ಕಾರವನ್ನು ಒತ್ತಾಯಿಸುತ್ತದೆ ಎಂದರು.

ಸದಸ್ಯ ನಾಗೇಂದ್ರ ಮಾತನಾಡಿದರು. ಗೋಷ್ಠಿಯಲ್ಲಿ ಸಿ.ಎನ್.ಚಂದ್ರು, ಪದ್ಮಪಾಣಿ, ಕುಮಾರ್, ಇದ್ದರು.

ಮಹದೇಶ್ವರ ಜ್ಯೋತಿ ಯಾತ್ರೆಗೆ ಅದ್ಧೂರಿ ಸ್ವಾಗತ



ಸರಗೂರು, ಅ.11- ಪಟ್ಟಣಕ್ಕೆ ಆಗಮಿಸಿದ ಮಹದೇಶ್ವರ ಜ್ಯೋತಿ ಯಾತ್ರೆಯನ್ನು ಸಾರ್ವಜನಿಕರು ಅದ್ಧೂರಿಯಾಗಿ ಸ್ವಾಗತಿಸಿದರು. ಕೆ.ಆರ್.ಪೇಟೆ ತಾಲೂಕಿನ ಅಂಬಿಗರಹಳ್ಳಿಯಲ್ಲಿ ನಡೆಯುವ ಮಹಾ ಕುಂಭಮೇಳದ ಅಂಗವಾಗಿ ಮಲೆ ಮಹದೇಶ್ವರ ಬೆಟ್ಟದಿಂದ ಆಗಮಿಸಿದ ಮಹದೇಶ್ವರ ಜ್ಯೋತಿ ಯಾತ್ರೆಗೆ ನಗರದ ಶಿವರಾತ್ರೀಶ್ವರ ಶಿವಾನುಭವ ಮಂದಿರದ ಬಳಿ ಎಲ್ಲಾ ಸಮುದಾಯದ ಬಂಧುಗಳು ಪುಷ್ಪಾರ್ಚನೆ ಮಾಡಿದರು. ಈ ವೇಳೆ ಮಹಿಳೆಯರು ಆರತಿ ಮಾಡಿ ಸ್ವಾಗತಿಸಿದರು. ನಂತರ ಮಂಗಳವಾದ್ಯ, ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಈ ವೇಳೆ ನೆರೆದಿದ್ದ ಸಾರ್ವಜನಿಕರು ಜ್ಯೋತಿ ದರ್ಶನ ಪಡೆದರು.

ಈ ಸಂದರ್ಭ ತಾಲೂಕು ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಡಿ.ಜಿ.ಶಿವರಾಜು, ಎಸ್.ಎನ್.ಮೋಹನ್‌ಕುಮಾರ್, ಕಾರ್ಯದರ್ಶಿ ಲೋಕೇಶ್, ಉಪಾಧ್ಯಕ್ಷ ಶರಣಬನ್ನಿ ನಾಗರಾಜು, ಪಪಂ ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸದಸ್ಯ ವಿರೇಶ್, ಮುಖಂಡರಾದ ಎಂ.ಕೆಂಡಗಣ್ಣಸ್ವಾಮಿ, ಭೃಂಗೀಶ್, ಗುರುಸ್ವಾಮಿ, ನಟರಾಜು, ಎನ್.ಎಸ್.ಪ್ರತಾಪ್, ಶಿವರಾಜು, ಶೇಖರ್, ಅವಿನಾಶ್, ಹಾಗೂ ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಮುಖ್ಯ ಶಿಕ್ಷಕರಾದ ಮಹಮದ್ ಅಂಜುಂಪಾಷ ಸೇರಿದಂತೆ ಇನ್ನಿತರರಿದ್ದರು.



ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ಕರ್ನಾಟಕ ಸ್ಪೋರ್ಟ್ಸ್ ಡ್ಯಾನ್ಸ್ ಅಸೋಸಿಯೇಷನ್ ನಿಂದ ನಡೆದ ರಾಜ್ಯಮಟ್ಟದ ನೃತ್ಯ ಸ್ಪರ್ಧೆಯಲ್ಲಿ ಪಿರಿಯಾಪಟ್ಟಣದ ಗ್ರೀನ್ ಕಿಡ್ಸ್ ವಿದ್ಯಾರ್ಥಿಗಳು 6 ಚಿನ್ನದ ಪದಕ, 19 ಕಂಚಿನ ಪದಕ ಗೆಲ್ಲುವ ಮೂಲಕ ಸತತ 6ನೇ ಬಾರಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಈ ವೇಳೆ ಡ್ಯಾನ್ಸ್ ಅಸೋಸಿಯೇಷನ್ ಪ್ರೆಸಿಡೆಂಟ್ ರವಿ, ಟೆಕ್ನಿಕಲ್ ಚೇರ್ಮನ್ ವಿನೋದ್ ಕರ್ಕರಾ ಹಾಗೂ ಡಿಕೆಡಿ ವಿನ್ನರ್ ರಾಹುಲ್ ರಾವ್, ತೀರ್ಪುಗಾರರಾಗಿ ಆದರ್ಶ್, ಪ್ರದೀಪ್, ರಾಕೇಶ್ ಹಾಜರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಹೆಚ್.ಡಿ.ಕೋಟೆ, ಅ.11- ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಅ.12ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆವರೆಗೆ ತಾಲೂಕಿನ ಹಂಪಾಪುರ, ಕಂಚಮಳ್ಳಿ, ಹೊಮ್ಮರಗಳ್ಳಿ, ಮಾದಾಪುರ, ಬಾಚೇಗೌಡನಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಯುವಕರು ಮಹರ್ಷಿ ವಾಲ್ಮೀಕಿ ತತ್ವಾದರ್ಶ ಪಾಲಿಸಿ



ಕಂಪಲಾಪುರ, ಅ.11- ಯುವಕರು ರಾಮಾಯಣ ಕರ್ತೃ ಮಹರ್ಷಿ ವಾಲ್ಮೀಕಿಯವರ ತತ್ವಾದರ್ಶಗಳನ್ನು ಪಾಲಿಸಬೇಕು ಎಂದು ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ತಿಳಿಸಿದರು. ಇಲ್ಲಿಗೆ ಸಮೀಪದ ಹೊನ್ನೆಕೊಪ್ಪಲು-ಬೋರೆಹೊಸಳ್ಳಿ ಗ್ರಾಮಗಳು ಒಟ್ಟಾಗಿ ಮಂಗಳವಾರ ಆಯೋಜಿಸಿದ್ದ ವಾಲ್ಮೀಕಿ ಜಯಂತಿಯಲ್ಲಿ ಮಾತನಾಡಿದ ಅವರು, ದ್ವೇಷ, ಅಸೂಯೆ ತುಂಬಿರುವ ಸಮಾಜದಲ್ಲಿ ನಿಸ್ವಾರ್ಥ ಮನೋಭಾವ ದೂರವಾಗಿದೆ. ರಾಮಾಯಣ, ಮಹಾಭಾರತದಂತಹ ಮಹಾನ್ ಗ್ರಂಥಗಳಲ್ಲಿ ಎಲ್ಲಾ ಸಂಬಂಧಗಳನ್ನು ಬೆಸೆಯುವ ಸನ್ನಿವೇಶಗಳು ಸೃಷ್ಟಿಯಾಗುತ್ತಿದ್ದವು. ಆದರೆ ಇಂದು ಸ್ವಾರ್ಥ ಹೆಚ್ಚಿ ಸಂಬಂಧಗಳು ದೂರವಾಗುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಹೊನ್ನೆಕೊಪ್ಪಲು ಗ್ರಾಮದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಚೌಜ್ಜಲ ತಾಳಮ್ಮ ದೇವಸ್ಥಾನಕ್ಕೆ ವೈಯಕ್ತಿಕವಾಗಿ 25 ಸಾವಿರ ರೂ. ದೇಣಿಗೆ ನೀಡಿದರು.

ಈ ವೇಳೆ ಗ್ರಾಪಂ ಅಧ್ಯಕ್ಷೆ ಮಮತ, ಸದಸ್ಯೆ ಕವಿತಾ, ಬಿ.ಕೆ.ತಮ್ಮಯ್ಯ, ಚಂದ್ರು, ಮಂಜು, ರಾಮನಾಯ್ಕ, ನಿಂಗಣ್ಣ, ಕಾಳೇಗೌಡ, ಡೈರಿಮಂಜು, ಗೋವಿಂದಣ್ಣ, ವಾಲ್ಮೀಕಿ ಸಂಘದ ಅಧ್ಯಕ್ಷ ಮಂಜು, ಉಪಾಧ್ಯಕ್ಷ ಕುಮಾರನಾಯ್ಕ, ಕಾರ್ಯದರ್ಶಿ ಸುರೇಶ, ಖಜಾಂಚಿ ಚಂದ್ರನಾಯ್ಕ, ಶಶಿಕುಮಾರ್, ನಾಗರಾಜ್ ಮತ್ತಿತರರಿದ್ದರು.

ಮಳೆಯಿಂದ ತಂಬಾಕು ಬೆಳೆ ಹಾನಿ

ಹೆಚ್ಚಿನ ದರ ನಿಗದಿಪಡಿಸಲು ಮುಖ್ಯಮಂತ್ರಿಗಳಿಗೆ ಮನವಿ

ಹರಾಜು ಪ್ರಕ್ರಿಯೆಗೆ ಚಾಲನೆ ನೀಡಿದ ಶಾಸಕ ಅನಿಲ್ ಚಿಕ್ಕಮಾದು



ಹೆಚ್.ಡಿ.ಕೋಟೆ, ಅ.11- ತಾಲೂಕಿನಲ್ಲಿ ಅತಿ ಹೆಚ್ಚು ಮಳೆಯಿಂದ ತಂಬಾಕು ಬೆಳೆ ಹಾಳಾಗಿ ಇಳುವರಿ ಕಡಿಮೆಯಾಗಿದೆ. ತಂಬಾಕಿಗೆ ಹೆಚ್ಚಿನ ಬೆಲೆ ನಿಗದಿಪಡಿಸುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತೇನೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ತಂಬಾಕು ಹರಾಜು ಮಾರುಕಟ್ಟೆಯಲ್ಲಿ ಹರಾಜು ಪ್ರಕ್ರಿಯೆಗೆ ಚಾಲನೆ ನೀಡಿ ಮಾತನಾಡಿದ ಅವರು, ತಾಲೂಕಿನ ರೈತರ ನಿಯೋಗ ಬಂದರೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ತಂಬಾಕು ಬೆಳೆಗೆ ಹೆಚ್ಚಿನ ದರ ನಿಗದಿಪಡಿಸಲು ಮನವಿ ಸಲ್ಲಿಸಬಹುದು ಎಂದರು.

ತಂಬಾಕು ರೈತರು ಸಂಕಷ್ಟದಲ್ಲಿದ್ದಾರೆ. ಹಾಗಾಗಿ ಗೊಬ್ಬರ ಖರೀದಿಗೆ ಬ್ಯಾಂಕಿನಿಂದ 1 ಬ್ಯಾರೆನ್‌ಗೆ ಕೊಟ್ಟಿರುವ 35 ಸಾವಿರ ರೂ. ಸಾಲ ಮನ್ನಾ ಮಾಡಲು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ನಂತರ ತಂಬಾಕು ದರ ಹೆಚ್ಚಿಸುವಂತೆ ಕೇಂದ್ರ ಸರ್ಕಾರದ ಗಮನ ಸೆಳೆಯಲು ಸಂಸದ ವಿ.ಶ್ರೀನಿವಾಸಪ್ರಸಾದ್ ಅವರ ಗಮನಕ್ಕೂ ತರುತ್ತೇನೆ ಎಂದರು.

ತಂಬಾಕು ಮಂಡಳಿ ನಿರ್ದೇಶಕಿ ಅಶ್ವಿನಿ ನಾಯ್ಡು ಮಾತನಾಡಿ, ರೈತರಿಗೆ ಉತ್ತಮ ಬೆಲೆ ಕೊಡಿಸುವುದು ತಮ್ಮ ಜವಾಬ್ದಾರಿ. ಗೊಬ್ಬರದ ಸಾಲದ ಹಣ ಮನ್ನಾ ಮಾಡು ವಂತೆ ತಿಳಿಸಿದ್ದೀರಿ. ಈ ಬಗ್ಗೆ ಮಂಡಳಿ ಗಮನಕ್ಕೆ ತರಲಾಗುವುದು ಎಂದರು.

ಅಧೀಕ್ಷಕ ವಿಜಯಕುಮಾರ್ ಮಾತನಾಡಿ, ಗುಣಮಟ್ಟದ ತಂಬಾಕಿಗೆ ಮುಂದಿನ ದಿನಗಳಲ್ಲಿ ಉತ್ತಮ ದರ ಸಿಗುವ ಸಂಭವ ಇದೆ. ಹಾಗಾಗಿ ರೈತರು ಬೇಲ್ ಮಾಡುವಾಗ ಯಾವುದೇ ತ್ಯಾಜ್ಯ ಬೆರೆಸದೇ ಗುಣಮಟ್ಟದ ತಂಬಾಕನ್ನು ಮಾರುಕಟ್ಟೆಗೆ ತರಬೇಕು ಎಂದರು.

ಕೆಜಿ ತಂಬಾಕು 200 ರೂ: ತಂಬಾಕು ಮಾರುಕಟ್ಟೆ ಪ್ರಾರಂಭವಾದ ಮೊದಲ ದಿನ 27 ಬೇಲುಗಳು ಬಂದಿದ್ದವು. ತಂಬಾಕು ಖರೀದಿಗೆ 17 ಕಂಪೆನಿಗಳು ಬರುವುದಾಗಿ ತಿಳಿಸಿದ್ದು, ಇಂದಿನ ಮಾರುಕಟ್ಟೆಯಲ್ಲಿ 10 ಖರೀದಿ ಕಂಪನಿಗಳು ಭಾಗವಹಿಸಿದ್ದವು. ಇಂದು ಕೆಜಿ ತಂಬಾಕು 200 ರೂ.ಗೆ ಮಾರಾಟವಾಯಿತು. ತಂಬಾಕು ರೈತರಾದ ಬಿ.ವಿ.ಬಸವರಾಜು, ಮೊತ್ತ ಬಸವರಾಜಪ್ಪ, ರಾಜೇಗೌಡ, ಎ.ಜೆ. ಕಾಳೇಗೌಡ, ಸತೀಶ್, ಚಂದ್ರೇಗೌಡ, ಹರಿದಾಸ್, ಮತ್ತಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಪೊನ್ನಿಯನ್ ಸೆಲ್ವನ್-1(ತ): ಬೆ.10.05ಕ್ಕೆ, ರಾ.7.05ಕ್ಕೆ, ಕಾಂತಾರ (ಕ): ಮ.1.15ಕ್ಕೆ, ಸಂ.4.10ಕ್ಕೆ, ರಾ.10.15ಕ್ಕೆ.

ಸ್ಕ್ರೀನ್ 2 ಗುರುಶಿಷ್ಯರು (ಕ): ಸಂ.4ಕ್ಕೆ, ಗುಡ್‌ಬೈ (ಹಿಂ): ಮ.1.25ಕ್ಕೆ, ರಾ.7.10ಕ್ಕೆ, ವಿಕ್ರಂ ವೇದಾ (ಹಿಂ): ಸಂ.4.15ಕ್ಕೆ, ರೋರ್ಷ್ಯಾಚ್ (ಮ): ರಾ.10.05ಕ್ಕೆ.

ಸ್ಕ್ರೀನ್ 3 ಗುಡ್‌ಬೈ (ಹಿಂ): ಬೆ.10ಕ್ಕೆ, ಸ್ವಾತಿ ಮುತ್ಯಂ (ತೆ): ಮ.12.50ಕ್ಕೆ, ಟಿಕೆಟ್ ಆಫ್ ಪ್ಯಾರಡೈಸ್ (ಇಂ): ಮ.3.15ಕ್ಕೆ, ಸಂ.5.20ಕ್ಕೆ, ದಿ ಗೋಸ್ಟ್ (ತೆ): ರಾ.7.25ಕ್ಕೆ, ಗಾಡ್‌ಫಾದರ್ (ತೆ): ರಾ.10.10ಕ್ಕೆ.

ಸ್ಕ್ರೀನ್ 4 ಕಾಂತಾರ (ಕ): ಬೆ.10.10ಕ್ಕೆ, ಮ.1.05ಕ್ಕೆ, ರಾ.7.10ಕ್ಕೆ, ಪೊನ್ನಿಯನ್ ಸೆಲ್ವನ್-1(ತ): ಸಂ.4ಕ್ಕೆ, ತೋತಾಪುರಿ -1(ಕ): ರಾ.10.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1 ಕಾಂತಾರ (ಕ): ಬೆ.9.15ಕ್ಕೆ, ಮ.12.15ಕ್ಕೆ, ಮ.3.20ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ.

ಸ್ಕ್ರೀನ್ 2 ಕಾಂತಾರ (ಕ): ಬೆ.10.10ಕ್ಕೆ, ಮ.1.15ಕ್ಕೆ, ಸಂ.4.20ಕ್ಕೆ, ರಾ.7.25ಕ್ಕೆ, ರಾ.10.30ಕ್ಕೆ.

ಸ್ಕ್ರೀನ್ 3 ಗಾಡ್‌ಫಾದರ್ (ತೆ): ಬೆ.9.35ಕ್ಕೆ, ಮ.3.45ಕ್ಕೆ, ರಾ.10.20ಕ್ಕೆ, ದಿ ಗೋಸ್ಟ್ (ತೆ): ಮ.12.50ಕ್ಕೆ, ಗುರುಶಿಷ್ಯರು (ಕ): ರಾ.7ಕ್ಕೆ.

ಸ್ಕ್ರೀನ್ 4 ಪೊನ್ನಿಯನ್ ಸೆಲ್ವನ್ -1(ತ): ಬೆ.9.30ಕ್ಕೆ, ಮ.3.35ಕ್ಕೆ, ರಾ.10.10ಕ್ಕೆ, ತೋತಾಪುರಿ -1(ಕ): ಮ.12.45ಕ್ಕೆ, ವಿಕ್ರಮ್ ವೇದಾ (ಹಿಂ): ಸಂ.6.55ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821-2973519

ಸ್ಕ್ರೀನ್ 1 ದಿ ಚೆಕ್ ಮೇಟ್ (ಕ): ಬೆ.10ಕ್ಕೆ, ಗುರುಶಿಷ್ಯರು (ಕ): ಮ.12.50ಕ್ಕೆ, ಗಾಡ್ ಫಾದರ್ (ತೆ): ಸಂ.4ಕ್ಕೆ, ರಾ.9.50ಕ್ಕೆ, ದಿ ಗೋಸ್ಟ್ (ತೆ): ರಾ.7.05ಕ್ಕೆ.

ಸ್ಕ್ರೀನ್ 2 ಕಾಂತಾರ (ಕ): ಬೆ.9.55ಕ್ಕೆ, ಮ.12.55ಕ್ಕೆ, ಮ.3.55ಕ್ಕೆ, ಸಂ.6.55ಕ್ಕೆ, ರಾ.10ಕ್ಕೆ.

ಸ್ಕ್ರೀನ್ 3 ಕಾಂತಾರ (ಕ): ಬೆ.11.40ಕ್ಕೆ, ಮ.3.10ಕ್ಕೆ, ಪೊನ್ನಿಯನ್ ಸೆಲ್ವನ್-1 (ತ): ಸಂ.6.15ಕ್ಕೆ, ರಾ.9.30ಕ್ಕೆ.

ಸ್ಕ್ರೀನ್ 4 ಗುರುಶಿಷ್ಯರು (ಕ): ಬೆ.10.45ಕ್ಕೆ, ದಿ ಗೋಸ್ಟ್ (ತೆ): ಮ.3.45ಕ್ಕೆ, ವಿಕ್ರಮ್ ವೇದಾ (ಹಿಂ): ಸಂ.6.30ಕ್ಕೆ, ಕಾಂತಾರ (ಕ): ರಾ.9.40ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.8.35ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ, ತೋತಾಪುರಿ 1(ಕ): ಬೆ.10.30ಕ್ಕೆ, ಸಂ.4.25ಕ್ಕೆ, ರಾ.7.20ಕ್ಕೆ, ರಾ.10.15ಕ್ಕೆ, ಗುರು ಶಿಷ್ಯರು (ಕ): ಬೆ.10.15ಕ್ಕೆ, ಬ್ರಹ್ಮಾಸ್ತ್ರ (3ಡಿ)(ಹಿಂ): ಬೆ.11.30ಕ್ಕೆ, ಸಂ.6.30ಕ್ಕೆ, ರಾ.10ಕ್ಕೆ, ಪೊನ್ನಿಯನ್ ಸೆಲ್ವನ್-1(ತ): ಬೆ.8ಕ್ಕೆ, ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ನಾನೇ ವರುವೇನ್ (ತ): ಬೆ.10.50ಕ್ಕೆ, ಮ.1.30ಕ್ಕೆ, ರಾ.7.35ಕ್ಕೆ, ಅವತಾರ್ ರೀ ರಿಲೀಸ್ (ಇಂ): ಮ.3ಕ್ಕೆ, ಡೋಂಟ್ ವರಿ ಡಾರ್ಲಿಂಗ್ (ಇಂ): ಸಂ.4.10ಕ್ಕೆ, ವಿಕ್ರಮ್ ವೇದ (ಹಿಂ): ಬೆ.9ಕ್ಕೆ, ಬೆ.11.45ಕ್ಕೆ, ಮ.3.15ಕ್ಕೆ, ಸಂ.6.45ಕ್ಕೆ, ರಾ.10.15ಕ್ಕೆ, ಚುಪ್ (ಹಿಂ): ಮ.1.25ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಗಾಡ್‌ಫಾದರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಗಾಡ್‌ಫಾದರ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಗುರು ಶಿಷ್ಯರು (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಪುನ್ನಿಯಿನ್ ಸೆಲ್ವನ್ ಭಾಗ-1(ತ)	4 ಪ್ರದರ್ಶನಗಳು
ಸಂಗಂ	
ತೋತಾಪುರಿ (ಕ)	4 ಪ್ರದರ್ಶನಗಳು
ಲಿಡೋ	
ಗಾಡ್‌ಫಾದರ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಗಾಡ್‌ಫಾದರ್ (ಹಿ)	4 ಪ್ರದರ್ಶನಗಳು
ಪ್ರಭಾ	
ಘೋಸ್ಟ್ (ತೆ)	4 ಪ್ರದರ್ಶನಗಳು

ಕ್ರೀಡೆಯಿಂದ ಉತ್ತಮ ಆರೋಗ್ಯ ಸಾಧ್ಯ

ಯುವ ಮುಖಂಡ ಸುನೀಲ್ ಬೋಸ್ ಸಲಹೆ



ತಿ.ನರಸೀಪುರ, ಅ.11- ಯುವಕರು ದುಶ್ಚಟಗಳಿಂದ ದೂರವಿದ್ದು, ಉತ್ತಮ ಆರೋಗ್ಯಕ್ಕಾಗಿ ಕ್ರೀಡೆ, ವ್ಯಾಯಾಮ ಸೇರಿದಂತೆ ಇನ್ನಿತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ವಸತಿ ಯೋಜನೆ ಜಾಗೃತಿ ಸಮಿತಿ ಮಾಜಿ ಅಧ್ಯಕ್ಷ ಸುನೀಲ್ ಬೋಸ್ ಸಲಹೆ ನೀಡಿದರು.

ತಾಲೂಕಿನ ತಲಕಾಡು ಗ್ರಾಮದ ಬಿ.ಆರ್.ಫೌಂಡೇಷನ್ ವತಿಯಿಂದ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ನಡೆದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ ಸಮಾರೋಪ ಸಮಾರಂಭ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಸ್ತುತ ಯುವಕರು ಮಾದಕ, ಮದ್ಯಪಾನ, ಧೂಮಪಾನ ಚಟಗಳಿಗೆ ಬಲಿಯಾಗುತ್ತಿದ್ದಾರೆ. ಹೆತ್ತವರು ಮಕ್ಕಳ ಮೇಲೆ ಅನೇಕ ಕನಸುಗಳನ್ನು ಇಟ್ಟುಕೊಂಡಿರುತ್ತಾರೆ. ಪೋಷಕರ ಕನಸುಗಳಿಗೆ ತೊಂದರೆಯಾಗದಂತೆ ಯುವಕರು ಎಚ್ಚರ ವಹಿಸಬೇಕು ಎಂದರು.

ಯುವಕರು ಪಾಠದ ಜೊತೆಗೆ ಕ್ರೀಡೆ, ಕಲೆ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು. ಒಬ್ಬೊಬ್ಬರಲ್ಲಿ ಒಂದೊಂದು ಪ್ರತಿಭೆ ಇರುತ್ತದೆ. ಅದನ್ನು ವೇದಿಕೆ ಹಾಗೂ ಆಟೋಟಗಳಲ್ಲಿ ಪ್ರದರ್ಶಿಸಬೇಕು. ಕೊರೊನಾ ಸಂದರ್ಭ ಕ್ರೀಡಾ ಚಟುವಟಿಕೆ ಇಲ್ಲದ ಪರಿಣಾಮ ರೋಗ ರುಜಿನ ಹೆಚ್ಚಾಗಿತ್ತು. ಹಾಗಾಗಿ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಮೂಲಕ ಯುವಕರು ಮಾನಸಿಕ ಹಾಗೂ ದೈಹಿಕವಾಗಿ ಸಬಲರಾಗಬೇಕು ಎಂದು ಕರೆ ನೀಡಿದರು.

ಪುರಸಭಾಧ್ಯಕ್ಷ ಎಸ್.ಮದನ್‌ರಾಜ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ವೈದ್ಯಕೀಯ ವಿಭಾಗದ ಅಧ್ಯಕ್ಷ ಡಾ.ಪ್ರದೀಪ್, ಪುರಸಭೆ ಸದಸ್ಯ ಬಾದಾಮಿ ಮಂಜು, ಹೊಳೆಸಾಲು ಗ್ರಾಪಂ ಅಧ್ಯಕ್ಷ ಪರಮೇಶ್, ಮುಖಂಡ ಮಾಲಂಗಿ ಶಿವಸ್ವಾಮಿ, ಕುಕ್ಕೂರು ಗಣೇಶ್, ಎಎಸ್‌ಐ ರಂಗಸ್ವಾಮಿ, ಶಾಲೆ ಮುಖ್ಯೋಪಾಧ್ಯಾಯ ಜಿ.ಎಸ್.ಮಲ್ಲೇಶ್, ಎಂ.ಜಿ.ಮನೋಜ್ ಕುಮಾರ್, ಟಿ.ಎಸ್.ಮಹೇಂದ್ರ, ರಂಜನ್, ಸಿದ್ಧಾರ್ಥ, ಅಪೂರ್ವ ಚಕ್ರವರ್ತಿ ಸೇರಿದಂತೆ ಬಿ.ಆರ್.ಫೌಂಡೇಷನ್ ಸಂಘದ ಪದಾಧಿಕಾರಿಗಳು ಹಾಜರಿದ್ದರು.

ವಿಜೇತ ತಂಡಗಳ ವಿವರ: ಕೊಳ್ಳೇಗಾಲ ಕೆಪಿ ಬಾಯ್ಸ್ ತಂಡ ಫೈನಲ್ ಪಂದ್ಯ ಗೆದ್ದು ಟ್ರೋಫಿಯೊಂದಿಗೆ 50 ಸಾವಿರ ರೂ. ಪಡೆದರೆ, ತಲಕಾಡಿನ ಬಿಆರ್‌ಸಿ ತಂಡ ರನ್ನರ್ ಅಪ್ ಸ್ಥಾನದೊಂದಿಗೆ ಟ್ರೋಫಿ ಹಾಗೂ 25 ಸಾವಿರ ರೂ. ಪಡೆಯಿತು. ಸರಣಿ ಶ್ರೇಷ್ಠ ಪ್ರಶಸ್ತಿಯನ್ನು ತಲಕಾಡಿನ ಪ್ರಶಾಂತ್, ಪಂದ್ಯ ಶ್ರೇಷ್ಠ ಪ್ರಶಸ್ತಿಯನ್ನು ಕೆಪಿ ಬಾಯ್ಸ್ ತಂಡದ ಇಲ್ಲು ಪಡೆದರು. ಫೈನಲ್‌ನಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ತಲಕಾಡು ತಂಡದ ಆಟಗಾರ ಸಂತೋಷ್‌ಗೆ ಡಾ.ಪ್ರದೀಪ್ ವೈಯಕ್ತಿಕ ನಗದು ಬಹುಮಾನ ನೀಡಿದರು.

ಅಧಿಕ ರಸಾಯನಿಕ ಗೊಬ್ಬರ, ಕ್ರಿಮಿನಾಶಕ ಬಳಕೆಯಿಂದ ಆಹಾರವೇ ವಿಷಕಾರಿ!!

ಎಚ್ಚರವಹಿಸದಿದ್ದರೆ ಮನುಷ್ಯನ ಬದುಕು ನರಕಮಯವಾಗುವ ಅತೀ ಭಯಾನಕ ಪರಿಸ್ಥಿತಿ

ಮೋಹನ್ ಕಾಯಕ

ಮೈಸೂರು, ಅ.11– ಹೆಚ್ಚೆಚ್ಚು ಬೆಳೆ ಬೆಳೆಯಬೇಕೆಂಬ ಬಯಕೆ, ಅಧಿಕ ಹಣ ಸಂಪಾದಿಸುವ ತವಕದಲ್ಲಿ ಅತಿಯಾದ ರಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕಗಳ ಬಳಕೆಯಿಂದ ಮನುಷ್ಯನ ಆರೋಗ್ಯ ಸ್ಥಿತಿ ಚಿಂತಾಜನಕವಾಗುತ್ತಿದೆ...!

ಎಷ್ಟೇ ತಿಂದರೂ ದೈಹಿಕ ನಿಶ್ಯಕ್ತಿ, ಆಹಾರ ಪದಾರ್ಥಗಳಿಂದಲೇ ಅನಾರೋಗ್ಯ, ಔಷಧಿಯಂತೆ ಕೆಲಸ ಮಾಡಬೇಕಾದ ಆಹಾರ ಪದಾರ್ಥಗಳಿಂದಲೇ ನಾನಾ ಕಾಯಿಲೆಗಳು ಬರುತ್ತಿರುವುದಕ್ಕೆ ರಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕಗಳ ಬಳಕೆ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವುದು ಮುಖ್ಯ ಕಾರಣವಾಗಿದೆ. ರಸಾಯನಿಕ ಗೊಬ್ಬರಗಳಾದ ಯೂರಿಯಾ, ಡಿಎಪಿ, ಎಂಒಪಿ, ಎಸ್‌ಎಸ್‌ಪಿ, ಎಸ್‌ಓಪಿ, ಪೀಡೆನಾಶಕಗಳಲ್ಲಿ (ಕ್ರಿಮಿನಾಶಕಗಳು) ಕಳೆನಾಶಕಗಳು, ಶಿಲೀಂದ್ರ ನಾಶಕಗಳು, ಕೀಟನಾಶಕಗಳ ವಿಪರೀತ ಬಳಕೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಲೇ ಇದೆ. ಇದರಿಂದ ಆಹಾರ ಪದಾರ್ಥಗಳು ವಿಷಮಯವಾಗುತ್ತಿದ್ದು, ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ.

ಅತಿಯಾದ ಯೂರಿಯಾ ಬಳಕೆ: ವರ್ಷದಿಂದ ವರ್ಷಕ್ಕೆ 'ಯೂರಿಯಾ' ಬಳಕೆ ಪ್ರಮಾಣ ಹೆಚ್ಚಾಗುತ್ತಲೇ ಇದೆ. ಮೈಸೂರು ಜಿಲ್ಲೆಯಲ್ಲಿಯೇ 2019–20ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಮಳೆ ಅವಧಿ ಸೇರಿ ಒಟ್ಟು 48,613.7 ಮೆಟ್ರಿಕ್ ಟನ್ ಯೂರಿಯಾ ಬಳಕೆ ಮಾಡಲಾಗಿತ್ತು. 2020–21ನೇ ಸಾಲಿನಲ್ಲಿ 54,960 ಮೆಟ್ರಿಕ್ ಟನ್(6,347 ಮೆಟ್ರಿಕ್ ಟನ್ ಹೆಚ್ಚಳ) ಯೂರಿಯಾ ಬಳಕೆಯಾದರೆ, 2021–22ನೇ ಸಾಲಿನಲ್ಲಿ 60,820 ಮೆಟ್ರಿಕ್ ಟನ್(5,860 ಮೆಟ್ರಿಕ್ ಟನ್ ಮತ್ತೆ ಹೆಚ್ಚಳ) ಬಳಸಲಾಗಿದೆ. 2022–23ನೇ ಸಾಲಿನ ಮುಂಗಾರು ಅವಧಿಯಲ್ಲೇ 29,505 ಮೆಟ್ರಿಕ್ ಟನ್ ಯೂರಿಯಾ ವಿತರಣೆಯಾಗಿದ್ದು, ಇನ್ನೂ ಹಿಂಗಾರು ಮಳೆ ಅವಧಿ ಮುಗಿಯುವುದರೊಳಗೆ ಕಳೆದ ವರ್ಷಕ್ಕಿಂತ ಇನ್ನಷ್ಟು ಜಾಸ್ತಿ ಬಳಕೆಯಾಗುವ ಸಾಧ್ಯತೆಗಳಿವೆ.

ಹಾಗೆಯೇ 'ಡಿಎಪಿ' 2019–20ರಲ್ಲಿ 14,665.6 ಮೆಟ್ರಿಕ್ ಟನ್, 2020–21ರಲ್ಲಿ 17,460 ಮೆಟ್ರಿಕ್ ಟನ್, 2021–22ರಲ್ಲಿ 14,464 ಮೆಟ್ರಿಕ್ ಟನ್ ಹಾಗೂ ಪ್ರಸಕ್ತ ಸಾಲಿನಲ್ಲಿ ಇಲ್ಲಿಯವರೆಗೆ 10,469 ಮೆಟ್ರಿಕ್ ಟನ್ ವಿತರಣೆಯಾಗಿದೆ. 'ಎಂಒಪಿ' ರಸಾಯನಿಕ ಗೊಬ್ಬರವನ್ನು 2019–20ರಲ್ಲಿ 15,255.1 ಮೆಟ್ರಿಕ್ ಟನ್, 2020–21ರಲ್ಲಿ 18,806 ಮೆಟ್ರಿಕ್ ಟನ್, 2021–22ರಲ್ಲಿ 9,678 ಮೆಟ್ರಿಕ್ ಟನ್ ಹಾಗೂ ಪ್ರಸಕ್ತ ಸಾಲಿನಲ್ಲಿ ಇಲ್ಲಿಯವರೆಗೆ 5,982 ಮೆಟ್ರಿಕ್ ಟನ್ ವಿತರಣೆ ಮಾಡಲಾಗಿದೆ.

ಕ್ರಿಮಿನಾಶಕಗಳ(ಪೀಡೆನಾಶಕಗಳು) ಬಳಕೆಯೂ ಹೆಚ್ಚು: ರಸಾಯನಿಕ ಗೊಬ್ಬರಗಳ ಬಳಕೆಯ ಜೊತೆಗೆ ಕ್ರಿಮಿನಾಶಕಗಳ ಬಳಕೆಯೂ ಕಡಿಮೆಯಿಲ್ಲ. **ಕಳೆನಾಶಕಗಳಾದ** 'ಗ್ಲೈಫೋಸೇಟ್', 'ಪ್ರೆಟಿಲಾಕ್ಲೋರ್', 'ಬಿಸ್ಪೈರಿಬಾಕ್ ಸೋಡಿಯಂ(ನಾಮಿನಿ ಗೋಲ್ಡ್)', '2.4 ಸೋಡಿಯಂ ಸಾಲ್ಟ್', 'ಅಟ್ರಾಜಿನ್', 'ಮೆಟ್ರಿಬುಜಿನ್' ಹಾಗೂ 'ಲೌಡಿಸ್' ಕಳೆನಾಶಕವನ್ನು 2017–18ರಲ್ಲಿ 1,42,680 ಲೀಟರ್ ಪೂರೈಕೆ ಮಾಡಿದ್ದರೆ, 2018–19ರಲ್ಲಿ 1,43,280 ಲೀಟರ್, 2019–20ರಲ್ಲಿ 1,43,400 ಲೀಟರ್, 2020–21ರಲ್ಲಿ 1,45,560 ಲೀಟರ್ ಹಾಗೂ 2021–22ನೇ ಸಾಲಿನಲ್ಲಿ 1,46,400 ಲೀಟರ್ ಪೂರೈಕೆಯಾಗಿದೆ.

ಶಿಲೀಂದ್ರನಾಶಕಗಳಾದ 'ಕಾರ್ಬನ್ ಡೈಜಿಂ', 'ಮ್ಯಾಂಕೋಜೆಬ್', 'ಹೆಕ್ಸಾ ಕೋನಾಜೋಲ್', 'ಟ್ರೈಸೈಕ್ಲೋಜೋಲ್', 'ಪ್ರೋಪಿಕೋನಜೋಲ್', 'ಪ್ಯಾರಾಕ್ಲೋಸ್ಟ್ರೋಬಿನ್ +ಮೆಟಿರಾಮ್', 'ಡೈಮೀಥೋಮಾರ್ಫ್ (ಅಕ್ರೋಬ್ಯಾಟ್)' ಹಾಗೂ 'ಕಾಪರ್ ಆಕ್ಸಿಕ್ಲೋರೈಡ್' ಎಂಬ ಶಿಲೀಂದ್ರನಾಶಕಗಳನ್ನು 2017–18ರಲ್ಲಿ 94,920 ಲೀಟರ್ ಪೂರೈಕೆ ಮಾಡಿದ್ದರೆ, 2018–19ರಲ್ಲಿ 93,120 ಲೀಟರ್, 2019–20ರಲ್ಲಿ 92,640 ಲೀಟರ್, 2020–21ರಲ್ಲಿ 88,260 ಲೀಟರ್ ಹಾಗೂ 2021–22ನೇ ಸಾಲಿನಲ್ಲಿ 83,520 ಲೀಟರ್ ಪೂರೈಕೆಯಾಗಿದೆ. **ಕೀಟನಾಶಕಗಳಾದ** 'ಇಮಿಡಾಕ್ಲೋಪ್ರೀಡ್', 'ಕ್ಲೋರ್ ಪೈರೀಫಾಸ್', 'ಕ್ಲೋರ್ ಪೈರಿಫಾಸ್', 'ಮಾನೋಕ್ರೋಫಾಸ್', 'ಡೈಮೀಥೋಯೇಟ್', 'ಎಮಾಮೆಕ್ಟಿನ್ ಬೆಂಜೋಯೇಟ್', 'ಫಿಪ್ರೋನಿಲ್ 0.4ಜಿ ಹಾಗೂ ಕಾರ್ಬೋಫ್ಯೂರಾನ್ 3 ಎಂಬ ಕೀಟನಾಶಕಗಳನ್ನು 2017–18ರಲ್ಲಿ 2,01,600 ಲೀಟರ್ ಪೂರೈಕೆ ಮಾಡಿದ್ದರೆ, 2018–19ರಲ್ಲಿ 2,12,400 ಲೀಟರ್, 2019–20ರಲ್ಲಿ 2,05,200 ಲೀಟರ್, 2020–21ರಲ್ಲಿ 1,98,000 ಲೀಟರ್ ಹಾಗೂ 2021–22ನೇ ಸಾಲಿನಲ್ಲಿ 1,96,800 ಲೀಟರ್ ಪೂರೈಕೆಯಾಗಿದೆ.

ಮಣ್ಣಿನ ಪರೀಕ್ಷೆ ಮುಖ್ಯ: ಬೆಳೆಯುವ ಬೆಳೆಗಳಿಗೆ ಅನುಗುಣವಾಗಿ ಮಣ್ಣಿನ ಪರೀಕ್ಷೆ ಮಾಡಿಸಬೇಕು. ಮಣ್ಣಿನಲ್ಲಿ ಯಾವ್ಯಾವ ಅಂಶಗಳಿವೆ ಎಂಬುದನ್ನು ತಿಳಿದುಕೊಳ್ಳಬೇಕು. ಪೊಟ್ಯಾಶಿಯಂ, ಸಾರಜನಕದ ಪ್ರಮಾಣಕ್ಕೆ ಅನುಗುಣವಾಗಿ ರಸಾಯನಿಕ ಗೊಬ್ಬರ ಬಳಕೆ ಮಾಡಬೇಕು. ಈಗ ಎತ್ತುಗಳ ಬದಲು ಟ್ರಾಕ್ಟರ್‌ಗಳಿಂದ ಉಳುಮೆ ಮಾಡಿಸಿ, ಸಾಲು ಹೊಡೆದು ಬಿತ್ತನೆ ಮಾಡುತ್ತಾರೆ. ಉಳುಮೆಗೆ ಎತ್ತುಗಳ ಬಹಳ ಕಡಿಮೆ ಪ್ರಮಾಣ ತುಂಬಾ ಕಡಿಮೆ ಇದೆ. ಧನ–ಕರುಗಳ ಕಡಿಮೆಯಾಗುತ್ತಿರುವ ಜೊತೆಗೆ ಸಾವಯವ ಗೊಬ್ಬರದ ಪ್ರಮಾಣವೂ ಕಡಿಮೆಯಾಗುತ್ತಿದೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಬಿ.ಎಸ್.ಚಂದ್ರಶೇಖರ್ ತಿಳಿಸಿದರು.

ಕೊಟ್ಟಿಗೆ ಗೊಬ್ಬರ ಮಾರಾಟ: ಮೈಸೂರು ಭಾಗದಲ್ಲಿ ಹಾಲಿಗಾಗಿ ಎಂದು ಇಟ್ಟುಕೊಂಡಿರುವ ಹಸುಗಳಿಂದ ಬರುವ ಕೊಟ್ಟಿಗೆ ಗೊಬ್ಬರವನ್ನು ಕೊಡಗು, ಕೇರಳಕ್ಕೆ ಮಾರಾಟ ಮಾಡಲಾಗುತ್ತಿದೆ. ತಮ್ಮ ಜಮೀನಿನ ಬಳಕೆಗೆಂದು ಇಟ್ಟುಕೊಳ್ಳುವುದೇ ಇಲ್ಲ. ರಾಗಿ ಬೆಳೆಯುವ ಪ್ರದೇಶಗಳಲ್ಲಿ ಬಹುತೇಕರು ಕೊಟ್ಟಿಗೆ ಗೊಬ್ಬರವನ್ನು ಬಳಕೆ ಮಾಡುವುದೇ ಇಲ್ಲ. ಅದಕ್ಕೆ ಡಿಎಪಿ, ಯೂರಿಯಾ ಬಳಕೆ ಮಾಡುತ್ತಾರೆ. ಕಬ್ಬು ಬೆಳೆಯುವ ಪ್ರದೇಶದಲ್ಲಿ ಸ್ವಲ್ಪ ಕೊಟ್ಟಿಗೆ ಗೊಬ್ಬರ ಬಳಕೆ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು.



ಶಿಪಾರಸ್ಸಿಗಿಂತ ಹೆಚ್ಚಿನ ಬಳಕೆಯಿಂದ ತೊಂದರೆ...

ಸಂಶೋಧನಾ ಆಧಾರದ ಮೇಲೆ ಸಮತೋಲನ ರಸಾಯನಿಕ ಗೊಬ್ಬರಗಳ ಬಳಕೆ, ಶಿಪಾರಸ್ಸಿನಂತೆ ಕ್ರಿಮಿನಾಶಕಗಳ ಬಳಕೆಯಿಂದ ಹೆಚ್ಚು ಸಮಸ್ಯೆಗಳು ಉಂಟಾಗುವುದಿಲ್ಲ. ಆದರೆ, ಶಿಪಾರಸ್ಸು ಮಾಡಿದ್ದಕ್ಕಿಂತ ಹೆಚ್ಚಾಗಿ ರಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕಗಳನ್ನು ಬಳಕೆ ಮಾಡಿದರೆ, ಆಹಾರ ಪದಾರ್ಥಗಳ ಮೇಲೆ ಪರಿಣಾಮ ಬೀರುತ್ತದೆ ಎಂದು ನಾಗನಹಳ್ಳಿ ಸಾವಯವ ಕೃಷಿ ಸಂಶೋಧನಾ ಕೇಂದ್ರದ ಬೇಸಾಯ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಸಿ.ರಾಮಚಂದ್ರ ಹೇಳಿದರು. ರೈತರ ಬಳಿ ಸಾವಯವ ಗೊಬ್ಬರ ಲಭ್ಯತೆ ಕಡಿಮೆಯಾಗುತ್ತಿದೆ. ಅಂಗಡಿಗಳಲ್ಲಿ ಯಾವುದೇ ತೊಂದರೆ ಇಲ್ಲದೆ ರಸಾಯನಿಕ ಗೊಬ್ಬರಗಳು ಸಿಗುತ್ತದೆ ಹಾಕಿಬಿಡೋಣ ಎಂಬ ಮನಸ್ಥಿತಿ ಬಂದು ಬಿಟ್ಟಿದೆ. ಹೀಗಾಗಿ ಯೂರಿಯಾ ಇನ್ನಿತರೆ ರಸಾಯನಿಕ ಗೊಬ್ಬರಗಳ ಬಳಕೆ ಪ್ರಮಾಣ ಹೆಚ್ಚಾಗುತ್ತಿದೆ. ಸಂಶೋಧನೆ ಪ್ರಕಾರ ಒಂದು ಎಕರೆಗೆ ಸುಮಾರು 4–5 ಟನ್ ಸಾವಯವ ಗೊಬ್ಬರ ಬಳಕೆ ಮಾಡಬೇಕು ಎಂದಿದೆ. ಆದರೆ, ಸಾವಯವ ಗೊಬ್ಬರವನ್ನು ಬಿಟ್ಟು ರಸಾಯನಿಕ ಗೊಬ್ಬರದ ಮೇಲೆಯೇ ಹೆಚ್ಚಿನ ಅವಲಂಬನೆಯಾಗುತ್ತಿದ್ದಾರೆ. ಹೆಚ್ಚಿನ ರಸಾಯನಿಕ ಗೊಬ್ಬರ ಬಳಕೆಯಿಂದ ಮಣ್ಣಿನ ಫಲವತ್ತತೆ ಕಡಿಮೆಯಾಗುತ್ತದೆ. ಸೂಕ್ಷ್ಮಜೀವಿಗಳು ನಾಶವಾಗುವುದರ ಜೊತೆಗೆ ಇಳುವರಿಯಲ್ಲೂ ವ್ಯತ್ಯಾಸಗಳಾಗುತ್ತವೆ ಎಂದರು.



"ಅತೀಯಾದ ಯೂರಿಯಾ ಬಳಕೆ ಮಾಡುವುದರಿಂದ ಯೂರಿಯಾ ಅಂಶ ಭೂಮಿಯಲ್ಲಿ ಸೇರಿ ಆಹಾರ ಪದಾರ್ಥಗಳಲ್ಲಿಯೂ ಇರುವುದು ಕಂಡುಬರುತ್ತಿದೆ. ಆಹಾರದಲ್ಲಿರುವ ಯೂರಿಯಾ ಅಂಶ ಮಕ್ಕಳಲ್ಲಿ ಬ್ಲೂಬೇಬಿ(ರಕ್ತಹಿನತೆ, ಜಾಂಡಿಸ್ ಇತರೆ) ಕಾಯಿಲೆಗೆ ಕಾರಣವಾಗುತ್ತದೆ. ಅಮೋನಿಕಲ್ ಫಾರಂ ಆಫ್ ನೈಟ್ರೋಜನ್ ಹಾಗೂ ನೈಟ್ರೇಟ್ ಫಾರಂ ಆಫ್ ನೈಟ್ರೋಜನ್ ಎಂಬ ಯೂರಿಯಾ ಇದ್ದು, ಅದರಲ್ಲಿ ನೈಟ್ರೇಟ್ ಫಾರಂ ಆಫ್ ನೈಟ್ರೋಜನ್ ಯೂರಿಯಾ ಹರಿಯುವ ನೀರಿನಲ್ಲಿ ಸೇರಿ, ಅಂತರ್ಜಲಕ್ಕೆ ಬೆರೆತು ನೀರು ಕೂಡ ಕಲುಷಿತವಾಗುತ್ತದೆ.

– ಬಿ.ಎಸ್.ಚಂದ್ರಶೇಖರ್, ಜಂಟಿ ನಿರ್ದೇಶಕ, ಕೃಷಿ ಇಲಾಖೆ

ಮೈಸೂರಲ್ಲಿ ಮುಂದುವರೆದ ಪ್ರವಾಸಿಗರ ಜಾತ್ರೆ

ಪ್ರವಾಸಿ ತಾಣಗಳಲ್ಲಿ ಸಂಭ್ರಮದ ವಾತಾವರಣ



ಮೈಸೂರು–ಬನ್ನೂರು ಮುಖ್ಯ ರಸ್ತೆಯ ಹೆಚ್.ಡಿ.ದೇವೇಗೌಡ ವೃತ್ತದ ದ್ವಾರದ ದೀಪಗಳು ಒಂದು ದಿನವೂ ಬೆಳಗಲಿಲ್ಲ.

ಮೈಸೂರು, ಅ.11(ಎಂಟಿವೈ)– ನವರಾತ್ರಿ ದೀಪಾಲಂಕಾರದಲ್ಲಿ ಸಾಂಸ್ಕೃತಿಕ ನಗರಿ ಮೈಸೂರಿನ ಸೌಂದರ್ಯವನ್ನು ಕಣ್ತುಂಬಿಕೊಳ್ಳಲು ಆಗಮಿಸುವ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಲೇ ಇದ್ದು, ಮಂಗಳವಾರ ಮೈಸೂರು ಮೃಗಾಲಯ ಸೇರಿದಂತೆ ಪ್ರಮುಖ ಪ್ರವಾಸಿ ತಾಣಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿದ್ದರು.

ಜಂಬೂ ಸವಾರಿ ನಂತರವೂ ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆಯಲ್ಲಿ ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗಿತ್ತು. ನೆರೆ ರಾಜ್ಯ ಹಾಗೂ ಜಿಲ್ಲೆಗಳಿಂದ ಪ್ರವಾಸಿಗರು ಆಗಮಿಸಿದ್ದರು.

ಈದ್ ಮಿಲಾದ್ ಹಬ್ಬ ಹಾಗೂ ಬೆಟ್ಟದ ತೆಪ್ಪೋತ್ಸವದ ಹಿನ್ನೆಲೆಯಲ್ಲಿ ಮೈಸೂರು ಮೃಗಾಲಯ, ಕಾರಂಜಿ ಕೆರೆ, ಉದ್ಯಾನ ವನಕ್ಕೆ ಮಂಗಳವಾರದ ರಜೆ ರದ್ದು ಮಾಡಲಾಗಿತ್ತು. ಹಾಗಾಗಿ ಬೆಳಗಿನಿಂದಲೇ ಮೃಗಾಲಯಕ್ಕೆ ಭಾರೀ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡಿದ್ದರು. ಸಾಮಾನ್ಯ ದಿನಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಮೃಗಾಲಯಕ್ಕೆ ಇಂದು ಭೇಟಿ ನೀಡಿದ್ದರು.

ಅರಮನೆ ವೀಕ್ಷಣೆ: ದಸರಾ ಹಿನ್ನೆಲೆಯಲ್ಲಿ ವಾರದ ಹಿಂದೆ ವಿವಿಧ ಧಾರ್ಮಿಕ ಕಾರ್ಯದೊಂದಿಗೆ ದಸರಾ ಗಜಪಡೆಗೆ ಆಶ್ರಯ ನೀಡಿದ್ದ ಮೈಸೂರು ಅರಮನೆಗೆ ಬರುವವರ ಸಂಖ್ಯೆ ಹೆಚ್ಚಾಗಿತ್ತು. ನವರಾತ್ರಿ ದಿನಗಳಲ್ಲಿ 15ರಿಂದ 22 ಸಾವಿರ ಪ್ರವಾಸಿಗರು ಮೈಸೂರು ಅರಮನೆಗೆ ಭೇಟಿ ನೀಡಿದ್ದರು. ಮಂಗಳವಾರ 31 ವಿದೇಶಿಗರು, 859 ವಿದ್ಯಾರ್ಥಿಗಳು, 1290 ಮಕ್ಕಳು ಸೇರಿದಂತೆ 10,823 ಅರಮನೆ ವೀಕ್ಷಿಸಿದ್ದಾರೆ.

ಬೆಟ್ಟಕ್ಕೆ ಭಕ್ತರ ದಂಡು: ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟದಲ್ಲಿ ಅ.14ರವರೆಗೆ ವಿವಿಧ ಪೂಜಾ ಕಾರ್ಯ ಜರುಗುವ ಹಿನ್ನೆಲೆಯಲ್ಲಿ ಮಂಗಳವಾರ ಬೆಳಗ್ಗಿನಿಂದ ಚಾಮುಂಡಿ ಬೆಟ್ಟಕ್ಕೆ ಆಗಮಿಸುವ ಭಕ್ತರ ಸಂಖ್ಯೆ ಹೆಚ್ಚಾಗಿತ್ತು. ದೇವಿಯ ಮಹಾರಥೋತ್ಸವ ಜರುಗಿ ಎರಡು ದಿನ ಕಳೆದಿದ್ದರೂ ಭಕ್ತರು ರಥಕ್ಕೆ ಪೂಜೆ ಸಲ್ಲಿಸುತ್ತಿದ್ದಾರೆ. ಸಂಜೆ ತೆಪ್ಪೋತ್ಸವ ನೆರವೇರಿದ ಹಿನ್ನೆಲೆಯಲ್ಲಿ ದೇವಾಲಯ ಹಾಗೂ ದೇವಿಕೆರೆಗೆ ಬೆಳಗ್ಗಿನಿಂದಲೇ ಭಕ್ತರು ಪೂಜೆ ಸಲ್ಲಿಸುತ್ತಿದ್ದರು.

ದೀಪಾಲಂಕಾರ ಆಕರ್ಷಣೆ: ದೀಪಾಲಂಕಾರ ಎರಡು ದಿನ ವಿಸ್ತರಣೆ ಮಾಡಿದ್ದರೂ, ಕೆಲವೆಡೆ ಬಲ್ಬ್‌ಗಳನ್ನು ತೆರವುಗೊಳಿಸಲಾಗಿದೆ. ಮೊದಲು ಘೋಷಿಸಿದ್ದಂತೆ ಸೆ.10ರಂದೇ ದೀಪಾಲಂಕಾರ ಅಂತ್ಯಗೊಳ್ಳಲಿದೆ ಎಂದು ತಿಳಿದು ಕೆಲ ಗುತ್ತಿಗೆದಾರರು ಬಲ್ಬ್‌ಗಳನ್ನು ಬಿಚ್ಚಿದ್ದಾರೆ.

ಒಂದು ದಿನವೂ ಬೆಳಗದ ದ್ವಾರ: ಮೈಸೂರು–ಬನ್ನೂರು ಮುಖ್ಯ ರಸ್ತೆ ದೇವೇಗೌಡ ಜಂಕ್ಷನ್ ಬಳಿ ಅಳವಡಿಸಿದ್ದ ದ್ವಾರಕ್ಕೆ ದಸರಾ ಮಹೋತ್ಸವ–2022 ದೀಪಾಲಂಕಾರ ಮಾಡಲಾಗಿತ್ತು. ನವರಾತ್ರಿ ಆರಂಭವಾಗಿ ನಾಲ್ಕು ದಿನದ ನಂತರ ದ್ವಾರ ನಿರ್ಮಿಸಿದರೂ, ಒಂದೇ ಒಂದು ದಿನವೂ ದ್ವಾರಕ್ಕೆ ಅಳವಡಿಸಿರುವ ದೀಪಗಳು ಬೆಳಗಲೇ ಇಲ್ಲ. ದ್ವಾರದ ದೀಪಾಲಂಕಾರ ನೋಡಲೆಂದೇ ಸ್ಥಳೀಯರು ಬಯಸಿದರೂ ದೀಪ ಬೆಳಗದ್ದಕ್ಕೆ ಬೇಸರ ವ್ಯಕ್ತಪಡಿಸಿದ್ದಾರೆ.

ಹೆಸರು ಬದಲಾವಣೆ

ಆದಿತ್ಯ ಬಿನ್ ರವೀಂದ್ರ ಶೆಟ್ಟಿ # ಜೀಡಿನ ಮನೆ, ಮರತೂರು, ಮೊಳಹಳ್ಳಿ ಗ್ರಾಮ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ, ಕರ್ನಾಟಕ- 576222 ರಲ್ಲಿ ವಾಸವಾಗಿರುವ ನಾನು, ನನ್ನ ಹೆಸರನ್ನು ಆದಿತ್ಯ ದಿಂದ ಆದಿತ್ಯ ಶೆಟ್ಟಿ ಯಾಗಿ ಬದಲಿಸುತ್ತಿದ್ದೇನೆ ಎಂದು ನೋಟರಿ ಎ.ಎಮ್.ಸುಮಿತ್ರಾ, ಬಿ.ಎ, ಎಲ್.ಎಲ್.ಬಿ, ದಾಖಲು ಸಂಖ್ಯೆ 7974 ಮೈಸೂರು, ಇವರ ಮುಂದೆ ಪ್ರಮಾಣಿಕರಿಸುತ್ತೇನೆ.

ಸಹಿ/-ಆದಿತ್ಯ ಶೆಟ್ಟಿ

ಮೈಸೂರು ಮಿತ್ರ 43

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅವಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

IN THE COURT OF THE HON'BLE I ADDL. DISTRICT & SESSIONS JUDGE AT MYSURU

R.A.N 265/2018

Appellant : Smt. Mahadevamma

V/s

Respondents : Sri Yathish Chandra and another

2. Sri Harshith Kumar, S/o Late Shivakumar, Aged about 26 years, R/at Door No.2484/1, D-4/2A, 3rd Main, 5th Cross, Paduvarahalli, Vinayakanagara, Mysuru.

Whereas, the above Appeal has been filed by the Appellant against the Respondents for challenging the order passed in I.A. No.4 by the Hon'ble First Addl. Senior Civil Judge at Mysuru in O.S. No.779/2014 dated 27-04-2018. The Respondent No.2 is intentionally avoiding to receive the summons issued by this Hon'ble Court, as such the Respondent No.2 is hereby directed to appear before this Hon'ble Court either in person or through your Counsel on 17/10/2022 at 11.00 am failure of which you will be placed ex-parte and the matter will be proceed with an will be heard in your absence.

Given under my hand and seal of the Court on this the 16th day of September, 2022 at Mysuru.

Sd/- H.P. Darshan Shetty, BAL, LLB, LLM.
Advocate for Appellant,
No.1533, N.T.Street,
K.R.Mohalla, Mysuru,
Cell: 9590807007

By order of the Court.
Sd/- Chief Administritive officer,
District & Sessions Court at Mysuru.

ಉತ್ತರ ಕ್ರಿಯಾದಿ ಕಾರ್ಯ ಆಹ್ವಾನ ಪತ್ರಿಕೆ



ಕು॥ ಭಕ್ತಿ ರಮೇಶ್

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಹೊಸ ಉಂಡವಾಡಿ ಗ್ರಾಮದಲ್ಲಿ ವಾಸವಾಗಿರುವ

ಶ್ರೀಮತಿ ಸರಸ್ವತಿ

ಉಪಕಾರ್ಯದರ್ಶಿ (ಆಡಳಿತ), ಪಂಚಾಯತ್‌ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ, (ಮಂಡ್ಯ ಜಿಲ್ಲೆ.)

ಇವರು ಮಾಡುವ ವಿಜ್ಞಾಪನೆಗಳು

ದಿನಾಂಕ **02–10–2022ನೇ ಭಾನುವಾರ**ದಂದು ನನ್ನ ಮಗಳು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇನೆ. ತತ್ಸಂಬಂಧವಾದ ಉತ್ತರ ಕ್ರಿಯಾದಿ ಕಾರ್ಯವನ್ನು **ದಿನಾಂಕ 13–10–2022ನೇ ಗುರುವಾರ**ದಂದು ಬೆಳಿಗ್ಗೆ 11–00 ಗಂಟೆಗೆ ನಮ್ಮ ಸ್ವಗ್ರಾಮದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಸರಸ್ವತಿ

ಉಪಕಾರ್ಯದರ್ಶಿ (ಆಡಳಿತ), ಪಂಚಾಯತ್‌ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ, ಮಂಡ್ಯ ಜಿಲ್ಲೆ.

ಪುಟ್ಟಲಕ್ಷ್ಮಮ್ಮ ಕೋಂ ಲೇ॥ ಕಂಟ್ರಾಕ್ಟರ್ ಚನ್ನೇಗೌಡರು, ಹೊಸ ಉಂಡವಾಡಿ ಮತ್ತು ಕುಟುಂಬ ವರ್ಗದವರು.

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಕಡಕೊಳ, ಮೈಸೂರು ಜಿಲ್ಲೆ
Email id: itstaff_ulb_kadakola@yahoo.com
Tele phone no:0821-2970319

ಸಂ:ಪಪಕ/ತಾ.ಶಾ/ಟೆ.ಪ್ರ/ಸಿ.ಆರ್ 01/2022–23 ದಿನಾಂಕ: 10.10.2022

ಟೆಂಡರ್ ಪ್ರಕಟಣೆ

(ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಮಾತ್ರ)

ಕಡಕೊಳ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 2022–23ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ, ಎಸ್.ಎಫ್.ಸಿ ಕುಡಿಯುವ ನೀರು ಅನುದಾನ ಮತ್ತು 15ನೇ ಹಣಕಾಸು ಯೋಜನೆಗಳಡಿ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ K.W-1ರ ನಿಯಮಗಳ ಅನ್ವಯ ಹಾಗೂ 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು https://eproc.karnataka.gov.in ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. **ಕಾಮಗಾರಿಗಳಲ್ಲಿ ಗರಿಷ್ಠ ಮೊತ್ತ ರೂ.15.00 ಲಕ್ಷ ಮತ್ತು ಇ.ಎಂ.ಡಿ ಯ ಗರಿಷ್ಠ ಮೊತ್ತ 37500.00 ಗಳು ಮತ್ತು ಕನಿಷ್ಠ ಮೊತ್ತ ರೂ.3.11 ಲಕ್ಷ ಮತ್ತು ಇ.ಎಂ.ಡಿ ಯ ಕನಿಷ್ಠ ಮೊತ್ತ ರೂ 7775.00 ಗಳಾಗಿರುತ್ತದೆ.** ಆಸಕ್ತಿಯುಳ್ಳ ಗುತ್ತಿಗೆದಾರರು https://eproc.karnataka.gov.in ನಿಂದ ಟೆಂಡರ್ ಷರತ್ತು ಹಾಗೂ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. **1)** ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕಡೆಯ ದಿ: 27.10.2022ರ ಸಂಜೆ 5.30 ಗಂಟೆಯವರೆಗೆ. **2)** ಟೆಂಡರ್ ತೆರೆಯುವ ದಿ: 29.10.2022 ಬೆಳಿಗ್ಗೆ 11.30 ಗಂಟೆಗೆ ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು.

ಸೂಚನೆ: 1. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಮತ್ತು ಇತರೆ ಬದಲಾವಣೆಗಳಿದ್ದಲ್ಲಿ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ. ಹೆಚ್ಚಿನ ವಿವರಗಳಿಗೆ ಟೆಂಡರ್‌ದಾರರು https://eproc.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/– ಶ್ರೀ ಬಿ.ಎಸ್ ಗಿರೀಶ್
ಆಡಳಿತಾಧಿಕಾರಿಗಳು
ಪಟ್ಟಣ ಪಂಚಾಯಿತಿ, ಕಡಕೊಳ

ಸಹಿ/– ಶ್ರೀ ಸಿ.ವೆಂಕಟೇಶ್
ಮುಖ್ಯಾಧಿಕಾರಿ
ಪಟ್ಟಣ ಪಂಚಾಯಿತಿ, ಕಡಕೊಳ

DIPR/DDMYS/MCA/555/2022-23

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಂಜನಗೂಡು
ಹುಲ್ಲಹಳ್ಳಿ ರಸ್ತೆ ನಂಜನಗೂಡು–571301
ದೂ: 08221-226309
ಇ–ಮೇಲ್:apmcnanjanagud@rediffmail.com,

ಸಂ.ಕೃಉಮಾಸ(ನಂ)/283/2022–23 ದಿನಾಂಕ: 11.10.2022

ಪ್ರಕಟಣೆ (2 ನೇ ಕರೆ)

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಂಜನಗೂಡು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಿರ್ಮಿಸಿರುವ 50 ಮೆ.ಟನ್ ಸಾಮರ್ಥ್ಯದ ವೇಬ್ರಿಡ್ಜ್ (ಎಲೆಕ್ಟ್ರಾನಿಕ್ ತೂಕದ ಯಂತ್ರವನ್ನು) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು 2004ರ ಪ್ರಕಾರ ಲೀವ್ ಅಂಡ್ ಲೈಸನ್ಸ್ ಆಧಾರದ ಮೇಲೆ ಟೆಂಡರ್–ಕಂ– ಬಹಿರಂಗ ಹರಾಜು ಮೂಲಕ ಹಂಚಿಕೆ ಮಾಡಲು ಅರ್ಹ ಪೇಟೆ ಕಾರ್ಯಕರ್ತರು ಹಗೂ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಎಲೆಕ್ಟ್ರಾನಿಕ್ ತೂಕದ ಯಂತ್ರದ ವಿವರ: ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಿರ್ಮಿಸಿರುವ 50 ಮೆ.ಟನ್ ಸಾಮರ್ಥ್ಯದ ವೇಬ್ರಿಡ್ಜ್ (ಎಲೆಕ್ಟ್ರಾನಿಕ್ ತೂಕದ ಯಂತ್ರ. **ಎಲೆಕ್ಟ್ರಾನಿಕ್ ತೂಕದ ಯಂತ್ರ: 01 ನಿಗಧಿಪಡಿಸಿದ ಮಾಸಿಕ ಲೀವ್ ಅಂಡ್ ಲೈಸನ್ಸ್ ಶುಲ್ಕ:** 22,200/– **ಪಾವತಿಸಬೇಕಾದ ಮುಂಗಡ ಠೇವಣಿ:** 44,400/–

ಷರತ್ತು ಹಾಗೂ ನಿಭಂಧನೆಗಳು 1) ದಿ: 28.10.2022 ಒಳಗಾಗಿ ರೂ.500–00 ಗಳನ್ನು ಕಛೇರಿಯಲ್ಲಿ ಪಾವತಿಸಿ ಅರ್ಜಿ ಸಲಿಸಿ ನೋಂದಾವಣೆ ಮಾಡಿಕೊಳ್ಳತಕ್ಕದ್ದು. **2)** ನೋಂದಾವಣೆ ಪಡೆದ ಅರ್ಜಿದಾರರು ನಮೂನೆ 6ರ ಅರ್ಜಿಯನ್ನು ಮುಚ್ಚಿದ ಲಕೋಟೆಯಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿ: 02.12.2022ರ ಮಧ್ಯಾಹ್ನ 12.00 ಗಂಟೆಯವರೆಗೆ. **3)** ಬಹಿರಂಗ ಹರಾಜನ್ನು 02.12.2022 ರಂದು ಮಧ್ಯಾಹ್ನ 3–00 ಗಂಟೆಗೆ ನಂಜನಗೂಡು ಸಮಿತಿಯ ಆಡಳಿತ ಕಛೇರಿಯ ಸಭಾಂಗಣದಲ್ಲಿ ನಡೆಸಲಾಗುವುದು. **4)** ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಂಜನಗೂಡು ಇವರ ಹೆಸರಿನಲ್ಲಿ ಮುಂಗಡ ಠೇವಣಿಯ ಡಿ.ಡಿ.ಯನ್ನು ಖರೀದಿಸಿ ನಂಜನಗೂಡಿನಲ್ಲಿ ನಗದಾಗುವಂತೆ ಪ್ರತ್ಯೇಕ ಲಕೋಟೆಯಲ್ಲಿ ಟೆಂಡರ್ ಪೆಟ್ಟಿಗೆಯಲ್ಲಿ ಹಾಕುವುದು. **5)** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವವರು ಖಡ್ಡಾಯವಾಗಿ ಟೆಂಡರ್ ಹಾಗೂ ಬಹಿರಂಗ ಹರಾಜು ಎರಡರಲ್ಲೂ ಭಾಗವಹಿಸತಕ್ಕದ್ದು, ಒಂದರಲ್ಲಿ ಭಾಗವಹಿಸಿದರೆ ಪರಿಗಣಿಸಲಾಗುವುದಿಲ್ಲ. **6)** ಹೆಚ್ಚಿನ ಷರತ್ತು ಹಾಗೂ ನಿಭಂದನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– (ಮಹೇಶ.ಬಿ)
ಕಾರ್ಯದರ್ಶಿ
ಕೃ.ಉ.ಮಾ.ಸ., ನಂಜನಗೂಡು

ಸಹಿ/– (ಎಂ.ಶಿವಮೂರ್ತಿ)
ಆಡಳಿತಾಧಿಕಾರಿ
ಕೃ.ಉ.ಮಾ.ಸ., ನಂಜನಗೂಡು